ವಿಶ್ವವಾಣಿ
ವಿಶ್ವಾಸವೇ ವಿಶ್ವ

ಗೆಲುವಿನತ್ತ ದ.ಆಫ್ರಿಕಾ ದಿಟ್ಟ ಹೆಜ್ಜೆ

ಐಡೆನ್ ಮಾರ್ಕ್ರಂ ಸಿಡಿಸಿದ ಅಜೇಯ ಶತಕ ಮತ್ತು ನಾಯಕ ಟೆಂಬ ಬಹುಮಾ ಬಾರಿಸಿದ ಅರ್ಧ ಶತಕದ ನೆರವಿನಿಂದ ದ. ಆಫ್ರಿಕಾ ತಂಡವು ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ವಿರುದ್ಧದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಗೆಲುವಿನತ್ತ ದಿಟ್ಟ ಹೆಜ್ಜೆ ಹಾಕಿದೆ.

ವಾ.ಸಾ.ಸಂ.ಇ/ಕಲಬುರಗಿ/207/ಕೆ.ಎಸ್.ಎಂ.ಸಿ.&ಎ/2025-26

ಬಹುಮಹಡಿ ಸಮುಚ್ಚಯದ ಹಕ್ಕುಪತ್ರ ಡಿಸೆಂಬರ್ ಒಳಗೆ

1440 ಗುಂಪು ಮನೆಗಳ ಫಲಾನುಭವಿಗಳಿಗೆ ಸಾಲ ಮೇಳ। ಶಾಸಕ ಟಿ.ಎಸ್.ಶ್ರೀವತ್ಸ

ಮೈಸೂರು: ಕೆ.ಆರ್.ಕ್ಷೇತ್ರದ ಬಡವರು, ಮಧ್ಯಮ ವರ್ಗದ ಫಲಾನುಭವಿಗಳಿಗೆ ಚಾಮುಂಡಿಬೆಟ್ಟದ ತಪ್ಪಲಿನ ಲಲಿತಾದ್ರಿಪುರದಲ್ಲಿ ನಿರ್ಮಾಣವಾಗುತ್ತಿರುವ ಬಹುಮಹಡಿ ವಸತಿ ಸಮುಚ್ಚಯ ಕಾಮಗಾರಿ 2026ರ ಡಿಸೆಂಬರ್‌ಗೆ ಮುಗಿಸಿ ಹಕ್ಕುಪತ್ರ ನೀಡಲಾಗುವುದು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ನಗರದ ಪುರಭವನದಲ್ಲಿ ಕೆ.ಆರ್.ಕ್ಷೇತ್ರದ ಲಲಿತಾದ್ರಿಪುರ 1440 ಗುಂಪು ಮನೆಗಳ ಫಲಾನುಭವಿಗಳಿಗೆ ಆಯೋಜಿಸಿದ್ದ ಸಾಲ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಕೃಷ್ಣರಾಜ ಕ್ಷೇತ್ರದಲ್ಲಿ ವಾಸ ಮಾಡುತ್ತಿರುವ ಬಡವರಿಗೆ ಆಶ್ರಯ ಮನೆಗಳನ್ನು ನೀಡಲು ಅರ್ಜಿ ಆಹ್ವಾನಿಸಲಾಗಿತ್ತು. ಇದರಲ್ಲಿ ಆಯ್ಕೆಯಾದ ಫಲಾನುಭವಿಗಳಲ್ಲಿ 940 ಮಂದಿ ಮಾತ್ರ ಹಣ ಪಾವತಿಸಿದ್ದಾರೆ. ಹಾಗಾಗಿ, ಉಳಿದ 500 ಮನೆಗಳನ್ನು ವರುಣ ಕ್ಷೇತ್ರದ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಮಂಜೂರು ಮಾಡಿ ಯೋಜನೆ ಪೂರ್ಣಗೊಳಿಸಲಾಗುವುದು ಎಂದರು.

ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಪ್ರಧಾನಮಂತ್ರಿ ಆವಾಸ್ ಯೋಜನೆಯ ಮನೆಗಳಲ್ಲಿ ಒಂದು ಮನೆಗೆ 13.44 ಲಕ್ಷ ರೂ. ಆಗಲಿದ್ದು, ಕೇಂದ್ರ, ರಾಜ್ಯ ಸರಕಾರದ ಸಬ್ಸಿಡಿ, ವಂತಿಗೆ ಹಣ ಬಿಟ್ಟು ಉಳಿದ ಹಣಕ್ಕೆ ಸಾಲ ಕೊಡಿಸಲಾಗುವುದು.

ಗುಂಪು ಮನೆಗಳ ಫಲಾನುಭವಿಗಳಿಗೆ ಸಾಲ ಮೇಳವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು.

15 ಹಣಕಾಸು ಸಂಸ್ಥೆಗಳು ಸಾಲ ಕೊಡಲು ಮುಂದಾಗಿದ್ದಾರೆ. ಫಲಾನುಭವಿಗಳು ಹಣ ಕಟ್ಟುವುದು ವಿಳಂಬ ಮಾಡಿದರೆ ಕಟ್ಟಡ ಕಾಮಗಾರಿ ನಿಧಾನವಾಗಿದೆ. ಕಾಮಗಾರಿ ಮುಗಿಯದಿದ್ದರೆ ಹಕ್ಕುಪತ್ರ ಸಿಗುವುದು ತಡವಾಗಲಿದೆ. ಆದ್ದರಿಂದ ಫಲಾನುಭವಿಗಳು ಉಳಿಕೆ ವಂತಿಗೆ ಹಣವನ್ನು ಪಾವತಿಸಬೇಕು ಎಂದು ಸಲಹೆ ನೀಡಿದರು. ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಕುಸುಮಕುಮಾರಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಕೃಷ್ಣಮೂರ್ತಿ, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಫಾರೂಕ್, ಸೋಮಣ್ಣ, ನೀಲಾ ಪಂಪಾವತಿ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಅಧಿಕಾರಿ ವಿಜಯೇಂದ್ರ ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ನಾಳೆ ಕುಸ್ತಿ ಪಂದ್ಯಾವಳಿ

ಮೈಸೂರು: ಪ್ರಕೃತಿ ಫೌಂಡೇಶನ್ ವತಿಯಿಂದ ನಗರದ ದೊಡ್ಡಕೇರಿ ಮೈದಾನದಲ್ಲಿರುವ ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಜೂ.15ರಂದು ಮಧ್ಯಾಹ್ನ 3ಕ್ಕೆ ಕುಸ್ತಿ ಪಂದ್ಯಾವಳಿ ಆಯೋಜಿಸುತ್ತಿದೆ ಎಂದು ಫೌಂಡೇಶನ್‌ನ ಅಧ್ಯಕ್ಷ ಕಿರಣ್‌ಕುಮಾರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂದ್ಯಾವಳಿಯಲ್ಲಿ ಪುರುಷರು ಮತ್ತು ಮಹಿಳೆಯರು ಸೇರಿ 40ಕ್ಕೂ ಹೆಚ್ಚು ಜೋಡಿಗಳು ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಭಾಗವಹಿಸಲಿದ್ದಾರೆ. ವಿಜೇತ ಜೋಡಿಗೆ ಸಂಸದ ಯದುವೀರ್ ಒಡೆಯರ್ ಕಪ್ ವಿತರಿಸಲಿದ್ದಾರೆ. ಕುಸ್ತಿ ವೀಕ್ಷಣೆಗೆ ಪ್ರತಿಯೊಬ್ಬರಿಗೂ ಉಚಿತ ಪ್ರವೇಶವಿದೆ ಎಂದು ತಿಳಿಸಿದರು. ಪಂದ್ಯಾವಳಿ ನೋಂದಣಿಗೆ ಯಾವುದೇ ನೋಂದಣಿ ಶುಲ್ಕ ವಿಧಿಸಿಲ್ಲ ಎಂದು ಹೇಳಿದರು.

ಗ್ರಾಪಂ ಅಧ್ಯಕ್ಷ ಆಯ್ಕೆ

ಬೆಂಗಳೂರು ಉತ್ತರ: ಕಿತ್ತನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನಡೆದ ಸರ್ವ ಸದಸ್ಯರ ಸಮ್ಮುಖದಲ್ಲಿ ಜಿ.ವಿ.ಚಂದ್ರಶೇಖರ್ ನೂತನ ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾದರು. ಒಟ್ಟು 17 ಗ್ರಾಪಂ ಸದಸ್ಯರ ಪಂಚಾಯತಿಯಲ್ಲಿ ಒಮ್ಮತದ ತೀರ್ಮಾನದ ಮೇರೆಗೆ ಚುನಾವಣಾಧಿಕಾರಿ ರೀನಾ ಅವರು ಅಧಿಕೃತ ಘೋಷಣೆ ಮಾಡಿದರು. ಈ ಸಂದರ್ಭದಲ್ಲಿ ದಾಸನಪುರ ಹೋಬಳಿ ಮಂಡಲ ಅಧ್ಯಕ್ಷ ನರಸೇಗೌಡರು ಹಾಗೂ ಗ್ರಾಮ ಪಂಚಾಯತಿ ಸದಸ್ಯರು ಹಾಜರಿದ್ದರು.

ಊರುಗಳ ಇತಿಹಾಸ ತಿಳಿದು ಹೆಸರು ಬದಲಿಸಿ

ಮೈಸೂರು: ತುಘಲಕ್ ಮಾದರಿಯಲ್ಲಿ ಅಧಿಕಾರ ನಡೆಸಲು ಹೊರಟಿದ್ದು, ನಮ್ಮ ನಮ್ಮ ಊರುಗಳ ಇತಿಹಾಸ ತಿಳಿದುಕೊಳ್ಳದೇ ಹೆಸರು ಬದಲಿಸೋದು ಒಳ್ಳೆಯದಲ್ಲ ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತುಮಕೂರು ಜಿಲ್ಲೆಯ ಹೆಸರು ಬದಲಿಸುವ ಕುರಿತು ಮಾತನಾಡಿ, ಉತ್ತರ ಪ್ರದೇಶದ ಮಾದರಿಯಲ್ಲಿ ಹೆಸರು ಬದಲಾವಣೆ ಮಾಡಲು ಸರಕಾರ ಹೊರಟಿದೆ. ರಾಮನಗರ ಜಿಲ್ಲೆಯ ಹೆಸರು ಬದಲಾವಣೆ ಮಾಡಿದ ಕಾರಣ ಇನ್ನೂ ತಿಳಿದಿಲ್ಲ. ಈ ಹಿಂದೆ ಅಲ್ಲಿ ಚರ್ಚ್ ನಿರ್ಮಿಸಬೇಕೆಂದು ಡಿ.ಕೆ. ಶಿವಕುಮಾರ್ ಹೊರಟಿದ್ದರು. ಅದಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು. ತುಮಕೂರಿನ ಸಿದ್ದಗಂಗಾ ಶ್ರೀಗಳನ್ನು ನಡೆದಾಡುವ ದೇವರು ಎನ್ನುತ್ತಾರೆ. ಅಂತಹ ಪುಣ್ಯಸ್ಥಳ ಇರುವ ತುಮಕೂರು ಜಿಲ್ಲೆಯ ಹೆಸರು ಬದಲಿಸೋದು ಒಳ್ಳೆಯದಲ್ಲ. ನಾಳೆ ಮಂಡ್ಯ, ಮೈಸೂರಿನ ಹೆಸರನ್ನೂ ಬದಲಾವಣೆ ಮಾಡಬಹುದು. ಹೆಸರು ಬದಲಿಸುವ ವಿಚಾರದಲ್ಲಿ ತುಮಕೂರು ಜಿಲ್ಲೆಯ ಜನತೆ ಹೋರಾಟ ಮಾಡಬೇಕು. ಸಾರ್ವಜನಿಕರು ಸಹ ಅವರ ಪರವಾಗಿ ನಿಲ್ಲಬೇಕು ಎಂದರು.

ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ಕುರಿತು ಪ್ರತಿಕ್ರಿಯಿಸಿ. 92 ಕೋಟಿ ರೂಪಾಯಿ ಖರ್ಚು ಮಾಡಿ ಕಾವೇರಿ ಆರತಿ ನಡೆಸುವ ಅವಶ್ಯಕತೆ ಇಲ್ಲ. ಈ ಮೂಲಕ ಸರಕಾರ ನಾವು ಹಿಂದೂಗಳ ಪರವಾಗಿದ್ದೇವೆ ಎಂದು ತೋರಿಸಿಕೊಳ್ಳುತ್ತಿದೆ. ಶಾಸಕರ ಕ್ಷೇತ್ರಗಳಲ್ಲಿ ರಸ್ತೆ ಸರಿಪಡಿಸಲು ಹಣವಿಲ್ಲ. ಒಬ್ಬೊಬ್ಬ ಶಾಸಕರು ಕೇವಲ 1 ಕೋಟಿ ಅನುದಾನಕ್ಕೆ ಬೇಡಿಕೊಳ್ಳುತ್ತಿದ್ದೇವೆ. ಈಗಿರುವಾಗ 92 ಕೋಟಿ ಬಳಸುವ ಅವಶ್ಯಕತೆ ಇಲ್ಲ. ಕಾವೇರಿ ಆರತಿ ವಿಚಾರದಲ್ಲಿ ಬಿಜೆಪಿಯವರನ್ನು ಸಭೆಗೆ ಕರೆದಿದ್ದರು. ಕಾವೇರಿ ನದಿಯ ಪಕ್ಕದಲ್ಲಿ ಸ್ವಚ್ಛತೆಯ ವ್ಯವಸ್ಥೆ ಮಾಡಿದರೆ ಅದೇ ಆರತಿ ಮಾಡಿದ ಹಾಗೆ. ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ಮಾಡೋದಕ್ಕೆ ನಮ್ಮ ವಿರೋಧವಿದೆ ಎಂದು ಹೇಳಿದರು.

> **ಅಹಮದಾಬಾದ್ ನಲ್ಲಿ ಸಂಭವಿಸಿದ ವಿಮಾನ ದುರಂತ ಘಟನೆ ಮನಸ್ಸಿಗೆ ಬಹಳ ನೋವು ನೀಡಿದೆ. ದೇಶದಲ್ಲಿ ಇದೊಂದು ದೊಡ್ಡ ದುರಂತ. ಅವರ ಕುಟುಂಬದವರು ಹೇಗೆ ನೋವು ತಡೆದುಕೊಳ್ಳುತ್ತಾರೋ ಗೊತ್ತಿಲ್ಲ. ಆ ಎಲ್ಲಾ ಕುಟುಂಬಗಳಿಗೂ ತಾಯಿ ಚಾಮುಂಡೇಶ್ವರಿ ನೋವನ್ನು ತಡೆದುಕೊಳ್ಳುವ ಶಕ್ತಿ ನೀಡಲಿ. ಪ್ರಕರಣ ಕುರಿತು ತನಿಖೆ ನಡೆದು ಸತ್ಯಾಸತ್ಯತೆ ತಿಳಿಯಲಿದೆ.**
> **-ಟಿ.ಎಸ್.ಶ್ರೀವತ್ಸ, ಶಾಸಕ**

ಅಂಬೇಡ್ಕರ್ ಜಯಂತಿ ಕಾಟಾಚಾರಕ್ಕೆ ಬೇಡ

ಸರಕಾರಿ ಎಸ್ಸಿಎಸ್ಟಿ ನೌಕರರ ಜಿಲ್ಲಾ ಮಟ್ಟದ ಪ್ರಥಮ ಸ್ವಾಭಿಮಾನ ಸಮಾವೇಶದಲ್ಲಿ ನಿವೃತ್ತ ನೌಕರರನ್ನು ಅಭಿನಂದಿಸಲಾಯಿತು.

ರಾಮನಗರ: ಅಂಬೇಡ್ಕರ್ ಜಯಂತಿಯನ್ನು ಕಾಟಾಚಾರಕ್ಕೆ ಆಚರಣೆ ಮಾಡಬೇಡಿ, ಜಯಂತಿ ಮಾಡುವುದಾದರೆ ಏಪ್ರಿಲ್, ಮೇ ತಿಂಗಳಲ್ಲಿ ಮಾಡಿ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ತಿಳಿಸಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದ ದಲಿತ ಕವಿ ಸಿದ್ದಲಿಂಗಯ್ಯ ವೇದಿಕೆಯಲ್ಲಿ ಕರ್ನಾಟಕ ರಾಜ್ಯ ಎಸ್ಸಿಎಸ್ಟಿ ನೌಕರರ ಸಮನ್ವಯ ಸಮಿತಿ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿ ಹಾಗೂ ಎಸ್ಸಿಎಸ್ಟಿ ನೌಕರರ ಜಿಲ್ಲಾ ಮಟ್ಟದ ಪ್ರಥಮ ಸ್ವಾಭಿಮಾನ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಸಂದರ್ಭದಲ್ಲಿ ಆಡಂಬರದ ಮತ್ತು ತೋರಿಕೆಯ ಜಯಂತಿ, ಕಾರ್ಯಕ್ರಮಗಳು, ಸಮಾವೇಶಗಳನ್ನು ಮಾಡುವ ಅಗತ್ಯವಿಲ್ಲ. ಅದು ಬಿಟ್ಟು ವಿಚಾರವಂತಿಕೆ, ಅರಿವು, ಜಾಗೃತಿ, ಸ್ವಾಭಿಮಾನದೊಂದಿಗೆ ನಾವು ಇಂತಹ ಸಮಾರಂಭಗಳನ್ನು ಮಾಡಿದಾಗ ಮಾತ್ರ ಅರ್ಥ ಬರುತ್ತದೆ. ಇಲ್ಲದಿದ್ದರೆ ಅಂಬೇಡ್ಕರ್ ಅವರಿಗೆ ಅಪಚಾರ ಮಾಡಿದಂತಾಗುತ್ತದೆ ಎಂದರು.

ಜಿಲ್ಲೆಯ ಎಸ್ಸಿಎಸ್ಟಿ ನೌಕರರು ಭಾಗವಹಿಸಲು ಅನುಕೂಲವಾಗುವಂತೆ ಒಒಡಿ ನೀಡುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಲಾಗಿತ್ತು. ಆದರೆ, ಜಿಲ್ಲಾಧಿಕಾರಿ ಒಒಡಿ ನೀಡದೆ ದಲಿತ ವಿರೋಧಿ ನೀತಿ ಅನುಸರಿಸಿದ್ದಾರೆ ಎಂದು ಸಮಿತಿ ರಾಜ್ಯಾಧ್ಯಕ್ಷ ಡಿ. ಶಿವಶಂಕರ್ ಮತ್ತು ಜಿಲ್ಲಾಧ್ಯಕ್ಷ ಎಂ.ಎಸ್. ಜಯಪ್ರಕಾಶ್ ಆಕ್ರೋಶ ವ್ಯಕ್ತಪಡಿಸಿದರು.

ಸರಕಾರಿ ನೌಕರರ ಸಂಘದ ಚುನಾವಣೆಯಲ್ಲಿ ಮೀಸಲಾತಿ ಜಾರಿಗೊಳಿಸಬೇಕು. ಆಗ ಮಾತ್ರ ಪರಿಶಿಷ್ಟರಿಗೂ ಸಂಘದಲ್ಲಿ ಅವಕಾಶ ಸಿಗುತ್ತದೆ ಎಂದು ಒತ್ತಾಯಿಸಿದರು.

ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಎಂ.ವಿ. ಶಿವಕುಮಾರ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ. ಸತೀಶ್ ಇತರರು ಇದ್ದರು.

ಅಹಲ್ಯಾದೇವಿ ಮಹಿಳೆಯರಿಗೆ ಸದಾ ಸ್ಫೂರ್ತಿ

ಮೈಸೂರು: ಅಹಲ್ಯಾದೇವಿ ಹೋಳ್ಕರ್ ಕೇವಲ ಮಹಿಳೆಯರಿಗಷ್ಟೇ ಅಲ್ಲ. ಪತಿಯೊಬ್ಬರಿಗೂ ಸ್ಫೂರ್ತಿದಾಯಕ ವ್ಯಕ್ತಿತ್ವದ ಮಹಿಳೆ ಎಂದು ಸ್ತ್ರೀ ಜಾಗೃತಿ ಪತ್ರಿಕೆಯ ಸಂಪಾದಕಿ ಎಚ್.ಜಿ.ಶೋಭಾ ಹೇಳಿದರು.

ನಗರದ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶುಕ್ರವಾರ ನಡೆದ ಲೋಕಮಾತೆ ಅಹಲ್ಯಾದೇವಿ ಹೋಳ್ಕರ್ ಅವರ ಜೀವನಗಾಥೆ ಹಾಗೂ ಸಾಕ್ಷ್ಯಚಿತ್ರ ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಹಲ್ಯಾದೇವಿ ಹೋಳ್ಕರ್ ಮಾಳ್ವ ಪ್ರಾಂತ್ಯದ ರಾಜಮಾತೆಯಾಗಿದ್ದರು. ಅವರ ಸೇವಾಕಾರ್ಯಗಳನ್ನು ಮನಗಂಡು ಇಂದೋರ್‌ನ ವಿಮಾನ ನಿಲ್ದಾಣಕ್ಕೂ, ವಿಶ್ವವಿದ್ಯಾನಿಲಯಕ್ಕೂ ಹಾಗೂ ಮಧ್ಯ ಪ್ರದೇಶದ ಅನೇಕ ಕಡೆಗೆ ಅವರನ್ನು ಹೆಸರನ್ನು ಇಡಲಾಗಿದೆ. ಈಗಲೂ ಅಲ್ಲಿಯ ಪ್ರತಿಯೊಂದು ಮನೆ, ಅಂಗಡಿ, ಇತರೆ ಕ್ಷೇತ್ರದಲ್ಲೂ ರಾಜಮಾತೆ ಅಹಲ್ಯಾದೇವಿ ಹೆಸರನ್ನು ಹೇಳದೆ ಮುಂದಿನ ಕೆಲಸ ಮಾಡುವುದಿಲ್ಲ ಎಂದು ಹೇಳಿದರು.

ರಾಜಕೀಯವಾಗಿ ಅಹಲ್ಯಾದೇವಿ ಸ್ನೇಹಮಯಿಯಾಗಿದ್ದರು. 300 ವರ್ಷದ ಹಿಂದೆ ಇದ್ದ ಬ್ರಿಟಿಷ್ ಆಳ್ವಿಕೆಯ ಕಾಲದಲ್ಲೂ ಬ್ರಿಟಿಷರೂ ಸಹ ಮೆಚ್ಚುವಂತಹ ಕಾರ್ಯಗಳನ್ನು ಮಾಡಿದ್ದರು. ಪ್ರಜೆಗಳನ್ನು ಮಕ್ಕಳಂತೆ ಕಾಣುತ್ತಿದ್ದರು. ಹಿಂದೆ ಕಾಡುಗಳಲ್ಲಿ ಇದ್ದಂತಹ ಕಾಡುಗಳರನ್ನು ಸಚ್ಚಾರಿತ್ರ್ಯ ವ್ಯಕ್ತಿಗಳನ್ನಾಗಿ ರೂಪಿಸಿ ಜೀವನ ಕಟ್ಟಿಕೊಳ್ಳಲು ಜಮೀನನ್ನು ನೀಡಿ ಅವರು ಗೌರವಯುತವಾಗಿ ಬದುಕಲು ಅವಕಾಶ ನೀಡಿದ್ದರು ಎಂದರು.

ಮಹಿಳೆಯರ ಅಭಿವೃದ್ದಿಗಾಗಿ 300 ವರ್ಷಗಳ ಹಿಂದೆಯೇ ಉದ್ಯೋಗ ಸೃಷ್ಟಿಸಲು ಮಹೇಶ್ವರಿ ಸೀರೆ ಎಂಬ ಘಟಕ ಸ್ಥಾಪಿಸಿದ್ದರು. ಮೊದಲ ಬಾರಿಗೆ ವಿಧವಾ ವಿವಾಹ ಮಾಡಿಸಿದ ಕೀರ್ತಿ ಅಹಲ್ಯಾಬಾಯಿ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಹಲ್ಯಾದೇವಿ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ ಕಾರ್ಯಕ್ರಮ ನಡೆಯಿತು.ಚ

ಮೈಸೂರು ವಿವಿ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ ಮಾತನಾಡಿ, ಅಹಲ್ಯಾ ಪದದ ಅರ್ಥ ಲೋಕಮಾತೆ, ಅಪವಿತ್ರಗೊಳಿಸದ ಎಂಬರ್ಥಗಳಿವೆ. ಹೆಸರಿಗೆ ತಕ್ಕಹಾಗೆ ಅಹಲ್ಯಾದೇವಿ ಹೋಳ್ಕರ್ ಬದುಕಿದ್ದರು. ಇವರು ಮಾಡಿದ ಕೆಲಸ ಇಂದಿಗೂ ಉಳಿದಿದೆ ಎಂದರೆ ಅವರ ವ್ಯಕ್ತಿತ್ವವೇ ಕಾರಣ. ಮಹಿಳೆಯರ ಸ್ವಾವಲಂಬನೆಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದರು ಎಂದು ಹೇಳಿದರು.

ಮಹಿಳೆಯರು ನಡೆಸುವ ಆಡಳಿತಕ್ಕೂ, ಪುರುಷರು ನಡೆಸುವ ಆಡಳಿತಕ್ಕೂ ತುಂಬಾ ವ್ಯತ್ಯಾಸಗಳಿವೆ. ಮಹಿಳೆಯರ ಆಡಳಿತ ತುಂಬಾ ಶಾಂತಿಯುತವಾಗಿರುತ್ತದೆ. ಆದರೆ ಪುರುಷರ ಆಡಳಿತ ಆಕ್ರಮಣಕಾರಿಯಾಗಿರುತ್ತದೆ ಎಂದು ತಿಳಿಸಿದರು.

ಮಹಿಳಾ ಸಬಲೀಕರಣಕ್ಕಾಗಿ ಕಾನೂನು

ಮಹಿಳಾ ಸಬಲೀಕರಣಕ್ಕಾಗಿ ಕಾನೂನುಗಳಲ್ಲಿ ಬದಲಾವಣೆ ತಂದರು. ಹಿಂದೆ ಗಂಡ ಸತ್ತುಹೋದರೆ ಆತನ ಆಸ್ತಿಯೆಲ್ಲ ಹೆಂಡತಿಗೆ ಹೋಗುತ್ತಿರಲಿಲ್ಲ. ಅದೆಲ್ಲ ರಾಜನಿಗೆ ಸೇರುತ್ತಿತ್ತು. ಹೀಗಾಗಿ ಆ ಕಾನೂನಿಗೆ ಬದಲಾವಣೆ ತಂದು ಆಸ್ತಿಯಲ್ಲೂ ಹಕ್ಕು ದೊರೆಯುವಂತೆ ಕಾನೂನು ತಂದರು. ಹಿಂದೆ ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಅವಕಾಶ ಇರಲಿಲ್ಲ. ದತ್ತು ಪಡೆಯಲು ಕಾನೂನು ತಂದರು ಎಂದು ಎಚ್.ಜಿ.ಶೋಭಾ ಹೇಳಿದರು.

ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ, ಅತಿಥಿ ಉಪನ್ಯಾಸಕಿ ಡಾ.ಕೆ.ಪಿ.ಲಲಿತಾ ಹಾಜರಿದ್ದರು.

ಮತ್ತೇ ನಾವೇ ಅಧಿಕಾರಕ್ಕೆ: ಶಾಸಕ

ಮೈಸೂರು: ಸಿಎಂ, ಡಿಸಿಎಂ ಹುದ್ದೆಗೆ ಯಾವುದೇ ಸಮಸ್ಯೆ ಇಲ್ಲ. ಮುಂದಿನ ಐದು ವರ್ಷ ನಮ್ಮದೇ ಸರಕಾರ ಇರುತ್ತದೆ. ಮುಂದಿನ ಬಾರಿಯೂ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಶಾಸಕ ಅನಿಲ್ ಚಿಕ್ಕಮಾದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಕಾಲ್ತುಳಿತದ ಬಗ್ಗೆ ಸಿಎಂ, ಡಿಸಿಎಂ ಬಳಿ ಕಾಂಗ್ರೆಸ್ ಹೈಕಮಾಂಡ್ ಮಾಹಿತಿ ಕೇಳಿದ ವಿಚಾರದ ಕುರಿತು ಪ್ರತಿಕ್ರಿಯಿಸಿ, ಅಹಮದಾಬಾದ್‌ನಲ್ಲಿ ವಿಮಾನ ಪತನವಾಗಿ 250ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ. ಇದಕ್ಕೆ ಅಲ್ಲಿನ ಸಿಎಂ ರಾಜೀನಾಮೆ ಕೊಡ್ತಾರಾ? ಇಲ್ಲ ಪ್ರಧಾನಿ ನರೇಂದ್ರ ಮೋದಿ ರಾಜೀನಾಮೆ ಕೊಡ್ತಾರಾ? ನಡೆಯಬಾರದ ಘಟನೆ ನಡೆದಿದೆ. ಇದಕ್ಕೆ ಸರಕಾರವೇ ನೇರ ಹೊಣೆ ಎನ್ನುವುದು ತಪ್ಪು. ವಿಪಕ್ಷಗಳಿಗೆ ಯಾವುದೇ ಕೆಲಸ ಇಲ್ಲ. ಪೊಲೀಸ್ ಇಲಾಖೆಯಲ್ಲಿ ಆದ ಲೋಪ ದೋಷಕ್ಕೆ ನಿರ್ದಾಕ್ಷಿಣ್ಯ ಕ್ರಮಕೈಗೊಂಡಿದೆ. ಇದರಿಂದ ಸಿಎಂ, ಡಿಸಿಎಂ ಹುದ್ದೆಗೆ ಯಾವುದೇ ಸಮಸ್ಯೆ ಆಗುವುದಿಲ್ಲ. ಈಗಾಗಲೇ ಈ ಬಗ್ಗೆ ಸಿಎಂ ಸ್ಪಷ್ಟನೆ ಕೊಟ್ಟಿದ್ದಾರೆ ಎಂದರು.

ಬೆಂಗಳೂರು ಕಮಿಷನರ್ ದಯಾನಂದ್ ಪರ ಸಮುದಾಯದ ನಾಯಕರ ಪ್ರತಿಕ್ರಿಯೆ ಕುರಿತು ಮಾತನಾಡಿ, ದಯಾನಂದರನ್ನು ಕಮಿಷನರ್ ಮಾಡಿದ್ದು ಯಾವ ಸರ್ಕಾರ ಎಂದು ಸಮುದಾಯವರು ತಿಳಿದುಕೊಳ್ಳಬೇಕು. ಹಿಂದುಳಿದ ವರ್ಗದವರನ್ನು ಕಮಿಷನರ್ ಹುದ್ದೆಗೆ ಕೂರಿಸೋದು ಸುಲಭವಲ್ಲ. ಅಂತಹ ಕೆಲಸವನ್ನು ಸಿಎಂ ಮಾಡಿದ್ರು. ಘಟನೆ ವೇಳೆ ಕೆಲ ಲೋಪದೋಷ ಆಗಿರೋದ್ರಿಂದ ಕ್ರಮ ತೆಗೆದುಕೊಂಡಿರುವುದರಲ್ಲಿ ತಪ್ಪಿಲ್ಲ. ಕೇವಲ ನಮ್ಮ ಸಮುದಾಯ ಮಾತ್ರವಲ್ಲ, ಎಲ್ಲಾ ಸಮುದಾಯದ ಅಧಿಕಾರಿಗಳು ಇದ್ದಾರೆ. ನಮ್ಮ ಸಮಾಜವನ್ನು ಮಾತ್ರ ಟಾರ್ಗೆಟ್ ಮಾಡಿಲ್ಲ ಎಂದರು.

ಕಬಿನಿ ಬಲದಂಡೆ ನಾಲೆ ಸೋರಿಕೆ ಕುರಿತು ಪ್ರತಿಕ್ರಿಯಿಸಿ, ರಾಜ್ಯದಲ್ಲಿ ಮೊದಲು ಭರ್ತಿಯಾಗುವ ಜಲಾಶಯ ಕಬಿನಿ. ಈಗಾಗಲೇ ಡ್ಯಾಮ್ ಭರ್ತಿಯಾಗಿ 5 ಸಾವಿರ ಕ್ಯೂಸೆಕ್ ನೀರು ಹೊರ ಬಿಡಲಾಗುತ್ತಿದೆ. ಕಬಿನಿ ಡ್ಯಾಮ್ ಕಾಮಗಾರಿಗೆ 600 ಕೋಟಿ ಅನುದಾನ ಬೇಕಿದೆ. ಈ ಬಗ್ಗೆ ಸಿಎಂ, ಡಿಸಿಎಂ ಬಳಿ ಮನವಿ ಮಾಡಿದ್ದೇನೆ. 130 ಕೋಟಿ ಬಳಿಕ ಮತ್ತೆ 32 ಕೋಟಿ ಅನುದಾನ ಬಿಡುಗಡೆ ಮಾಡಿದ್ದಾರೆ. ಪ್ರತಿಯೊಂದು ಡ್ಯಾಮ್‌ನಲ್ಲೂ ಸೀಪೇಜ್ ಆಗುತ್ತದೆ. ಸೀಪೇಜ್ ತಡೆಯಲು ಶೀಘ್ರದಲ್ಲೇ ಕಾಮಗಾರಿ ಕೈಗೊಳ್ಳುತ್ತೇವೆ.

ನಾಳೆ ವೃಕ್ಷ ಟ್ರಸ್ಟ್ ಉದ್ಘಾಟನೆ

ಮೈಸೂರು: ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಜೂ.15ರಂದು ಸಂಜೆ 4 ಗಂಟೆಗೆ ವೃಕ್ಷ ಟ್ರಸ್ಟ್ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕ ಕಾರ್ಯದರ್ಶಿ ಪಿ.ಶಾಂತಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ರಂಗ ನಿರ್ದೇಶಕ ಎಚ್.ಎಸ್.ಉಮೇಶ್, ಮೈಸೂರು ವಿ.ವಿ ಮಾಜಿ ಸಿಂಡಿಕೇಟ್ ಸದಸ್ಯ ಈ.ಸಿ.ನಿಂಗರಾಜ್ ಗೌಡ, ರಂಗ ಕಲಾವಿದೆ ಇಂದಿರಾ ನಾಯರ್, ಉದ್ಯಮಿ ಧರ್ಮಪ್ರಸಾದ್ ಪಾಲ್ಗೊಳ್ಳುವರು ಎಂದು ತಿಳಿಸಿದರು.

ಸಂಜೆ 6 ಗಂಟೆಗೆ ವೃಕ್ಷ ಸಂಸ್ಥೆಯ ಅಂಗವಾದ ಪಿನಾಕ ರಂಗತಂಡದಿಂದ ವಿನೋದರಂಗ ಅವರ ನಿರ್ದೇಶನದಲ್ಲಿ ರಾಜಸ್ಥಾನಿ ಜನಪದ ಕಥೆ ಆಧಾರಿತ ಸೂತ್ರದ ಗೊಂಬೆ ನಾಟಕವನ್ನು ತಂಡದ ಸದಸ್ಯರು ಪ್ರದರ್ಶಿಸುವರು. ಈ ನಾಟಕವನ್ನು ನಾ.ರತ್ನ ಅವರಿಗೆ ಸಮರ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ವೃಕ್ಷ ಟ್ರಸ್ಟ್‌ನ ಅಧ್ಯಕ್ಷರಾಗಿ ಕೃತಿಕಾ, ಖಜಾಂಚಿಯಾಗಿ ಮಲ್ಲಪ್ಪ, ಸದಸ್ಯರಾಗಿ ಆನಂದ್ ಕಾರ್ಯ ನಿರ್ವಹಿಸುವರು ಎಂದರು.

ಗೋಷ್ಠಿಯಲ್ಲಿ ಪಿನಾಕ ಸಂಸ್ಥೆಯ ಹೇಮಂತ್, ಶ್ರುತಿ, ಸ್ಫೂರ್ತಿ, ದಿಯಾ ಎಸ್.ಅರಸ್ ಇದ್ದರು.

ನಾಲ್ವಡಿ ಒಡೆಯರ್ ಬಸವಣ್ಣನ ಪ್ರತಿರೂಪ

ಮೈಸೂರು: ನಾಲ್ವಡಿ ಕೃಷ್ಣರಾಜ ಒಡೆಯರ್ ಬಸವಣ್ಣನ ನಿಜವಾದ ಪ್ರತಿರೂಪವಾಗಿದ್ದರು ಎಂದು ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಎಸ್.ಶಿವರಾಜಪ್ಪ ಹೇಳಿದರು.

ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ಶುಕ್ರವಾರ ನಡೆದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮ ದಿನೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮರಂಭದಲ್ಲಿ ಮಾತನಾಡಿದ ಅವರು, ರಾಜನಾಗಿ ಸಾಮಾನ್ಯ ಜನರ ಪ್ರತಿನಿಧಿಯಾಗಿ ಕಾಯಕ ಶಿಲ್ಪಿಯಾಗಿದ್ದರು. ಅಭಿವೃದ್ಧಿಯ ಹರಿಕಾರ. ಸಂಸ್ಕೃತಿ ಉಳಿವಿಗೆ ಶ್ರಮಿಸಿ, ವೈಚಾರಿಕ ನೆಲೆಗಟ್ಟಿನಲ್ಲಿ ಬದುಕಿನುದ್ದಕ್ಕೂ ನಡೆದರು. ಶೋಷಿತರ, ದಮನಿತರ ಪರವಾಗಿದ್ದು, ಕಾಯಕಕ್ಕೆ ಮಹತ್ವ ನೀಡಿದ್ದರು. ಆದರ್ಶ ಅನುಕರಣೀಯ ವ್ಯಕ್ತಿಯಾದರು. ನೂರಕ್ಕೂ ಹೆಚ್ಚಿನ ಯೋಜನೆ ಜಾರಿಗೆ ತಂದಿದ್ದರು ಎಂದು ಸ್ಮರಿಸಿದರು.

ದೇಶದಲ್ಲಿ ಅನೇಕ ಮಹಾರಾಜರಿದ್ದಾರೆ. ಅವರು ನೀಡಿದ ಕೊಡುಗೆ ಎಲ್ಲರಿಗೂ ಗೊತ್ತು. ಅದರೆ, ಸಮಾಜಮುಖಿ, ದೂರದೃಷ್ಟಿ ಕೆಲಸ ಮಾಡಿದವರು ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಅಂತಹವರಲ್ಲಿ ಪ್ರಪಂಚದಲ್ಲಿ ಮೊದಲಿಗರಾಗಿ ಕೃಷ್ಣರಾಜ ಒಡೆಯರ್ ನಿಲ್ಲುವರು. ಅವರನ್ನು ನೆನಪು ಮಾಡಿಕೊಳ್ಳುವುದು ಒಂದು ಸುಯೋಗ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮ ದಿನೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮರಂಭ ನಡೆಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಧಾರ್ಮಿಕ ಕ್ಷೇತ್ರದಲ್ಲಿ ಶ್ರದ್ಧೆಯಿಂದ ಕೆಲಸ ಮಾಡುತ್ತಿರುವರನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು ಸಂತಸ. ಸಮಾಜದ ಹಿರಿಯರನ್ನು ಸತ್ಕರಿಸುವ ಕಾರ್ಯ ಒಳ್ಳೆಯದು. ಈ ನಿಟ್ಟಿನಲ್ಲಿ ಬಸವೇಶ್ವರ ಪ್ರತಿಷ್ಠಾನ ತೊಡಗಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಸಮಾರಂಭದಲ್ಲಿ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಬಿ.ಆರ್.ನಟರಾಜ್ ಜೋಯ್ಸ್ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಪುಷ್ಪನಮನ ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಂ.ಜಿ.ಆರ್.ಅರಸ್ ಮಾತನಾಡಿದರು. ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಇದ್ದರು.

IN THE COURT OF THE CIVIL JUDGE AND J.M.F.C. AT KORATAGERE.
C.MIS.No.139/2025
PETITIONER: Smt.Jayamma w/o Late. Hanumantharaya Aged about 65 years R/o Maragondanaguni, Kolala Hobli, Koratagere Taluk,
V/S
RESPONDENT : Deputy-Tahasildar, Nadakacheri, Kolala Kolala Hobli, Koratagere Taluk.
PUBLIC NOTIFICATION
WHEREAS the petitioners have filed the above petition for obtain the death certificate of his husband by name Hanumantharaya s/o Late. Karerangaiah. He was died on 08/09/2009 at Maragondanaguni Village, Kolala Hobli, Koratagere Taluk. Is there any other L.R.s are here by summoned to appear in the above court in person or by pleader 01/08/2025 to answer to the same falling which the petition will be disposed off export.
By the order of Court
Shirastedar
Civil Judge and JMFC Court at Koratagere.
Advocate for petitioner,
D H Vinod BA LL.B., Koratagere.

IN THE COURT OF THE CIVIL JUDGE AND J.M.F.C. AT KORATAGERE.
C.MIS.No. 138 /2025
PETITIONER: 1. Rangashamaiah S/o Late Hanumanthaiah @ Hanumanthanaika Aged about 55 years. 2. Haumantharaya s/o Late Hanumanthaiah @ Hanumanthanaika Aged about 68 years. 3. Lakshmamma D/o Late.Kareranganaika, Aged about 60 years 4. Nagaraju S/o Late. Kareranganaika Aged about 59 years 5. Jayamma W/o Late Hanumantharaya Aged about 65 years 6. Srirangaiah s/o Late. Kareranganaika, Aged about 53 years, All are residing at Maragondanaguni, Kolala Hobli, Koratagere Taluk,
V/S
RESPONDENT: Deputy-Tahasildar, Nadakacheri, Kolala Kolala Hobli, Koratagere Taluk.
PUBLIC NOTIFICATION
WHEREAS the petitioners have filed the above petition for obtain the death certificate of his grandfather by name Bheemaiah S/o Late Handralu Nayaka died on 19/06/1962 at He nayaka. Late.Handralu Maragondanaguni Village, Kolala Hobli, Koratagere Taluk. Is there any other R.s are here by summoned to appear in the above court in person or by pleader 01/08/2025 to answer to the same falling which the petition will be disposed off export.
By the order of Court
Shirastedar
Civil Judge and JMFC Court at Koratagere.
Advocate for petitioner,
D H Vinod BA LL.B., Koratagere.

IN THE COURT OF THE CIVIL JUDGE & JMFC AT KORATAGERE
C.MIS.No. 142/2025
Petitioners:- 1. Appajirao S/o Late Tulosojirao, a/a 50 years, 2.Gayitri bai D/o Late Tulosojirao, a/a 40 years 3. Gangubai W/o Gangojirao. a/a 36 years, All are r/o Ranojipalya, Holavanahalli Hobli, Koratagere Taluk.
V/S
Respondent:- The Tahasildar The Registar of Birth & death, Koratagere Taluk.
PUBLIC NOTIFICATION
Whereas the petitioners have filed the above petition to obtain the death certificate of the 1st petitioner's father by name Tulosojirao S/o Appojirao died on 03-09-1998 at Koratagere taluk, Holavanahalli Hobli, Ranojipalya. It is hereby notify that whoever has interest or objection to obtain the death certificate of the 1st petitioner father may appear in person or through your advocate on: 01/08/2025 in the above case. Failing which the matter will be herd written mined in your absence.
By the order of Court
Shirastedar
Civil Judge and JMFC Court at Koratagere.
Advocate for petitioner,
D.G.Thimmaraju, Koratagere.

IN THE COURT OF THE CIVIL JUDGE & JMFC AT KORATAGERE
C.MIS.No.123/2025
Petitioners:- 1. Gopakka W/o Late Muddaiah, a/a 70 years, 2.Narasimharaju.D.M. S/o Late Muddaiah, a/a 42 years Both are r/o Jonigarahalli, C.N.Durga Hobli, Koratagere Taluk... Now r/o Dhadighattamadagu, Sasalu Hobli, Doddaballapura Taluk, Bangalore Rural Dist.
V/S
Respondent:- The Deputy-Tahasildar The Registar of Birth & death, Nadakacheri, Thovinakere, Koratagere Taluk.
PUBLIC NOTIFICATION
Whereas the petitioners have filed the above petition to obtain the death certificate of the petitioner's Grand-father by name Putta @ Puttarangaiah S/o Kaluveeraiah died on 10-04-1941 Koratagere taluk, C.N.Durga Hobli, Jonigarahalli. It is hereby notify that whoever has interest or objection to obtain the death certificate of the 2nd petitioner Grand-father may appear in person or through your advocate on: 26/07/2025 in the above case. Failing which the matter will be herd written mined in your absence.
By the order of Court
Shirastedar
Civil Judge and JMFC Court at Koratagere.
Advocate for petitioner,
D.G.Thimmaraju, Koratagere.

IN THE COURT OF THE CIVIL JUDGE & JMFC AT KORATAGERE
C.MIS.No. 125/2025
Petitioner:- Hanumantharayappa.S. S/o Late Sannanarasimhaiah, a/a 58 years, R/o Jonigarahalli, C.N.Durga Hobli, Koratagere Taluk.
V/S
Respondent:- The Deputy-Tahasildar The Registar of Birth & death, Nadakacheri, Thovinakere, Koratagere Taluk.
PUBLIC NOTIFICATION
Whereas the petitioner have filed the above petition to obtain the death certificate of the petitioner's Uncle by name Muddarangaiah S/o Hottegaiah died on 10-02-1985 at Koratagere taluk, C.N.Durga Hobli, Jonigarahalli. It is hereby notify that whoever has interest or objection to obtain the death certificate of the petitioner Uncle may appear in person or through your advocate on: 26/07/2025 in the above case. Failing which the matter will be herd written mined in your absence.
By the order of Court
Shirastedar
Civil Judge and JMFC Court at Koratagere.
Advocate for petitioner,
D.G.Thimmaraju, Koratagere.

IN THE COURT OF THE CIVIL JUDGE & JMFC AT KORATAGERE
C.MIS.No.124 /2025
Petitioners:- 1. Gopakka W/o Late V/S Muddaiah, a/a 70 years, 2. Narasimharaju.D.M. S/o Late Muddaiah, a/a 42 years Both are R/o Jonigarahalli, C.N.Durga Hobli, Koratagere Taluk.. Now r/o Dhadighattamadagu, Sasalu Hobli, Doddaballapura Taluk, Bangalore Rural Dist. V/S
Respondent:- The Deputy-Tahasildar The Registar of Birth & death, Nadakacheri, Thovinakere, Koratagere Taluk.
PUBLIC NOTIFICATION
Whereas the petitioners have filed the above petition to obtain the death certificate of the petitioner's Grand-mother by name Nanjamma w/o Puttarangaiah died on 07-06-1971 at Koratagere taluk, C.N.Durga Hobli, Jonigarahalli. It is hereby notify that whoever has interest or objection to obtain the death certificate of the 2nd petitioner Grand-mother may appear in person or through your advocate on: 26/07/2025 in the above case. Failing which the matter will be herd written mined in your absence.
By the order of Court
Shirastedar
Civil Judge and JMFC Court at Koratagere.
Advocate for petitioner,
D.G.Thimmaraju, Koratagere.

IN THE COURT OF THE CIVIL JUDGE & JMFC AT KORATAGERE
C.MIS.No. 136/2025
Petitioners:- 1. Vidyadhararadhya.J.P. S/o, Late Parameswarappa, 52 years, 2.Rajashekararadhya.J.P. S/o Late Parameswarappa,50 years, 3.Jyoti D/o Late Parameswarappa, a/a 45 years Both are R/o Kodlahalli Village, Holavanahalli Hobli, Koratagere Taluk.
V/S
Respondent:- The Tahasildar The Registar of Birth & death, Koratagere taluk.
PUBLIC NOTIFICATION
Whereas the petitioners have filed the above petition to obtain the death certificate of the petitioner's Mother by name Siddagangamma @ Gangambike w/o Parameswarappa died on 20-01-1978 at Koratagere taluk, Holavanahalli Hobli, Huchaveerayyanapalya. It is hereby notify that whoever has interest or objection to obtain the death certificate of the petitioners Mother may appear in person or through your advocate on: 01-08-2025 in the above case. Failing which the matter will be herd written mined in your absence.
By the order of Court
Shirastedar
Civil Judge and JMFC Court at Koratagere.
Advocate for petitioner,
D.G.Thimmaraju, Koratagere.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಾಜ್ಯದ ಪಾಲಿಗೆ ಸಿಎಂ ಹಕ್ಕೊತ್ತಾಯ

ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ಎಲ್ಲ ರಾಜ್ಯಗಳಿಗೂ ನ್ಯಾಯ ಒದಗಿಸಬೇಕು. ತೆರಿಗೆ ಹಂಚಿಕೆ ವೈಜ್ಞಾನಿಕವಾಗಿರಬೇಕು ಹಾಗೂ ಕರ್ನಾಟಕಕ್ಕೆ ವಿಶೇಷ ಅನುದಾನವನ್ನು ನ್ಯಾಯಯುತವಾಗಿ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮ್ಯಯ ಆಗ್ರಹಿಸಿದರು. ದೆಹಲಿಯಲ್ಲಿ ನಡೆದ 16ನೇ ಹಣಕಾಸು ಆಯೋಗದ ಸಭೆಯಲ್ಲಿ ಭಾಗವಹಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 16ನೇ ಹಣಕಾಸಿನ ಆಯೋಗಕ್ಕೆ ಹೆಚ್ಚುವರಿ ಮನವಿಯನ್ನು ಸಲ್ಲಿಸುವುದರೊಂದಿಗೆ ಒಕ್ಕೂಟದ ವ್ಯವಸ್ಥೆಯನ್ನು ಬಲಪಡಿಸಿ ಎಲ್ಲ ರಾಜ್ಯಗಳಿಗೂ ನ್ಯಾಯ ಒದಗಿಸಬೇಕು ಎಂದು ಒತ್ತಿ ಹೇಳಲಾಗಿದೆ. ಯಾರಿಗೂ ಅನ್ಯಾಯವಾಗದ ರೀತಿ ನೋಡಿಕೊಳ್ಳಬೇಕು ಎಂದು ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಸೊಂಪಾದ ಪುಟಗಳು

ಸ್ಲೀಮೆ ಎಣ್ಣೆಯಿಂದ ಅಡುಗೆ ಅನಿಲದವರೆಗಿನ ಹಾದಿ! 6
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ

ಆರೋಗ್ಯವಂತ ಆಗಿರಲು ಹೀಗಿರಲಿ ನೀವಾಡುವ ಮಾತು! 7
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ

ದಾರಿದೀಪೋಕ್ತಿ

ನೀವು ನಿಮ್ಮ ಜೀವನವನ್ನು ಬದಲಿಸುವ ವಿಷಯದಲ್ಲಿ ಗಂಭೀರರಾಗಿದ್ದರೆ, ಖಂಡಿತವಾಗಿಯೂ ಒಂದು ದಾರಿ ತೆರೆದುಕೊಳ್ಳುತ್ತದೆ. ಇಲ್ಲದಿದ್ದರೆ ನಿಮಗೊಂದು ಕುಂಟು ನೆಪ ಸಿಗುತ್ತದೆ. ಯಾವುದೇ ನಿರ್ಧಾರ ನಾವು ಎಷ್ಟು ಬದ್ಧರಾಗಿದ್ದೇವೆ ಎಂಬುದನ್ನು ಆಧರಿಸಿರುತ್ತದೆ.

ವಕ್ರತುಂಡೋಕ್ತಿ

ಪ್ರೀತಿ ಅಂದ್ರೆ ಬೆನ್ನು ನೋವು ಇದ್ದಂತೆ. ಎಕ್ಸ್ ರೇ ಯಂತ್ರಕ್ಕೆ ಕಾಣಿಸುವುದಿಲ್ಲ. ಆದರೆ ಅದು ಇರುವುದು ನಿಮಗೆ ಮಾತ್ರ ಗೊತ್ತಾಗುತ್ತದೆ.

ಕಮಲ್ ವಿವಾದ ಸುಪ್ರೀಂ ನೋಟಿಸ್

ದೆಹಲಿ: ನಟ ಕಮಲ್ ಹಾಸನ್ ಅವರ 'ಥಗ್ ಲೈಫ್' ಚಿತ್ರ ಪ್ರದರ್ಶನದ ಮೇಲೆ ಕರ್ನಾಟಕ ಸರಕಾರ ವಿಧಿಸಿರುವ 'ನ್ಯಾಯಾಂಗೇತರ ನಿಷೇಧ' ವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ಜಾರಿ ಮಾಡಿದೆ. ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಮನ ಮೋಹನ್ ಅವರಿದ್ದ ಪೀಠವು ಈ ವಿಷಯದಲ್ಲಿ ಕರ್ನಾಟಕದ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯ ದರ್ಶಿ (ಗೃಹ) ಮತ್ತು ಪೊಲೀಸ್ ಮಹಾನಿರ್ದೇಶಕರ ಪ್ರತಿಕ್ರಿಯೆಗಳನ್ನು ಕೋರಿದೆ ಮತ್ತು ಮುಂದಿನ ವಿಚಾರಣೆ ಯನ್ನು ಮಂಗಳವಾರಕ್ಕೆ (ಜೂನ್ 17) ಮುಂದೂಡಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ನಾಲ್ವರು ಟಾಪರ್ಸ್

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಫಲಿತಾಂಶ ಪ್ರಕಟಗೊಂಡಿದ್ದು, ನಾಲ್ವರು ವಿದ್ಯಾರ್ಥಿಗಳು 625ಕ್ಕೆ 625 ಅಂಕ ಗಳಿಸಿದ್ದಾರೆ. 11,818 ವಿದ್ಯಾರ್ಥಿಗಳು ಫಲಿತಾಂಶ ಉತ್ತಮಪಡಿಸಿಕೊಳ್ಳಲು ನೋಂದಾಯಿಸಿಕೊಂಡಿದ್ದರು. ಅವರಲ್ಲಿ 6,635 ವಿದ್ಯಾರ್ಥಿಗಳು (ಶೇ.56.14) ತಮ್ಮ ಫಲಿತಾಂಶವನ್ನು ಉತ್ತಮಪಡಿಸಿಕೊಂಡಿದ್ದಾರೆ. 87,330 (ಶೇ.36.5) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಅವರಿಗೆ ಪ್ರಸಕ್ತ ವರ್ಷದಲ್ಲಿಯೇ ಮುಂದಿನ ವ್ಯಾಸಂಗ ಮುಂದುವರಿಸಲು ಅನುಕೂಲವಾಗಿದೆ.

265 ತಲುಪಿದ ಸಾವಿನ ಸಂಖ್ಯೆ | 20 ವೈದ್ಯ ವಿದ್ಯಾರ್ಥಿಗಳು, ಐವರು ಸ್ಥಳೀಯರು ಸಾವು | ದುರಂತ ಸ್ಥಳಕ್ಕೆ ಪ್ರಧಾನಿ

25 ನಾಗರಿಕರೂ ಬಲಿ

ಅಹಮದಾಬಾದ್: ಗುಜರಾತ್‌ನ ಅಹಮದಾಬಾದ್ ವಿಮಾನ ನಿಲ್ದಾಣದ ಬಳಿ ಗುರುವಾರ ಏರ್ ಇಂಡಿಯಾ ವಿಮಾನ ಪತನವಾಗಿರುವ ಘಟನೆಯಲ್ಲಿ ಮೃತರ ಸಂಖ್ಯೆ 265ಕ್ಕೆ ತಲುಪಿದೆ.

ಒಬ್ಬ ಪ್ರಯಾಣಿಕ ಹೊರತುಪಡಿಸಿ ಉಳಿದ ಎಲ್ಲ ಪ್ರಯಾಣಿಕರು ಮತ್ತು ಸಿಬ್ಬಂದಿ ಸೇರಿ 241, ಕಟ್ಟಡದಲ್ಲಿದ್ದ 20 ವಿದ್ಯಾರ್ಥಿಗಳು ಮತ್ತು ಅಪಘಾತದ ಸ್ಥಳದಲ್ಲಿದ್ದ ಮೂವರು ನಾಗರಿಕರು ಸೇರಿದಂತೆ ಒಟ್ಟು 265 ಜನ ಮೃತಪಟ್ಟಿದ್ದಾರೆ. ಎಲ್ಲ ಶವಗಳನ್ನೂ ಮರಣೋತ್ತರ ಪರೀಕ್ಷೆಗಾಗಿ ಅಹಮದಾಬಾದ್ ಸಿವಿಲ್ ಆಸ್ಪತ್ರೆಗೆ ಕಳುಹಿಸಲಾಗಿದೆ. ಈ ಪೈಕಿ ಆರು ಜನರ ಮುಖಗಳು ಹಾಗೆಯೇ ಇದ್ದುದರಿಂದ ಅವರನ್ನು ಮಾತ್ರ ಗುರುತಿಸಲಾಗಿದೆ. ಪ್ರಯಾಣಿಕರು ಗುರುತಿಸ ಲಾಗದಷ್ಟು ಸುಟ್ಟು ಕರಕಲಾಗಿರುವುದರಿಂದ ಇತರರ ಗುರುತುಗಳನ್ನು ಖಚಿತಪಡಿಸಿಕೊಳ್ಳಲು ಡಿಎನ್‌ಎ ಪ್ರೊಫೈಲಿಂಗ್‌ಗೆ ಕಳುಹಿಸಲಾಗಿದೆ. ಡಿಎನ್‌ಎ ಮಾದರಿ ಗಳನ್ನು ಹೊಂದಿಸುವ ಪ್ರಕ್ರಿಯೆ ಪೂರ್ಣಗೊಳಿಸಲು ಸುಮಾರು 72 ಗಂಟೆ ಬೇಕಾಗುತ್ತದೆ. ಹೊಂದಾಣಿಕೆ ಯಾದ ನಂತರ, ಶವಗಳನ್ನು ಮರಣೋತ್ತರ ಪರೀಕ್ಷೆ ನಂತರ ಸಂಬಂಧಿಕರಿಗೆ ಹಸ್ತಾಂತರಿಸಲಾಗುತ್ತದೆ.

ಏರ್‌ಇಂಡಿಯಾ ದುರಂತ

ಎಲ್‌ಐಸಿ ನಿಯಮ ಸಡಿಲಿಕೆ

ಭಾರತೀಯ ಜೀವ ವಿಮಾ ನಿಗಮ ಏರ್ ಇಂಡಿಯಾ ವಿಮಾನ ಅಪಘಾತ ಸಂತ್ರಸ್ತರಿಗೆ ಕ್ಲೈಮ್ ಸೆಟಲ್ಮೆಂಟ್ ಪ್ರಕ್ರಿಯೆಯನ್ನು ಸಡಿಲಗೊಳಿಸಿದೆ ಮತ್ತು ಪ್ರಕ್ರಿಯೆಯನ್ನು ತ್ವರಿತಗೊಳಿಸಿರುವುದಾಗಿ ತಿಳಿಸಿದೆ. ಮರಣ ಪ್ರಮಾಣಪತ್ರಗಳಿಗೆ ಬದಲಾಗಿ, ವಿಮಾನ ಅಪಘಾತದಲ್ಲಿ ಮೃತಪಟ್ಟ ಬಗ್ಗೆ ಯಾವುದೇ ಸರಕಾರಿ ದಾಖಲೆಗಳಲ್ಲಿರುವ ಪುರಾವೆಗಳು ಅಥವಾ ಕೇಂದ್ರ/ರಾಜ್ಯ ಸರಕಾರ/ವಿಮಾನಯಾನ ಅಧಿಕಾರಿಗಳು ಪಾವತಿಸಿದ ಯಾವುದೇ ಪರಿಹಾರವನ್ನು ಸಾವಿನ ಪುರಾವೆಯಾಗಿ ಸ್ವೀಕರಿಸಲಾಗುತ್ತದೆ ಎಂದು ವಿಮಾ ಕಂಪನಿ ತಿಳಿಸಿದೆ.

- ಅಹಮದಾಬಾದ್ ವಿಮಾನ ದುರಂತದಲ್ಲಿ ಮೃತಪಟ್ಟವರಿಗಾಗಿ ಟೆಕ್ ದೈತ್ಯ ಗೂಗಲ್ ತನ್ನ ವೆಬ್‌ಸೈಟ್‌ನ ಮುಖಪುಟದಲ್ಲಿ ಕಪ್ಪು ಬಣ್ಣದ ಪಟ್ಟಿಯಿಟ್ಟು ಸಂತಾಪ ಸೂಚಿಸಿದೆ
- ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಸೆಣಸಾಟ ನಡೆಸುತ್ತಿರುವ ದಕ್ಷಿಣ ಆಫ್ರಿಕಾ-ಆಸ್ಟ್ರೇಲಿಯಾ ಆಟಗಾರರು ಮೌನಾಚರಣೆ ಮೂಲಕ ಮೃತರಿಗೆ ಗೌರವ ಸಲ್ಲಿಸಿದರು

ಮೋದಿ ಭೇಟಿ

ವಿಮಾನ ಅಪಘಾತದ ಸ್ಥಳಕ್ಕೆ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿ ಸುಮಾರು 20 ನಿಮಿಷಗಳ ಕಾಲ ಪರಿಶೀಲಿಸಿದರು. ಬಳಿಕ 25 ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಯ ಸಿ7 ವಾರ್ಡ್‌ಗೆ ಭೇಟಿ ನೀಡಿ ವೈದ್ಯರೊಂದಿಗೆ ಸಂವಾದ ನಡೆಸಿದರು. ಚಿಕಿತ್ಸೆ ಪಡೆಯುತ್ತಿರುವವರನ್ನು ಭೇಟಿ ಮಾಡಿ ಯೋಗಕ್ಷೇಮ ವಿಚಾರಿಸಿದರು. ವಿಮಾನ ಅಪಘಾತದಲ್ಲಿ ಪವಾಡಸದೃಶವಾಗಿ ಬದುಕುಳಿದ ಏಕೈಕ ಪ್ರಯಾಣಿಕ ವಿಶ್ವಾಶ್ ಕುಮಾರ್ ರಮೇಶ್ ಅವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ತನಿಖೆ ಆರಂಭ

ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ದುರಂತ ನಡೆದ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಆರಂಭಿಸಿದ್ದು, ದುರಂತಕ್ಕೆ ಕಾರಣವೇನು ಎಂಬುದರ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ. ನಾಗರಿಕ ವಿಮಾನಯಾನ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ 'ವಿಮಾನ ಅಪಘಾತ ತನಿಖಾ ಸಂಸ್ಥೆ (ಎಎಐಬಿ) ಕೂಡ ಈಗಾಗಲೇ ತನಿಖೆ ಆರಂಭಿಸಿದೆ.

ಥಾಯ್ಲೆಂಡ್‌ನಲ್ಲಿ ತುರ್ತು ಭೂಸ್ಪರ್ಶ

ಅಹ್ಮದಾಬಾದ್‌ನಲ್ಲಿ ವಿಮಾನ ಪತನಕ್ಕೀಡಾದ ಪ್ರಕರಣ ಇನ್ನೂ ಹಸಿರಾಗಿರುವಂತೆಯೇ ಮತ್ತೊಂದು ಏರ್ ಇಂಡಿಯಾ ವಿಮಾನಕ್ಕೆ ಬಾಂಬ್ ಬೆದರಿಕೆ ಬಂದಿದೆ. ಥಾಯ್ಲೆಂಡ್‌ನ ಫುಕೆಟ್ ದ್ವೀಪದಿಂದ ದೆಹಲಿಗೆ ತೆರಳುತ್ತಿದ್ದ ಏರ್ ಇಂಡಿಯಾ ವಿಮಾನಕ್ಕೆ ಬಾಂಬ್ ಬೆದರಿಕೆ ಹಾಕಲಾಗಿದ್ದು, ಥೈಲ್ಯಾಂಡ್‌ನಲ್ಲಿ ತುರ್ತು ಭೂಸ್ಪರ್ಶ ಮಾಡಲಾಗಿದೆ.

ಸುಡದ ಭಗವದ್ಗೀತೆ

ವಿಮಾನ ಅಪಘಾತವಾದ ಸ್ಥಳದಲ್ಲಿ ಮತ್ತೊಂದು ಪವಾಡಸದೃಶ ಘಟನೆ ನಡೆದಿದೆ. ಅವಶೇಷ ಗಳು ಬಿದ್ದ ಸ್ಥಳದಲ್ಲಿ ಎಲ್ಲವೂ ಸುಟ್ಟು ಭಸ್ಮವಾಗಿದ್ದರೆ, ಭಗವದ್ಗೀತೆಯ ಪ್ರತಿಯೊಂದು ಸುಡದೇ ಹಾಗೆಯೇ ಉಳಿದಿರುವುದು ಕಂಡು ಬಂದಿದ್ದು, ಈ ಬಗ್ಗೆ ಈಗ ಎಲ್ಲೆಡೆ ಅಚ್ಚರಿ ವ್ಯಕ್ತವಾಗಿದೆ.

ಬ್ಲ್ಯಾಕ್‌ಬಾಕ್ಸ್ ಪತ್ತೆ

ಗುರುವಾರ ಪತನಗೊಂಡ ಏರ್ ಇಂಡಿಯಾದ ಬೋಯಿಂಗ್ 787-8 ಡ್ರೀಮ್‌ಲೈನರ್ ವಿಮಾನದ ಬ್ಲ್ಯಾಕ್ ಬಾಕ್ಸ್ ಶುಕ್ರವಾರ ಪತ್ತೆಯಾಗಿದೆ. ಮೂಲಗಳ ಪ್ರಕಾರ, ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ)ದ ತಂಡ ವಿಮಾನ ಪತನಗೊಂಡ ಅಹಮದಾಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದ ಮೇಘನೀನಗರ ಪ್ರದೇಶದಲ್ಲಿ ಬ್ಲ್ಯಾಕ್ ಬಾಕ್ಸ್ ಪತ್ತೆ ಮಾಡಿದೆ. ಇದು ವಿಮಾನ ಅಪಘಾತಗಳ ತನಿಖೆಗೆ ಸಹಾಯ ಮಾಡುತ್ತದೆ. ಅಪಘಾತಕ್ಕೆ ತಾಂತ್ರಿಕ ವೈಫಲ್ಯ, ಎಂಜಿನ್ ತೊಂದರೆ ಅಥವಾ ಮಾನವ ದೋಷ ಕಾರಣವಾಗಿದೆಯೇ ಎಂದು ನಿರ್ಧರಿಸಲು ತನಿಖಾಧಿಕಾರಿಗಳು ವಿಮಾನ ಮತ್ತು ಕಾಕ್‌ಪಿಟ್ ಡೇಟಾವನ್ನು ಡಿಕೋಡ್ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಅಹಮದಾಬಾದ್‌ನಲ್ಲಿ ನಡೆದ ವಿಮಾನ ದುರಂತದಿಂದ ನಾವೆಲ್ಲರೂ ತೀವ್ರ ಆಘಾತಗೊಂಡಿದ್ದೇವೆ. ಇಷ್ಟೊಂದು ಹಠಾತ್ ಮತ್ತು ಹೃದಯ ವಿದ್ರಾವಕ ರೀತಿಯಲ್ಲಿ ಹಲವಾರು ಜೀವಗಳನ್ನು ಕಳೆದುಕೊಂಡಿರುವುದು ಪದಗಳಿಗೆ ನಿಲುಕದಷ್ಟು ದೊಡ್ಡ ದುರಂತ. ದುರಂತದಲ್ಲಿ ಬದುಕುಳಿದ ಪ್ರಯಾಣಿಕ ಮತ್ತು ಇತರ ಗಾಯಾಳುಗಳನ್ನು ಭೇಟಿ ಮಾಡಿದ್ದು, ಶೀಘ್ರ ಚೇತರಿಕೆಗೆ ಪ್ರಾರ್ಥಿಸಿದ್ದೇನೆ. ಬಹಳ ವರ್ಷಗಳವರೆಗೆ ಈ ಆಘಾತ ನಮ್ಮನ್ನು ಕಾಡಲಿದೆ.
ನರೇಂದ್ರ ಮೋದಿ ಪ್ರಧಾನಿ

ವಿಮಾನಗಳ ತಪಾಸಣೆ ಹೆಚ್ಚಿಸುವಂತೆ ಆದೇಶ

ವಿಮಾನಯಾನ ಮೇಲ್ವಿಚಾರಣಾ ಸಂಸ್ಥೆ ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಬೋಯಿಂಗ್ 787 ಡ್ರೀಮ್‌ಲೈನರ್ ಜೆಟ್‌ಗಳ ಸುರಕ್ಷತಾ ತಪಾಸಣೆ ಹೆಚ್ಚಿಸುವಂತೆ ಏರ್ ಇಂಡಿಯಾಗೆ ಸೂಚಿಸಿದೆ. ಟಾಟಾ ಗ್ರೂಪ್ ಒಡೆತನದ ಏರ್ ಇಂಡಿಯಾ ವೈಮಾನಿಕ ಸಂಸ್ಥೆಯಲ್ಲಿ 26 ಬೋಯಿಂಗ್ 787-8 ಮತ್ತು 7 ಬೋಯಿಂಗ್ 787-9 ವಿಮಾನಗಳಿವೆ. ಜೆನ್ ಎಕ್ಸ್ ಎಂಜಿನ್‌ಗಳನ್ನು ಹೊಂದಿರುವ ತನ್ನ ಬೋಯಿಂಗ್ 787-8 ಮತ್ತು 787-9 ವಿಮಾನಗಳಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹೆಚ್ಚುವರಿ ನಿರ್ವಹಣಾ ಕ್ರಮಗಳನ್ನು ಕೈಗೊಳ್ಳಲು ಡಿಜಿಸಿಎ ಏರ್ ಇಂಡಿಯಾಕ್ಕೆ ನಿರ್ದೇಶನ ನೀಡಿದೆ.

ವೈಮಾನಿಕ ದಾಳಿಗೆ ಜನರಲ್, 6 ವಿಜ್ಞಾನಿಗಳು ಬಲಿ

ಇರಾನ್ ಮೇಲೆ ಇಸ್ರೇಲ್ ದಾಳಿ

ಜೆರುಸಲೇಂ: 'ಮಧ್ಯ ಪ್ರಾಚ್ಯದಲ್ಲಿ ಭಾರಿ ಸಂಘರ್ಷ ಸಂಭವಿಸುವ ಸಾಧ್ಯತೆ ಇದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ ಬೆನ್ನಲ್ಲೇ, ಇರಾನ್‌ನ ಪರಮಾಣು ಸ್ಥಾವರಗಳು ಮತ್ತು ಮಿಲಿಟರಿ ನೆಲೆಗಳ ಮೇಲೆ ಶುಕ್ರವಾರ 'ರೈಸಿಂಗ್ ಲಯನ್' ಹೆಸರಿನಲ್ಲಿ ಇಸ್ರೇಲ್ ವೈಮಾನಿಕ ದಾಳಿ ನಡೆಸಿದೆ.

ಈ ದಾಳಿಯಲ್ಲಿ ಇರಾನ್‌ನ ಸೇನಾಪಡೆಗಳ ಮುಖ್ಯಸ್ಥ ಮುಖ್ಯಸ್ಥ ಮೊಹಮ್ಮದ್ ಬಘೇರಿ, ಇರಾನ್ ಪರಮಾಣು ಯೋಜನೆಯ ಆರು ವಿಜ್ಞಾನಿಗಳು ಹತರಾಗಿದ್ದಾರೆ ಎಂದು ಇಸ್ರೇಲ್ ಸೇನೆ ಹೇಳಿದೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಮುಖ್ಯಸ್ಥ ಮುಖ್ಯಸ್ಥ ಜನರಲ್ ಹುಸೇನ್ ಸಲಾಮಿ ಹತ್ಯೆಯಾಗಿರುವುದನ್ನು ಇರಾನ್ ದೃಢಪಡಿಸಿದೆ. ಇರಾನ್ ಅಣ್ವಸ್ತ್ರ ಹಾಗೂ ಪರಮಾಣು ಕೇಂದ್ರಗಳನ್ನು ಗುರಿಯಾಗಿಸಿ ಇಸ್ರೇಲ್ ಸರಣಿ ವೈಮಾನಿಕ ದಾಳಿ ನಡೆಸಿದೆ. ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿ, ಎಲ್ಲಾ ದೇಶಗಳ ರಾಯಭಾರ ಕಚೇರಿ ಮುಚ್ಚುವ ಮೂಲಕ ದೀರ್ಘಾವಧಿ ಯುದ್ಧಕ್ಕೆ ಸಿದ್ಧತೆ ನಡೆಸಿರುವ ಸೂಚನೆ ನೀಡಿದೆ.ಇದೇ ವೇಳೆ ಇರಾನ್ ಶುಕ್ರವಾರ ರಾತ್ರಿ, ಇಸ್ರೇಲ್ ಮೇಲೆ ಸರಣಿ ಕ್ಷಿಪಣಿ ದಾಳಿ ಮಾಡಿದೆ. → 4



ಬಘೇರಿ

ಸಲಾಮಿ

ಅಮೆರಿಕದ ಮಾತುಕತೆಯ ಬೇಡಿಕೆಗಳನ್ನು ನಿರಾಕರಿಸುವ ಮೂಲಕ ಇರಾನ್ ದಾಳಿಯನ್ನು ತಾನೇ ಆಹ್ವಾನಿಸಿಕೊಂಡಿದೆ. ಮುಂದಿನ ದಾಳಿ ಇನ್ನೂ ಘೋರವಾಗಿರಲಿದೆ.
-ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ದಾಳಿ ನಿಲ್ಲಲ್ಲ

ಇರಾನ್‌ನ ಅಣ್ವಸ್ತ್ರ ಹಾಗೂ ಮಿಲಿಟರಿ ಭೀತಿಯನ್ನು ನಿರ್ಮೂಲನೆ ಮಾಡುವವರೆಗೂ ಈ ಕಾರ್ಯಾಚರಣೆಯು ಮುಂದುವರಿಯಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಘೋಷಿಸಿದ್ದಾರೆ.

ಆರತಿಕೃಷ್ಣ ಹೊರತು ಮೂವರಲ್ಲಿ ಇಬ್ಬರ ಹೆಸರು ಬದಲಾವಣೆ ನಿರೀಕ್ಷೆ

ರಮೇಶ್‌ಬಾಬು, ಸಾಗರ್, ಅಮೀನ್‌ಮಟ್ಟು ವಿರುದ್ಧ ಪಕ್ಷದಲ್ಲಿ ಭಿನ್ನರಾಗ

ಮೇಲ್ಮನೆ ಪಟ್ಟಿಗೆ ಮತ್ತೆ ಕತ್ತರಿ ಸಂಭವ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ತೆರವಾಗಿರುವ ನಾಲ್ಕು ನಾಮನಿರ್ದೇಶನ ಸ್ಥಾನಕ್ಕೆ ಯಾರು ಅಂತಿಮವಾಗಲಿದ್ದಾರೆ ಎನ್ನುವ ಕುತೂಹಲ ಮುಂದುವರಿದಿದ್ದು, ರಾಜ್ಯಪಾಲರಿಗೆ ರವಾನಿಸಲಾಗಿದೆ ಎನ್ನಲಾದ ಪಟ್ಟಿಯಲ್ಲಿ ಕನಿಷ್ಠ ಇಬ್ಬರ ಹೆಸರು ಬದಲಾಗುವುದು ಬಹುತೇಕ ಖಚಿತ ಎನ್ನುವ ಮಾತುಗಳು ಕೇಳಿಬರುತ್ತಿದೆ.

ವಿಧಾನಪರಿಷತ್‌ನಲ್ಲಿ ತೆರವಾಗಿರುವ ಸ್ಥಾನಗಳಿಗೆ ರಾಜ್ಯ ಸರಕಾರ ನಾಲ್ಕು ಹೆಸರನ್ನು ರಾಜ್ಯಪಾಲರಿಗೆ ಶಿಫಾರಸು ಮಾಡಿತ್ತು. ಎನ್‌ಆರ್‌ಐ ಫೋರಂನ ಉಪಾಧ್ಯಕ್ಷೆ ಆರತಿಕೃಷ್ಣ, ಸಿದ್ದರಾಮಯ್ಯ ಆಪ್ತ ವಲಯದಲ್ಲಿರುವ ದಿನೇಶ್ ಅಮೀನ್‌ಮಟ್ಟು, ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಹಾಗೂ ಡಿ.ಜಿ. ಸಾಗರ್ ಹೆಸರನ್ನು ಶಿಫಾರಸುಗೊಳಿಸಲಾಗಿತ್ತು. ಆದರೆ ಈ ಪಟ್ಟಿಗೆ ತೀವ್ರ ಆಕ್ಷೇಪವ್ಯಕ್ತವಾಗಿದ್ದರಿಂದ ಪಕ್ಷದ ಹೈಕಮಾಂಡ್ ಪಟ್ಟಿಯನ್ನು ಪರಿಷ್ಕರಿಸುವಂತೆ ಸೂಚನೆ ನೀಡಿತ್ತು. ರಾಜ್ಯಪಾಲರಿಗೆ ರವಾನೆಯಾಗಿರುವ ನಾಲ್ಕು ಸ್ಥಾನದ ಪೈಕಿ ಆರತಿಕೃಷ್ಣ ಅವರನ್ನು ಪಕ್ಷದ ಹೈಕ ಮಾಂಡ್ ಕಡೆಯಿಂದ ಒಪ್ಪಿಗೆಯಾಗಿದೆ. → 4

ಆಯ್ಕೆಯ ಹೊಣೆ ರಾಜ್ಯ ನಾಯಕರ ಹೆಗಲಿಗೆ

ನಾಲ್ಕು ಹೆಸರುಗಳ ಪೈಕಿ ಆರತಿ ಕೃಷ್ಣ ಅವರನ್ನು ಪಕ್ಷದ ಹೈಕಮಾಂಡ್ ಅಂತಿಮಗೊಳಿಸಿರುವುದರಿಂದ, ಇನ್ನುಳಿದ ಮೂರರಲ್ಲಿ ಇಬ್ಬರನ್ನು ಬದಲಾಯಿಸಬೇಕು ಎನ್ನುವ ಸ್ಪಷ್ಟ ಸೂಚನೆಯನ್ನು ನೀಡಲಾಗಿದೆ. ಆದರೆ ಯಾರ ಹೆಸರನ್ನು ಅಂತಿಮಗೊಳಿಸಬೇಕು ಎನ್ನುವ ಹೊಣೆಯನ್ನು ರಾಜ್ಯ ನಾಯಕರಿಗೆ ನೀಡಲಾಗಿದೆ. ಯಾರನ್ನು ಬದಲಾಯಿಸಬೇಕು ಎನ್ನುವ ಬಗ್ಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಚರ್ಚಿಸಿ, ನಾಲ್ಕೈದು ಹೆಸರುಗಳನ್ನು ಹೈಕಮಾಂಡ್‌ಗೆ ನೀಡುವಂತೆ ಹೇಳಲಾಗಿದೆ. ಈ ನಾಲ್ಕೈದು ಹೆಸರಲ್ಲಿ ಅಂತಿಮವಾಗಿ ಯಾರನ್ನು ಆಯ್ಕೆ ಮಾಡಬೇಕು ಎನ್ನುವುದನ್ನು ತೀರ್ಮಾನಿಸುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ದ್ವಿತೀಯ ಸಂಚಿಕೆಯತ್ತ ದಾಪುಗಾಲು..

ಪ್ರವಾಸೋದ್ಯಮ ಅಂದ್ರೆ ಕತ್ತಲಲ್ಲಿ ಹುಡುಗಿಗೆ ಕಣ್ಣು ಹೊಡೆದಂತಲ್ಲ!
• ವಿಶ್ವೇಶ್ವರ ಭಟ್

ಸಿಂಗಾಪುರ ಸಿಂಗಾಪುರ ಆದದ್ದು ಹೇಗೆ?
• ಸುಚಿತ್ರಾ ಹೆಗಡೆ

ಎತ್ತಿನಭುಜವೇ ಕೇದಾರನಾಥವಾಯ್ತು!
• ಸುಧೀರ್ ಸಾಗರ

ಓಪನ್ ಚಾಲೆಂಜ್! ಮೊಬೈಲ್ ಫೋನ್ ಇಲ್ಲದೆ ಪ್ರವಾಸ ಮಾಡಬಲ್ಲಿರಾ?
• ನವೀನ್ ಸಾಗರ್

ಇನ್ನೂ ಹತ್ತಾರು ವಿಶೇಷಾತಿ ವಿಶೇಷ ಲೇಖನಗಳು.. ಮಾಹಿತಿಗಳು.. ಅಚ್ಚರಿಗಳು

ಇದೀಗ ಮಾರುಕಟ್ಟೆಯಲ್ಲಿ

ಮುಂಗಾರು ಅಬ್ಬರಕ್ಕೆ ಅಪಾರ ಬೆಳೆ ಹಾನಿ

ಮನೆ ಗೋಡೆ ಕುಸಿದು ವೃದ್ಧೆ ಸಾವು | ಬೆಣ್ಣೆಹಳ್ಳಿಯಲ್ಲಿ ಪ್ರವಾಹ, ಏಳು ಗ್ರಾಮಗಳಲ್ಲಿ ಆತಂಕ

ಬೆಂಗಳೂರು: ರಾಜ್ಯದಲ್ಲಿ ಮಳೆರಾಯನ ಆರ್ಭಟ ಜೋರಾಗಿದ್ದು, ಹಲವೆಡೆ ಅವಾಂತರಗಳು ಸೃಷ್ಟಿಯಾಗಿವೆ. ಗೋಕಾಕ್‌ನಲ್ಲಿ ಮನೆ ಗೋಡೆ ಕುಸಿದು ಓರ್ವ ವೃದ್ಧೆ ಸಾವನ್ನಪ್ಪಿದ್ದರೆ, ತುಂಬಿ ಹರಿಯುತ್ತಿದ್ದ ಹಳ್ಳದಲ್ಲಿ ಆಟೋ ಸಮೇತ ಕೊಚ್ಚಿಕೊಂಡು ಹೋಗುತ್ತಿದ್ದ ಚಾಲಕನನ್ನು ಚಿಕ್ಕಬೂದನೂರಿನ ಗ್ರಾಮಸ್ಥರು ರಕ್ಷಣೆ ಮಾಡಿದ್ದಾರೆ.

ಗೋಕಾಕ ತಾಲೂಕಿನ ಚಿಕ್ಕನಂದಿ ಗ್ರಾಮದಲ್ಲಿ ಮಣ್ಣಿನ ಗೋಡೆ ಕುಸಿದು ಫಕ್ಕೀರವ್ವ ಲಕ್ಷ್ಮಣ ಹಾವೇರಿ (65) ಎಂಬ ವೃದ್ಧೆ ಮೃತಪಟ್ಟಿದ್ದಾರೆ. ಮಣ್ಣಿನಲ್ಲಿ ಸಿಲುಕಿದ್ದ ಫಕ್ಕೀರವ್ವ ಅವರನ್ನು ಸ್ಥಳೀಯರು ಕೂಡಲೇ ಹೊರ ತೆಗೆದಿದ್ದಾರೆ. ಆದರೆ, ಅಷ್ಟರೊಳಗೆ ಅವರ ಪ್ರಾಣಪಕ್ಷಿ ಹಾರಿ ಹೋಗಿತ್ತು. ಮರಣೋತ್ತರ ಪರೀಕ್ಷೆಗೆ ಗೋಕಾಕ್ ಸರಕಾರಿ ಆಸ್ಪತ್ರೆಗೆ ಮೃತದೇಹವನ್ನು ರವಾನಿಸಲಾಗಿದೆ. ಗೋಕಾಕ್ ಗ್ರಾಮೀಣ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಆಟೋ ಚಾಲಕನ ರಕ್ಷಣೆ: ಅದೇ ರೀತಿ, ಯರಗಟ್ಟಿ ತಾಲೂಕಿನ ಚಿಕ್ಕಬೂದನೂರ ಗ್ರಾಮದ ಹೊರ ವಲಯದಲ್ಲಿ ಗುರುವಾರ ರಾತ್ರಿ ತುಂಬಿ ಹರಿಯುತ್ತಿದ್ದ ಹಳ್ಳದಲ್ಲಿ ಆಟೋ ದಾಟಿಸುವಾಗ ನೀರಿನ ರಭಸಕ್ಕೆ ಆಟೋ ಸಮೇತ ಚಾಲಕ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ, ಕೂಡಲೇ ಗ್ರಾಮಸ್ಥರು ಹಗ್ಗ ಹರಿ ಬಿಟ್ಟು ಚಾಲಕನನ್ನು ರಕ್ಷಿಸಿದ್ದಾರೆ. ಸ್ಥಳೀಯರ ಸಮಯ ಪ್ರಜ್ಞೆಯಿಂದ ಒಂದು ಜೀವ ಬದುಕಿತು. ಮುರಗೋಡ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಬೆಣ್ಣೆಹಳ್ಳ ಪ್ರವಾಹ, ಏಳು ಹಳ್ಳಿ ಗ್ರಾಮಸ್ಥರಲ್ಲಿ ಆತಂಕ: ಮುಂಗಾರು ಮಳೆಯಿಂದಾಗಿ ಬೆಣ್ಣೆ ಹಳ್ಳ ತನ್ನ ರೌದ್ರ ನರ್ತನ ತೋರುವ ಮೂಲಕ ನರಗುಂದ ತಾಲೂಕಿನ 7 ಹಳ್ಳಿಗಳ ಗ್ರಾಮಸ್ಥರನ್ನು ಗುರುವಾರ ಆತಂಕಕ್ಕೆ ದೂಡಿದೆ. ಗುರುವಾರ ಸಂಜೆ ಸುರಿದ ಮಳೆಯ ನೀರು ಮನೆ, ಶಾಲೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಸಿದೆ. ಇದರಿಂದಾಗಿ ಜನರು ಮನೆ ತೊರೆದು ನೆರೆಹೊರೆಯವರ ಮನೆಯಲ್ಲಿ ಬೀಡು ಬಿಡುವಂತಾಗಿದೆ. ಬೆಣ್ಣೆ ಹಳ್ಳ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಯಾವಗಲ್ ಬಳಿಯ ಸೇತುವೆ ಮುಳುಗಿದೆ. ಇದರಿಂದ ನರಗುಂದ-ರೋಣ ಮಾರ್ಗ ಸ್ಥಗಿತಗೊಂಡಿದ್ದು, ಪ್ರಯಾಣಿಕರು ಪರದಾಡುವಂತಾಗಿದೆ. ಬೆಣ್ಣೆ ಹಳ್ಳದ ಪ್ರವಾಹದಿಂದ ಸುರಕೋಡ, ಕುರ್ಲಗೇರಿ, ಗಂಗಾಪುರ, ಖಾನಾಪುರ, ಹದಲಿ, ಬನಹಟ್ಟಿ, ಮೂಗನೂರ ಗ್ರಾಮಗಳ ಜನರು ತೀವ್ರ ಆತಂಕಗೊಂಡಿದ್ದಾರೆ.

ಜಲಾವೃತಗೊಂಡ ಶಾಲಾ ಆವರಣ.

ಕಾರವಾರದಲ್ಲಿ ಕುಸಿದ ಗುಡ್ಡ

ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಕಳೆದ ಎರಡು ದಿನದಿಂದ ಸುರಿದ ಅಬ್ಬರದ ಮಳೆಗೆ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಗುಡ್ಡ ಕುಸಿತವಾಗಿದ್ದು, ಹೆದ್ದಾರಿಯ ಒಂದು ಭಾಗದ ಸಂಚಾರ ಬಂದ್ ಮಾಡಲಾಗಿದೆ. ಕಾರವಾರ ನಗರದ ಟನಲ್ ಭಾಗ, ಬಿಣಗಾದ ಹೆದ್ದಾರಿ ಭಾಗದ ಮೂರು ಕಡೆಗಳಲ್ಲಿ ಗುಡ್ಡ ಕುಸಿತ ಸಂಭವಿಸಿದೆ. ಗೋವಾ-ಕಾರವಾರ- ಮಂಗಳೂರು ಹೆದ್ದಾರಿ 66 ಒಂದು ಭಾಗದ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ. ಕಾರವಾರದಿಂದ ರಾಷ್ಟ್ರೀಯ ಹೆದ್ದಾರಿಯ 19 ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಜಿಲ್ಲಾಡಳಿತ ನಿರ್ಬಂಧ ವಿಧಿಸಿದೆ. ಎಚ್ಚರಿಕೆ ಯಿಂದ ಸಂಚರಿಸಲು ವಾಹನ ಸವಾರರಿಗೆ ಸೂಚನೆ ನೀಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂಗಾರು ಅಬ್ಬರ ಜೋರಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಕೊಚ್ಚಿ ಹೋಗಿದ್ದ ವ್ಯಕ್ತಿಯ ಶವ ಪತ್ತೆ

ಹುಬ್ಬಳ್ಳಿ ನಗರದಾದ್ಯಂತ ಬುಧವಾರ ರಾತ್ರಿಯವರೆಗೂ ಸುರಿದ ಭಾರೀ ಮಳೆಗೆ ಚರಂಡಿಯಲ್ಲಿ ಕೊಚ್ಚಿ ಹೋಗಿದ್ದ ಬೈಕ್ ಸವಾರನ ಮೃತದೇಹ ಪತ್ತೆಯಾಗಿದೆ. ನಗರದ ಬೀರಬಂದ ನಗರದ ನಿವಾಸಿ ಹುಸೇನ್ಸಾಬ್ ಕಳಸ (58)

ಕೊಚ್ಚಿಹೋಗಿದ್ದ ವ್ಯಕ್ತಿ. ವಿಷಯ ತಿಳಿಯುತ್ತಿದಂತೆ ಸ್ಥಳಕ್ಕೆ ಬಂದ ಅಗ್ನಿಶಾಮಕ ದಳ, ಪೊಲೀಸ್, ಪಾಲಿಕೆ ಹಾಗೂ ತಾಲೂಕು ಆಡಳಿತ ಸಿಬ್ಬಂದಿ ಧಾವಿಸಿ ನಿರಂತರ ಕಾರ್ಯಾಚರಣೆ ನಡೆಸಿದ್ದರು. ಶುಕ್ರವಾರ ಮಧ್ಯಾಹ್ನದ ವೇಳೆ ಘಟನೆ ನಡೆದ ಸ್ಥಳದಿಂದ ಒಂದೂವರೆ ಕಿಮೀ ದೂರದ ಹಳ್ಳದಲ್ಲಿ ಮೃತದೇಹ ಪತ್ತೆಯಾಗಿದೆ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಕೆಎಂಸಿಆರ್‌ಐಗೆ ರವಾನಿಸಿದ್ದು, ಬಳಿಕ ಕುಟುಂಬಕ್ಕೆ ಹಸ್ತಾಂತರ ಮಾಡಲಿದ್ದಾರೆ.

ಶಾಲೆಗೆ ನುಗ್ಗಿದ ನೀರು

ದಾವಣಗೆರೆ ಜಿಲ್ಲೆಯಲ್ಲಿ ಬಿಟ್ಟು ಬಿಡದೆ ಮಳೆ ಸುರಿಯುತ್ತಿದ್ದು, ಹಲವು ಅವಾಂತರಗಳಾಗಿವೆ. ಮಳೆಯ ಹೊಡೆತಕ್ಕೆ ಜನಜೀವನ ಅಸ್ತವ್ಯಸ್ತವಾಗಿವೆ. ಮಕ್ಕಳು ಶಾಲೆಗೆ ತೆರಳದಂತಾಗಿದೆ. ಚನ್ನಗಿರಿ ತಾಲೂಕಿನ ಬಸವಪಟ್ಟಣ ಹೋಬಳಿಯ ಯಲೋದಹಳ್ಳಿ ಗ್ರಾಮದ ಪ್ರೌಢಶಾಲೆಯ ತಡೆಗೋಡೆ ಕಳಚಿಬಿದ್ದಿದೆ. ಪರಿಣಾಮ ಭಾರೀ ಪ್ರಮಾಣದ ನೀರು ಶಾಲೆಯ ಆವರಣ ಮತ್ತು ಕೊಠಡಿಗಳಿಗೆ ನುಗ್ಗಿದೆ. ಶಾಲೆಯ ಮೈದಾನ ಮತ್ತು ಕೊಠಡಿಗಳು ಜಲಾವೃತಗೊಂಡಿದ್ದು, ಮುಂಜಾಗ್ರತಾ ಕ್ರಮವಾಗಿ ಎಲ್ಲ ಮಕ್ಕಳನ್ನು ಶಿಕ್ಷಕರು ಮನೆಗೆ ಕಳುಹಿಸಿದ್ದಾರೆ.

ವಿಜಯನಗರ ಜಿಲ್ಲೆಯಲ್ಲಿ 35 ಹೆಕ್ಟೇರ್ ಬೆಳೆ ಹಾನಿ

ವಿಜಯನಗರ ಜಿಲ್ಲೆಯಲ್ಲಿ ಗುರುವಾರ ಸುರಿದ ಜೋರು ಮಳೆಗೆ 35 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ಎರಡು ಮನೆಗಳು ಧರೆಗುರುಳಿವೆ. ಮಳೆಗೆ ಕಮಲಾಪುರ ಕೆರೆ ಕೋಡಿ ಬಿದ್ದಿದ್ದು, ರೈತರ ಗದ್ದೆಗಳಿಗೆ ನೀರು ನುಗ್ಗಿದೆ. ಹರಪನಹಳ್ಳಿಯಲ್ಲಿ 20 ಹೆಕ್ಟೇರ್ ಮೆಕ್ಕೆಜೋಳ ಮತ್ತು ರಾಗಿ ಬೆಳೆ ಹಾನಿಗೀಡಾಗಿದ್ದರೆ, ಕೊಟ್ಟೂರಿನಲ್ಲಿ 15 ಹೆಕ್ಟೇರ್ ಮೆಕ್ಕೆಜೋಳ ಬೆಳೆ ಹಾನಿಯಾಗಿದೆ. ಹಂಪಿ, ಕಮಲಾಪುರ ಪ್ರದೇಶದಲ್ಲಿ ಬಾಳೆ, ಕಬ್ಬು ಹಾಗೂ ಭತ್ತದ ಗದ್ದೆಗಳಿಗೆ ನೀರು ನುಗ್ಗಿದೆ. ನಗರದ ತಗ್ಗು ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿದೆ. ರಸ್ತೆಗಳಲ್ಲಿ ನೀರು ನಿಂತಿದೆ. ಮಳೆ ನೀರು ನಿಂತು ಜನರು ಪರದಾಡುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

15ರಿಂದ ಭಾರಿ ವಾಹನಗಳ ಸಂಚಾರ ನಿಷೇಧ

ಮುಂಗಾರು ಮಳೆ ಆರಂಭವಾಗಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಆಗುಂಬೆ ಘಾಟಿಯಲ್ಲಿ ಜೂ.15ರಿಂದ ಸೆಪ್ಟೆಂಬರ್ 30ರವರೆಗೆ ಭಾರಿ ವಾಹನಗಳ ಸಂಚಾರ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ. ಭಾರೀ ವಾಹನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸುವಂತೆ ಆದೇಶಿಸಲಾಗಿದೆ. ಉಡುಪಿಯಿಂದ ತೀರ್ಥಹಳ್ಳಿಗೆ ಸಂಚರಿಸುವ ಭಾರಿ ವಾಹನಗಳು ಬದಲಿ ಮಾರ್ಗವಾಗಿ ಉಡುಪಿ-ಕುಂದಾಪುರ-ಸಿದ್ದಾಪುರ-ಮಾಸ್ತಿಕಟ್ಟೆ-ತೀರ್ಥಹಳ್ಳಿ ಮಾರ್ಗವಾಗಿ ಸಂಚರಿಸುವಂತೆ ಜಿಲ್ಲಾಧಿಕಾರಿಗಳ ಆದೇಶದಲ್ಲಿ ತಿಳಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ನನಗೂ ಸಚಿವನಾಗುವ ಆಸೆಯಿದೆ

ಯಾದಗಿರಿ: ಒಬ್ಬ ಸಾಮಾನ್ಯ ಕಾಂಗ್ರೆಸ್ ಕಾರ್ಯಕರ್ತನಾಗಿ ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿರುವ ನನಗೂ ಸಚಿವನಾಗುವ ಆಸೆಯಿದೆ ಎಂದು ಕೆ.ಕೆ.ಆರ್.ಡಿ.ಬಿ ಅಧ್ಯಕ್ಷ ಡಾ.

ಅಜಯ್‌ಸಿಂಗ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ತಂದೆಯವರಾದ ಮಾಜಿ ಮುಖ್ಯಮಂತ್ರಿ ದಿ. ಧರಂ ಸಿಂಗ್ ಅವರು ಹಾಕಿಕೊಟ್ಟ ಹಾದಿಯಲ್ಲಿ ನಡೆಯುತ್ತಿದ್ದೇನೆ. ನಾನು ಸಹ ಮಂತ್ರಿಯಾಗುವ ಬಯಕೆ ಹೊಂದಿದೆ . ಆದರೀಗ ಕೆಕೆಆರ್‌ಡಿಬಿ ಅಧ್ಯಕ್ಷ ಸ್ಥಾನ ನೀಡಲಾಗಿದೆ ಎನ್ನುವ ಮೂಲಕ ಸಚಿವಗಿರಿ ರೇಸ್‌ಲ್ಲಿ ನಾನು ಒಬ್ಬ ಎನ್ನುವುದನ್ನು ಬಹಿರಂಗಗೊಳಿಸಿದ್ದಾರೆ. ಪಕ್ಷ ನನಗೆ ನೀಡಿದ ಜವಾಬ್ದಾರಿಯನ್ನು ನಿಭಾಯಿಸಿ, ಪಕ್ಷದ ಆದೇಶ ಪಾಲಿಸಬೇಕಾಗುತ್ತದೆ. ನನಗೂ ಒಂದು ಅವಕಾಶ ಬಂದೇ ಬರುತ್ತದೆ ಎಂದು ಅಜಯಸಿಂಗ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇನ್ನು ಸರಕಾರದಿಂದ ಕೊಟ್ಟ ಮಾತಿನಂತೆ ಈಗಾಗಲೇ ಮಂಡಳಿಗೆ 3500 ಕೋಟಿ ರು. ಅನುದಾನ ಬಂದಿದೆ. ಪ್ರಜಾಸೌಧ, ಅಕ್ಷರ ಅವಿಷ್ಕಾರ, ಆರೋಗ್ಯ ಆವಿಷ್ಕಾರ ಸೇರಿದಂತೆ ವಿವಿಧ ಹೊಸ ಆಲೋಚನೆಯ ಕೆಲಸಗಳು ಕೈಗೊಳ್ಳಲಾಗುತ್ತಿದೆ ಎಂದರು.

ಹಸುವಿನ ಕೆಚ್ಚಲನ್ನು ಕತ್ತರಿಸಿದ ದುಷ್ಟರು

ಬಾಗಲಕೋಟೆ: ಮನೆಯ ಮುಂದೆ ಕಟ್ಟಿದ್ದ ಹಸುವಿನ ಕೆಚ್ಚಲೊಂದನ್ನು ಕೊಯ್ದ ಘಟನೆ ಜಿಲ್ಲೆಯ ಬಾದಾಮಿ ತಾಲೂಕಿನ ಕುಳಗೇರಿ ಗ್ರಾಮದಲ್ಲಿ ಜರುಗಿದೆ. ಕುಳಗೇರಿ ಗ್ರಾಮದ ಮೇಟಿ ಬಡಾವಣೆಯ ಬರಮಪ್ಪ ಎಂಬುವರ ಕೊಟ್ಟಿಗೆಯಲ್ಲಿ ಗರ್ಭಾವಸ್ಥೆಯಲ್ಲಿದ್ದ ಕಟ್ಟಿದ್ದ ಆಕಳ ಕೆಚ್ಚಲೊಂದನ್ನು ದುರುಳರು ಕೊಯ್ದು ವಿಕೃತಿ ಮೆರೆದಿದ್ದು, ಕೊಟ್ಟಿಗೆ ಕೆಲಸ ಮಾಡುವ ಘಟನೆ ಗಮನಕ್ಕೆ ಬಂದಿದೆ. ಹಸು ರಕ್ತ ರಕ್ತಸ್ರಾವದಿಂದ ನರಳಾಡಿದ್ದು ಸ್ಥಳಿಯ ಪಶು ಆಸ್ಪತ್ರೆಗೆ ತಂದು ಚಿಕಿತ್ಸೆ ಕೊಡಿಸಲಾಗಿದೆ. ಸ್ಥಳಕ್ಕೆ ಗ್ರಾಮದ ಜನರು ಭೇಟಿ ನೀಡುತ್ತಿದ್ದು ಪಾಪಿಗಳ ಈ ಕೃತ್ಯಕ್ಕೆ ಹಿಡಿಶಾಪ ಹಾಕಿ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ದುಷ್ಕೃತ್ಯ ಎಸಗಿದ ಪಾಪಿಗಳಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.



ಕುಳಗೇರಿ ಗ್ರಾಮದಲ್ಲಿ ಆಕಳಿನ ಕೆಚ್ಚಲನ್ನು ದುರುಳರು ಕತ್ತಿರಿಸಿರುವುದು.

ವಿಮಾನ ದುರಂತಕ್ಕೆ ಕೇಂದ್ರ ಹೊಣೆ

ಕಲಬುರಗಿ: ಅಹ್ಮದಾಬಾದ್‌ನಲ್ಲಿ ನಡೆದಿರುವ ವಿಮಾನ ದುರಂತರ ಹೊಣೆಯನ್ನು ಕೇಂದ್ರ ಸರಕಾರ ಹೊರಬೇಕು ಹಾಗೂ ನೈತಿಕ ಜವಾಬ್ದಾರಿ ಹೊತ್ತು ಸಂಬಂಧಿಸಿ ಸಚಿವರು ರಾಜೀನಾಮೆ ನೀಡಬೇಕು ಎಂದು ಅರಣ್ಯ ಇಲಾಖೆ ಸಚಿವ ಈಶ್ವರ ಖಂಡ್ರೆ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಘಟನೆ ಕುರಿತು ಮಾತನಾಡುವ ಕೆಲವರು ತಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕು. 250ಕ್ಕಿಂತ ಹೆಚ್ಚಿನ ಇಂತಹ ದೊಡ್ಡ ಘಟನೆಗೆ ಕಾರಣ ಯಾರು ಎಂಬುದು ತಿಳಿಯಬೇಕು. ಈ ಹಿಂದೆ ಕುಂಭಮೇಳದಲ್ಲಿ ಉಂಟಾದ ಕಾಲ್ತುಳಿತಕ್ಕೆ ಹೊಣೆ ಯಾರು ಹೊತ್ತಿದ್ದಾರೆ. ಪಹಲ್ಗಾಮ್ ದಾಳಿ ನಡೆಯಿತು. ಬಿಜೆಪಿ ಸರಕಾರ ಕೇಂದ್ರದಲ್ಲಿ ಇರುವಾಗಲೇ ವಿಮಾನ ಅಪಹರಣ ನಡೆಯಿತು ಎಂದು ಕಿಡಿಕಾರಿದರು.

ಇರಾನ್ ಮೇಲೆ ಇಸ್ರೇಲ್ ದಾಳಿ

← ಮೊದಲಪುಟದಿಂದ

ಜಗತ್ತಿನ ಎಲ್ಲ ರಾಯಭಾರ ಕಚೇರಿ ಮುಚ್ಚಿದ ಇಸ್ರೇಲ್: ಇರಾನ್ ಮೇಲೆ ಭಾರಿ ಪ್ರಮಾಣದ ದಾಳಿ ನಡೆಸಿದ ನಂತರ ಜಗತ್ತಿನಾದ್ಯಂತ ಇರುವ ತನ್ನ ರಾಜ ತಾಂತ್ರಿಕ ಕಚೇರಿಗಳನ್ನು ಇಸ್ರೇಲ್ ಮುಚ್ಚಿದೆ. ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿರುವ ತನ್ನ ನಾಗರಿಕರು ಜಾಗರೂಕರಾಗಿರಬೇಕು. ಯಹೂದಿ ಅಥವಾ ಇಸ್ರೇಲ್‌ನ ಯಾವುದೇ ಲಾಂಛನವನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಬಾರದು ಎಂದು ತನ್ನ ನಾಗರಿಕರಿಗೆ ಇಸ್ರೇಲ್ ಹೇಳಿದೆ. ರಾಯಭಾರ ಕಚೇರಿಯ ಯಾವುದೇ ಸೇವೆ ಲಭ್ಯವಾಗುವುದಿಲ್ಲ. ಹೀಗಾಗಿ ಯಾವುದೇ ದಾಳಿ ಎದುರಾದರೂ ತನ್ನ ನಾಗರಿಕರು ಸ್ಥಳೀಯ ಭದ್ರತಾ ಸಿಬ್ಬಂದಿಯೊಂದಿಗೆ ಸಹಕರಿಸಿ ಎಂದು ಎಚ್ಚರಿಕೆ ಸಂದೇಶದಲ್ಲಿ ಹೇಳಿದೆ.

ಜಾಗತಿಕ ಷೇರುಪೇಟೆ ಕುಸಿತ: ಇಸ್ರೇಲ್ ಹಾಗೂ ಇರಾನ್ ಸಂಘರ್ಷದಿಂದಾಗಿ ಅನಿಶ್ಚಿತತೆ ಮುಂದುವರಿದಿದೆ. ದಾಳಿ ಬೆನ್ನಲ್ಲೇ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ ಕಂಡಿದ್ದು, ಜಾಗತಿಕ ಷೇರುಪೇಟೆಯಲ್ಲಿ ಭಾರಿ ಪತನ ದಾಖಲಾಗಿದೆ.

ಹುನಗುಂದ: ಹಳ್ಳದ ನೀರಿನಲ್ಲಿ ನಿಂತ ಬಸ್

ಹುನಗುಂದ: ಶುಕ್ರವಾರ ಸಂಜೆ ಸುರಿದ ಧಾರಾಕಾರ ಮಳೆಗೆ ಪಟ್ಟಣದಿಂದ ಕರಡಿಗೆ ಹೋಗುವ ಮಾರ್ಗದಲ್ಲಿನ ರಾಮವಾಡಗಿ ಹತ್ತಿರದ ಹಳ್ಳಕ್ಕೆ ಅಪಾರ ಪ್ರಮಾಣದ ನೀರು ಹರಿದು ಬಂದಿದೆ. ಇಲ್ಲಿ ದಾಟುವ ವೇಳೆ ನೀರಿನ ಮಧ್ಯದಲ್ಲಿ ಬಸ್ ನಿಂತುಬಿಟ್ಟಿದೆ. ಗ್ರಾಮಸ್ಥರು ಟ್ರ್ಯಾಕ್ಟರ್ ಸಹಾಯದಿಂದ ಬಸ್ ಅನ್ನು ನೀರಿನಿಂದ ಹೊರಗಡೆ ತಂದರು.

ಬೆಂಗಳೂರು– ಚೆನ್ನೈ ಹೆದ್ದಾರಿಯಲ್ಲಿ ಭೀಕರ ಅಪಘಾತ

ಪ್ರತ್ಯೇಕ ಅಪಘಾತ: 7 ಜನರ ಸಾವು

ಬೆಂಗಳೂರು– ಚೆನ್ನೈ ಹೆದ್ದಾರಿಯಲ್ಲಿ ನಡೆದ ಭೀಕರ ರಸ್ತೆ ಅಪಘಾತ.

ಹೊಸಕೋಟೆ: ಬೆಂಗಳೂರು– ಚೆನ್ನೈ ರಾಷ್ಟ್ರೀಯ ಹೆದ್ದಾರಿಯ ಗೊಟ್ಟಿಪುರ ಗೇಟ್ ಬಳಿ ಆಂಧ್ರ ಪ್ರದೇಶ ಸರಕಾರಿ ಸಾರಿಗೆ ಬಸ್ ಮತ್ತು ಲಾರಿ ನಡುವೆ ಶುಕ್ರವಾರ ಬೆಳಗಿನ ಜಾವ ಸಂಭವಿಸಿದ ಅಪಘಾತದಲ್ಲಿ ಒಂದು ವರ್ಷದ ಮಗು ಸೇರಿ ನಾಲ್ವರು ಸಾವನ್ನಪ್ಪಿದ್ದಾರೆ.

ಬಸ್ಸಿನಲ್ಲಿದ್ದ ಕೇಶವರೆಡ್ಡಿ (44), ತುಳಸಿ (21), ಪ್ರಣತಿ (4), 1 ವರ್ಷದ ಮಗು ಸ್ಥಳದಲ್ಲಿಯೇ ಸಾವಿಗೀಡಾಗಿದ್ದಾರೆ. 16 ಪ್ರಯಾಣಿಕರು ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳಿಗೆ ಹೊಸಕೋಟೆಯ ಸಿಲಿಕಾನ್ ಸಿಟಿ ಹಾಗೂ ಎಂವಿಜೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ತಿರುಪತಿಯಿಂದ ಬೆಂಗಳೂರಿಗೆ ತೆರಳುತ್ತಿದ್ದ ಬಸ್, ಲಾರಿಯನ್ನು ಹಿಂದಿಕ್ಕುವ (ಓವರ್ ಟೇಕ್) ಭರದಲ್ಲಿ ಅಪಘಾತ ಸಂಭವಿಸಿದೆ ಎನ್ನಲಾಗಿದೆ. ಹೊಸಕೋಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅದೇ ರೀತಿ ಅಥಣಿ ಪಟ್ಟಣದ ಹೊರವಲಯದಲ್ಲಿ ಗುರುವಾರ ತಡರಾತ್ರಿ, ಭೀಕರ ಅಪಘಾತ ಸಂಭವಿ ಸಿದ್ದು, ಮೂವರು ಸ್ಥಳದಲ್ಲೇ ಮೃತಪಟ್ಟಿರುವ ದುರ್ಘಟನೆ ವಿಜಯಪುರ-ಸಂಕೇಶ್ವರ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದೆ. ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಶಿರೋಳ ತಾಲೂಕಿನ ಗಣೇಶವಾಡಿ ಗ್ರಾಮದ ಮಹೇಶ್ ಸುಭಾಷ್ ಗಾತಾಡೆ (30) ಮತ್ತು ಶಿರೋಳ ತಾಲೂಕಿನ ಪುಡವಾಡ ಗ್ರಾಮದ ಶಿವಂ ಯುವರಾಜ್ ಚವ್ಹಾಣ (24) ಹಾಗೂ ಮಹಾರಾಷ್ಟ್ರ ಸಾಂಗ್ಲಿ ಜಿಲ್ಲೆಯ ಮಿರಜ್ ತಾಲೂಕಿನ ಕವಲಾಪುರ ಗ್ರಾಮದ ಸಚಿನ್ ವಿಲಾಸ್ ಮಾಳಿ (42) ಸ್ಥಳದಲ್ಲೇ ಮೃತಪಟ್ಟ ದುರ್ದೈವಿಗಳಾಗಿದ್ದಾರೆ.

ಈ ಬಗ್ಗೆ ಅಥಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇಲ್ಮನೆ ಪಟ್ಟಿಗೆ ಮತ್ತೆ ಕತ್ತರಿ ಸಂಭವ

← ಮೊದಲಪುಟದಿಂದ

ಆದ್ದರಿಂದ ಅವರ ಹೆಸರನ್ನು ಕೈಬಿಡುವ ಸಾಧ್ಯತೆಯಿಲ್ಲ. ಆದರೆ ಇನ್ನುಳಿದಿರುವ ದಿನೇಶ್ ಅಮೀನ್ ಮಟ್ಟು, ರಮೇಶ್ ಬಾಬು, ಡಿ.ಜಿ. ಸಾಗರ್ ಅವರಲ್ಲಿ ಕನಿಷ್ಠ ಇಬ್ಬರನ್ನು ಬದಲಾಯಿಸಬೇಕು ಎನ್ನುವ ಚರ್ಚೆಗಳು ಶುರುವಾಗಿದೆ. ದೆಹಲಿ ಭೇಟಿಯ ವೇಳೆ ಹೈಕಮಾಂಡ್ ನಾಯಕರೂ ಹೆಸರನ್ನು ಬದಲಾಯಿಸುವಂತೆ ರಾಜ್ಯ ನಾಯಕರಿಗೆ ಸೂಚನೆ ನೀಡಿದ್ದರು. ಆದ್ದರಿಂದ ಇದೀಗ, ಯಾರ ಹೆಸರನ್ನು ಅಂತಿಮಗೊಳಿಸಬೇಕು ಎನ್ನುವ ಗೊಂದಲದಲ್ಲಿ ನಾಯಕರಿದ್ದಾರೆ.

ಈ ನಡುವೆ ನಾಲ್ಕು ವಿಧಾನಪರಿಷತ್ ಸ್ಥಾನಕ್ಕೆ ಕೆಪಿಸಿಸಿ ಅಧ್ಯಕ್ಷರಿಗೆ 200ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಅರ್ಜಿಗಳಲ್ಲಿ 60 ಜನರನ್ನು ಅಂತಿಮಗೊಳಿಸಿ, ಇವರಲ್ಲಿ ನಾಲ್ವರ ಹೆಸರನ್ನು ರಾಜ್ಯಪಾಲರಿಗೆ ರವಾನಿಸಲಾಗಿತ್ತು. ಆದರೀಗ ಆರತಿಕೃಷ್ಣ ಹೊರತುಪಡಿಸಿ ಇನ್ನುಳಿದವರಲ್ಲಿ ಕೆಲ ಬದಲಾವಣೆಯಾಗಬೇಕು ಎನ್ನುವ ಸೂಚನೆಯನ್ನು ದೆಹಲಿ ನಾಯಕರು ನೀಡಿರುವುದರಿಂದ, ಅರ್ಜಿ ಸಲ್ಲಿಸಿರುವ ನಾಯಕರು ಪುನಃ 'ಅದೃಷ್ಟ'ಪರೀಕ್ಷೆಗೆ ಇಳಿದಿದ್ದಾರೆ ಎನ್ನಲಾಗುತ್ತಿದೆ.

ವಿರೋಧಕ್ಕೆ ಕಾರಣವೇನು?

ರಮೇಶ್ ಬಾಬು

- ಮೂಲತಃ ಜೆಡಿಎಸ್ ಪಕ್ಷದವರು; ಅಲ್ಲಿ ಅವಕಾಶ ಸಿಗಲಿಲ್ಲವೆಂದು ಕಾಂಗ್ರೆಸ್‌ಗೆ ಬಂದಿದ್ದಾರೆ
- ಕಾಂಗ್ರೆಸ್ ಸೇರಿ ಐದು ವರ್ಷವೂ ಕಳೆದಿಲ್ಲ; ಈಗಲೂ ಸ್ಥಾನ ನೀಡಿದರೆ ಕಾರ್ಯಕರ್ತರಿಗೆ ಕೆಟ್ಟ ಸಂದೇಶ
- ರಮೇಶ್ ಬಾಬು ಅವರ ವಿರುದ್ಧ ಹಲವು ಆರೋಪಗಳಿವೆ; ಆದ್ದರಿಂದ ಅವರ ಬದಲು ಬೇರೆಯವರಿಗೆ ಅವಕಾಶ ನೀಡಿ

ಡಿ.ಜಿ. ಸಾಗರ್

- ಮೂಲತಃ ಜೆಡಿಎಸ್ ಪಕ್ಷದೊಂದಿಗೆ ಗುರುತಿಸಿಕೊಂಡಿದ್ದರು; ಕೆಲ ವರ್ಷದ ಹಿಂದಷ್ಟೇ ಕಾಂಗ್ರೆಸ್‌ಗೆ ಸೇರ್ಪಡೆ
- 2018ರ ಚುನಾವಣೆಯಲ್ಲಿ ಕಲಬುರಗಿ ಗ್ರಾಮೀಣ ಕ್ಷೇತ್ರದಿಂದ ಕಾಂಗ್ರೆಸ್ ವಿರುದ್ಧವೇ ಸ್ಪರ್ಧಿಸಿ ಸೋತಿದ್ದರು.
- ಪಕ್ಷಕ್ಕಾಗಿ ದುಡಿದ ಅನೇಕರಿದ್ದು, ಅವರಿಗೆ ನೀಡುವ ಬದಲು ಕೆಲ ವರ್ಷದ ಹಿಂದೆ ಬಂದಿರುವ ಸಾಗರ್‌ಗೆ ಅವಕಾಶ ಏಕೆ?

ದಿನೇಶ್ ಅಮೀನುಮಟ್ಟು

- ಈ ಹಿಂದೆ ರಾಹುಲ್, ಸೋನಿಯಾ ಗಾಂಧಿ ಅವರ ವಿರುದ್ಧ ತಮ್ಮ ಬರಹದಲ್ಲಿ ಟೀಕಿಸಿದ್ದಾರೆ
- ತುಮಕೂರಿನಲ್ಲಿ ವರದಿಗಾರರಾಗಿ ಕಾರ್ಯ ನಿರ್ವಹಿಸುವಾಗ ಸುಳ್ಳು ದಾಖಲೆ ನೀಡಿ ಸೈಟ್ ಪಡೆದಿರುವ ಆರೋಪ
- ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರೂ, ಪಕ್ಷದೊಂದಿಗೆ ಹೆಚ್ಚಾಗಿ ಗುರುತಿಸಿಕೊಂಡಿಲ್ಲ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ: ಕಾನಿಇಂ:ಲೋಇ:ವಿಕೊ:ಟೆಂ:KW-1&4:2025–26: 886 ದಿನಾಂಕ:12–06–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

2024–25ನೇ ಸಾಲಿನ ಲೆಕ್ಕ ಶೀರ್ಷಿಕೆ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸಿಡಿಕ್ಯೂ ಮೂಲಭೂತ ಸೌಕರ್ಯ–ಟಿಎಸ್‌ಪಿ, ಸಿಡಿಕ್ಯೂ ಮೂಲಭೂತ ಸೌಕರ್ಯ–ಎಸ್‌ಸಿಪಿ, 8443–ಠೇವಣಿ ವಂತಿಕೆ ಮತ್ತು 2059–80–053–00–200–ಯೋಜನೇತರ ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW-1&4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 6 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ: 21933, 21686, 21474, 21907, 22101 & 0305/Call-2) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **26–06–2025** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **27–06–2025** ಸಮಯ 16.30 ಗಂಟೆ (ವರ್ಕ ಇಂಡೆಂಟ್ ಸಂಖ್ಯೆ: 21933, 21686, 21474, 21907 & 22101) ಆರ್ಥಿಕ ಬಿಡ್ ತೆರೆಯುವ ದಿನಾಂಕ: **27–06–2025** ಸಮಯ 16.30 ಗಂಟೆ (ವರ್ಕ ಇಂಡೆಂಟ್ ಸಂಖ್ಯೆ: 0305/Call-2) ಆರ್ಥಿಕ ಬಿಡ್ ತೆರೆಯುವ ದಿನಾಂಕ: **02–07–2025** ಸಮಯ 16.00 ಗಂಟೆ (ವರ್ಕ ಇಂಡೆಂಟ್ ಸಂಖ್ಯೆ: 21933, 21686, 21474, 21907 & 22101) ಕನಿಷ್ಟ ಅಂದಾಜು ಮೊತ್ತ ರೂ. 10.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ. 999.50 ಲಕ್ಷಗಳು ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/155/ಕೆಎಸ್‌ಎಂಸಿಎ/2025–26

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ ಸಯ್ಯಾಜಿರಾವ್ ರಸ್ತೆ, ಮೈಸೂರು ಇ–ಮೇಲ್– eewmccmys@gmail.com

ಸಂಖ್ಯೆ: ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ–07/2025–26 ದಿನಾಂಕ: 12.06.2025

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
				ಬೆಳಿಗ್ಗೆ 11ರ ನಂತರ	ಸಂಜೆ 5.30 ರವರೆಗೆ	ಸಂಜೆ 5.00 ಬೆಳಿಗ್ಗೆ 10.30
1	ಟೆಂ.ಪ್ರ.ಸಂ:ಕಾ.ಅ (ಪೂ&ಪ)/ಟಿ.ಎನ್ – 15/2025–26, ದಿನಾಂಕ: 10.06.2025	02	155.00	11.06.2025	18.06.2025	20.06.2025
2	ಟೆಂ.ಪ್ರ.ಸಂ:ಕಾ.ಅ (ಪೂ)/ಟಿ.ಎನ್ – 16/2025–26, ದಿನಾಂಕ: 10.06.2025	05	138.45	17.06.2025	02.07.2025	03.07.2025

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂರ್ವ & ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ । ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು (ಪೂರ್ವ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/459/ಎಸ್‌ಎಸ್‌ಸಿ/2025–26

ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ,
ಚಿಕ್ಕಮಗಳೂರು.

ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ :02/2025–26/ ದಿ: 13.06.2025

ಟೆಂಡರ್ ಅಹ್ವಾನ ಪ್ರಕಟಣೆ

ಉಲ್ಲೇಖ:–ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 08/2025–26 ದಿ:06.06.2025
ಮೇಲ್ಕಂಡ ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ವಿಭಾಗಕ್ಕೆ ಒಳಪಡುವ 3054–04–337–1–10–200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ (ಅತಿವೃಷ್ಟಿ) ಲೆಕ್ಕಶೀರ್ಷಿಕೆ ಅಡಿ ಕರೆಯಲಾಗಿರುವ ಕಾಮಗಾರಿ ಕ್ರಮ ಸಂಖ್ಯೆ 4(ಪರಿಶಿಷ್ಟ ಪಂಗಡದವರಿಗೆ ಮೀಸಲು) ಅಂದಾಜು ಮೊತ್ತ ರೂ.100.00 ಲಕ್ಷಗಳು ಕಾಮಗಾರಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವಾಗಿ 18.06.2025 ಎಂದು ನಿಗಧಿಪಡಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರ್ ಸಲ್ಲಿಸುವ ದಿನಾಂಕವನ್ನು ಮುಂದೂಡಲಾಗಿದ್ದು, ದಿನಾಂಕ:21.06.2025 ಎಂದು ಮರು ನಿಗಧಿಪಡಿಸಲಾಗಿದೆ. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25–26/44/423

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ
ಮುಖ್ಯ ಸಂಶೋಧನಾಧಿಕಾರಿಯವರ ಕಛೇರಿ, ತಾಂತ್ರಿಕ ಸೇವಾ ವಿಭಾಗ,
ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃಷ್ಣರಾಜಸಾಗರ.
ಐ.ಎಫ್.ಟಿ ಸಂ:02/2025–26 ದಿ:11.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ತಾಂತ್ರಿಕ ಸೇವಾ ವಿಭಾಗದ ಮುಖ್ಯ ಸಂಶೋಧನಾಧಿಕಾರಿಯವರಿಂದ ಐ.ಎಫ್.ಟಿ. ಸಂ:02/2025–26 ದಿ:11.06.2025 ರಲ್ಲಿ ನಮೂದಿಸಿರುವ "2025–26 ನೇ ಸಾಲಿನ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರಕ್ಕೆ ಹೊರಗುತ್ತಿಗೆ ಆಧಾರದ ಮೇಲೆ Watchman, Data entry operator, lab assistants, driver, gardener, plumber & electrician ಸೇವೆಯನ್ನು ಪಡೆಯುವ ಅಂದಾಜು" ಸೇವೆಗೆ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಸ್ಟಾಂಡರ್ ಟೆಂಡರ್ ಡಾಕ್ಯೂಮೆಂಟ್ ರಲ್ಲಿನ ಷರತ್ತುಗಳಿಗೆ ಅನುಗುಣವಾಗಿ ಆಹ್ವಾನಿಸಲಾಗಿದೆ.
ಟೆಂಡರ್ ದಸ್ತಾವೇಜುಗಳನ್ನು ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 12.06.2025 ರಿಂದ 19.06.2025 ರವರೆಗೆ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಸ್ವೀಕೃತಿ ಅಂತಿಮ ದಿನಾಂಕ: 19.06.2025 ರ ಸಂಜೆ 4.30 ಗಂಟೆವರೆಗೆ. ಟೆಂಡರ್ ತಾಂತ್ರಿಕ ಬಿಡ್‌ಗಳನ್ನು 20.06.2025 ರಂದು ಸಂಜೆ 4:30 ಗಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಅಥವಾ ವೆಬ್ ಸೈಟ್ https://kppp.karnataka.gov.in ಮೂಲಕ ಪಡೆಯಬಹುದಾಗಿದೆ. ವೆಬ್ ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/–ಮುಖ್ಯ ಸಂಶೋಧನಾಧಿಕಾರಿ ತಾಂತ್ರಿಕ ಸೇವಾ ವಿಭಾಗ, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ,
ಕೃಷ್ಣರಾಜಸಾಗರ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/186/2025–26

ಸಮಾಚಾರ ಸಣ್ಣದಲ್ಲ

ಕಟ್ಟಡದಿಂದ ಬಿದ್ದು ವಿದ್ಯಾರ್ಥಿನಿ ಸಾವು

ಮಂಗಳೂರು: ಅಪಾರ್ಟ್‌ಮೆಂಟ್‌ನ 12ನೇ ಮಹಡಿಯಿಂದ ಬಿದ್ದು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಸಾವನ್ನಪ್ಪಿರುವ ಘಟನೆ ಮಂಗಳೂರು ಹೊರವಲಯದ ಕುತ್ತಾರಿನಲ್ಲಿ ನಡೆದಿದೆ. ಕುತ್ತಾರು ನಿವಾಸಿ ಹಾಗೂ ದೇರಳಕಟ್ಟೆಯ ಯೆನಪೋಯ ಆಸ್ಪತ್ರೆಯ ವೈದ್ಯ ಡಾ.ಮುಮ್ತಾಝ್ ಅಹಮ್ಮದ್ ದಂಪತಿಯ ಮಗಳು ಹಿಬಾ ಐಮನ್ (15) ಮೃತ ದುರ್ದೈವಿ. ಕುತ್ತಾರಿನಲ್ಲಿರುವ 18 ಮಹಡಿಯ ಸಿಲಿಕೋನಿಯಾ ಅಪಾರ್ಟ್‌ಮೆಂಟ್‌ನ 12ನೇ ಮಹಡಿಯಿಂದ ಹಿಬಾ ಐಮನ್ ಕೆಳಗೆ ಬಿದ್ದು ಸಾವನ್ನಪ್ಪಿದ್ದಾಳೆ. ಮಹಡಿಯಲ್ಲಿ ಬಟ್ಟೆ ಒಣ ಹಾಕುತ್ತಿದ್ದಾಗ ಘಟನೆ ನಡೆದಿದೆ ಎಂದು ಪೊಲೀಸರು ಪ್ರಾಥಮಿಕ ಮಾಹಿತಿ ನೀಡಿದ್ದಾರೆ. ಹಿಬಾ ಐಮನ್ನ ತಂದೆ, ತಾಯಿ ಇಬ್ಬರೂ ದೇರಳಕಟ್ಟೆ ಯೇನಪೋಯ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದು, ಹೆತ್ತವರು ಕರ್ತವ್ಯಕ್ಕೆ ತೆರಳಿದ್ದಾಗ ಅಪಾರ್ಟ್‌ಮೆಂಟ್‌ನಲ್ಲಿ ಈ ದುರ್ಘಟನೆ ನಡೆದಿದೆ. ಈ ಬಗ್ಗೆ ಉಳ್ಳಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿನಿ ಶವ ಕೆರೆಯಲ್ಲಿ ಪತ್ತೆ

ರಾಮನಗರ: ಪ್ಯಾರಾಮೆಡಿಕಲ್ ವಿದ್ಯಾರ್ಥಿನಿಯು ಸಿಂಗರಾಜಿಪುರ ಕೆರೆಯಲ್ಲಿ ಶವವಾಗಿ ಪತ್ತೆಯಾಗಿರುವ ಘಟನೆ ಚನ್ನಪಟ್ಟಣ ತಾಲೂಕಿನಲ್ಲಿ ನಡೆದಿದೆ. ಮದ್ದೂರು ತಾಲೂಕಿನ ಅಂಬರಹಳ್ಳಿ ಗ್ರಾಮದ ಮಹಾಲಕ್ಷ್ಮೀ (20) ಮೃತ ವಿದ್ಯಾರ್ಥಿನಿ. ರಾಮನಗರದ ಇನ್ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮಾಡ್ತಿದ್ದು, ಗುರುವಾರ ಮಧ್ಯಾಹ್ನದಿಂದ ಕಾಣೆಯಾಗಿದ್ದರು. ಬಳಿಕ ಸಂಜೆಯ ಹೊತ್ತಿಗೆ ಸಿಂಗರಾಜಿಪುರ ಕೆರೆಯ ದಡದಲ್ಲಿ ವಿದ್ಯಾರ್ಥಿನಿಯ ಐಡಿ ಕಾರ್ಡ್, ಬ್ಯಾಗ್ ಪತ್ತೆಯಾಗಿತ್ತು. ಈ ಹಿನ್ನೆಲೆ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಕೆರೆಯಲ್ಲಿ ಹುಡುಕಾಟ ನಡೆಸಿದ್ದರು. ಶುಕ್ರವಾರ ಬೆಳಗ್ಗೆ ಕೆರೆಯಲ್ಲಿ ವಿದ್ಯಾರ್ಥಿನಿ ಶವ ಪತ್ತೆಯಾಗಿದ್ದು, ಆತ್ಮಹತ್ಯೆ ಎಂದು ಶಂಕಿಸಲಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಅಕ್ಕೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೆಂಗಿನ ಮರ ಉರುಳಿಸಿದ ಪುಂಡಾನೆ

ಮಡಿಕೇರಿ: ವಿರಾಜಪೇಟೆಯ ಮಾಲ್ದಾರೆ ಹಾಗೂ ಮಠ ಗ್ರಾಮದಲ್ಲಿ ಕಾರು ಹಾಗೂ ಬೈಕ್ ಮೇಲೆ ಕಾಡಾನೆ ದಾಳಿ ಮಾಡಿ ಸಂಪೂರ್ಣ ಜಖಂಗೊಳಿಸಿದೆ. ಮಠ ಗ್ರಾಮದ ನಿವಾಸಿ ಹೇಮಂತ್ ಅವರ ಮನೆಯ ಸಮೀಪ ನಿಲ್ಲಿಸಿದ್ದ ಕಾರಿನ ಮೇಲೆ ಅಲ್ಲೇ ಇದ್ದ ತೆಂಗಿನ ಮರವನ್ನು ಆನೆ ತಳ್ಳಿ ಹಾಕಿದೆ. ಇದರಿಂದ ಕಾರು ಸಂಪೂರ್ಣ ಜಖಂಗೊಂಡಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ದಕ್ಷಿಣ ಕನ್ನಡ**

ಸಮಸ್ಯೆಯೇನು..?

- ದಕ್ಷಿಣ ಕನ್ನಡ ಜಿಲ್ಲೆಯ, ಬಂಟ್ವಾಳ ತಾಲೂಕಿನ ಕೊಲ್ನಾಡು ಗ್ರಾಮದ ಕಟ್ಟತ್ತಿಲ ಮಠ ಸೇತುವೆ ಸಹಿತ ಕಿಂಡಿ ಅಣೆಕಟ್ಟು ನಿರ್ಮಾಣದ ಬಗ್ಗೆ.
- **ಪರಿಹಾರ:** ಸದರಿ ಸೇತುವೆ ಸಹಿತ ಕಿಂಡಿ ಅಣೆಕಟ್ಟನ್ನು ಅಂದಾಜು ಪಟ್ಟಿಯಲ್ಲಿ ಅನುಮೋದನೆಗೊಂಡ ವಿನ್ಯಾಸದಂತೆ ಯಶಸ್ವಿಯಾಗಿ ನಿರ್ಮಿಸಲಾಗಿದೆ. ರಸ್ತೆ ನಿರ್ಮಾಣ ಕಾಮಗಾರಿಯನ್ನು ಸಂಬಂಧ ಪಟ್ಟ ಇಲಾಖೆಯಿಂದ ನಿರ್ಮಿಸಲು ಕ್ರಮವಹಿಸಲಾಗಿದೆ.

ಟ್ವೀಟೂ-ಖಾರಾ

ಕರ್ನಾಟಕ ಬಿಜೆಪಿ

ಸಿಎಂ ಕುರ್ಚಿ ಉಳಿಸಿಕೊಳ್ಳಲು ಅಹಿಂದ ವರ್ಗಕ್ಕೆ ದ್ರೋಹ ಬಗೆಯಲೂ ನಾನು ಸಿದ್ದ ಎಂಬಂತೆ ಮುಖ್ಯಮಂತ್ರಿಗಳು ನಡೆದುಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಒತ್ತಡಕ್ಕೆ ಸಿಲುಕಿ ಕಾಂತರಾಜು ವರದಿಯನ್ನು ಸಿದ್ದರಾಮಯ್ಯ ಅವರು ಸಮಾಧಿ ಮಾಡಿದ್ದಾರೆ. ಬೆಂಗಳೂರು ಕಾಲ್ತುಳಿತ ಪ್ರಕರಣದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಮುಜುಗರ ಅನುಭವಿಸಿದ ಕಾಂಗ್ರೆಸ್ ಸರಕಾರ, ಅದನ್ನು ಮರೆಮಾಚಲು ಜನಗಣತಿ ವರದಿಯನ್ನು ಮುಂದಿಟ್ಟಿದೆ.

ರಾಜು.ಪಿ

ರೀ...ಈ ಬುಡಂಗಿ ಎಲ್ಲಾ ಬೇಡ . ಅಹಿಂದ ವರ್ಗಕ್ಕೆ ಬಿಜೆಪಿ ಸರಕಾರದ ಕೊಡುಗೆ ಏನು ಹೇಳಿ?. ಬೆಂಕಿ ಹಾಕಿದ ಕಡೆ ಕೈ ಕಾಣಿಸಿಕೊಳ್ಳದೆ. ಕಣ್ಣು ಅರಳಿಸಿ ಒಮ್ಮೆ ನೋಡಿ ಅಹಿಂದ ಬಗ್ಗೆ ಬರೀ ಬುರುಡೆ ಬಿಡೋದು ಬೇಡ . ಇದು ಬಿಜೆಪಿಯ ಅಹಿಂದ ವರ್ಗಕ್ಕೆ ಕೊಡುಗೆಯಾ ?.

ನ್ಯಾಯಯುತವಾಗಿ ಕರ್ನಾಟಕಕ್ಕೆ ವಿಶೇಷ ಅನುದಾನ ನೀಡಲು ಸಿಎಂ ಸಿದ್ದರಾಮಯ್ಯ ಆಗ್ರಹ

ಎಲ್ಲ ರಾಜ್ಯಗಳಿಗೂ ನ್ಯಾಯ ಒದಗಿಸಬೇಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ಎಲ್ಲ ರಾಜ್ಯಗಳಿಗೂ ನ್ಯಾಯ ಒದಗಿಸಬೇಕು. ತೆರಿಗೆ ಹಂಚಿಕೆ ವೈಜ್ಞಾನಿಕವಾಗಿರಬೇಕು ಹಾಗೂ ಕರ್ನಾಟಕಕ್ಕೆ ವಿಶೇಷ ಅನುದಾನವನ್ನು ನ್ಯಾಯಯುತವಾಗಿ ನೀಡಬೇಕು ಎಂದು ಸಿಎಂ ಸಿದ್ದರಾಮ್ಯಯ ಆಗ್ರಹಿಸಿದರು.

ದೆಹಲಿಯಲ್ಲಿ ನಡೆದ 16ನೇ ಹಣಕಾಸು ಆಯೋಗದ ಸಭೆಯಲ್ಲಿ ಭಾಗವಹಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 16ನೇ ಹಣಕಾಸಿನ ಆಯೋಗಕ್ಕೆ ಹೆಚ್ಚುವರಿ ಮನವಿಯನ್ನು ಸಲ್ಲಿಸುವುದರೊಂದಿಗೆ ಒಕ್ಕೂಟದ ವ್ಯವಸ್ಥೆಯನ್ನು ಬಲಪಡಿಸಿ ಎಲ್ಲಾ ರಾಜ್ಯಗಳಿಗೂ ನ್ಯಾಯ ಒದಗಿಸಬೇಕು ಎಂದು ಒತ್ತಿ ಹೇಳಲಾಗಿದೆ. ಯಾರಿಗೂ ಅನ್ಯಾಯವಾಗ ನೋಡಿಕೊಳ್ಳಬೇಕು ಎಂದು ಮನವಿ ಮಾಡಲಾಗಿದೆ ಎಂದು ಸ್ಪಷ್ಟಪಡಿಸಿದರು.

2011-2012ರಲ್ಲಿ ಕರ್ನಾಟಕ ರಾಜ್ಯವು ಜಿಡಿಪಿಗೆ ಶೇ.7ರಷ್ಟು ಕೊಡುಗೆ ನೀಡಿದ್ದರೆ, 2024-25ರಲ್ಲಿ ರಾಜ್ಯವು ದೇಶದ ಒಟ್ಟು ಜಿಡಿಪಿಗೆ ಸುಮಾರು ಶೇ.8.7ರಷ್ಟು ಕೊಡುಗೆ ನೀಡುತ್ತಿದೆ. ಜಿಎಸ್‌ಟಿ ಸಂಗ್ರಹಣೆಯಲ್ಲಿ ನಮ್ಮ ರಾಜ್ಯ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.5 ರಷ್ಟಿದ್ದೇವೆ. 5 ವರ್ಷಗಳಿಗೊಮ್ಮೆ ಹಣಕಾಸಿನ ಆಯೋಗ ರಚನೆಯಾಗುತ್ತದೆ. ಸಂವಿಧಾನದ ಅನುಚ್ಛೇದ 180 ಪ್ರಕಾರ ತೆರಿಗೆ ಹಂಚಿಕೆಯಾಗಬೇಕೆಂದು ಹೇಳಲಾಗಿದ್ದು ಯಾರಿಗೂ ಅನ್ಯಾಯವಾಗಬಾರದೆಂದು ಸ್ಪಷ್ಟಪಡಿಸಿದೆ ಎಂದರು.

15ನೇ ಹಣಕಾಸು ಆಯೋಗದ ಪ್ರಕಾರ ಐದು ವರ್ಷಗಳಲ್ಲಿ ರಾಜ್ಯದ ಪಾಲು ಒಟ್ಟು 68,275 ಕೋಟಿ ರು ಕಡಿಮೆಯಾಗಿದೆ. ರಾಜ್ಯ ಪ್ರತಿವರ್ಷ 4.5 ಲಕ್ಷ ಕೋಟಿ ತೆರಿಗೆ ನೀಡುತ್ತದೆ. ಒಂದು ರು.ಗಳು ನೀಡಿದರೆ 15 ಪೈಸೆ ನಮಗೆ ವಾಪಸ್ಸು ಬರುತ್ತದೆ. ಈ ಅನ್ಯಾಯ 16ನೇ ಹಣಕಾಸು ಆಯೋಗದಲ್ಲಿ ಆಗಬಾರದು. 14 ನೇ ಹಣಕಾಸು ಆಯೋಗದಲ್ಲಿ ನಮ್ಮ ತೆರಿಗೆ ಪಾಲು ಶೇ.4.713ಕ್ಕೆ ಮತ್ತು 15 ನೇ ಹಣಕಾಸು ಆಯೋಗದಲ್ಲಿ ತೆರಿಗೆ ಪಾಲು ಶೇ.3.647ಕ್ಕೆ ಇಳಿಕೆ ಮಾಡಿದ್ದರಿಂದ ತೆರಿಗೆ ಹಂಚಿಕೆಯಲ್ಲಿ ನಮ್ಮ ಪಾಲನ್ನು ಒಟ್ಟಾರೆ ಶೇ. 23ರಷ್ಟು ಇಳಿಕೆ ಮಾಡಲಾಗಿದೆ. 5 ವರ್ಷಗಳಲ್ಲಿ ಒಟ್ಟು 68,275 ಕೋಟಿ ರು. ಕಡಿಮೆಯಾಗಿದೆ ಎಂದರು.

ಸೆಸ್ ಮತ್ತು ಸರ್ಚಾಜ್ ಶೇ 5ರಷ್ಟನ್ನು ಮೀರಬಾರದು: ಕೇಂದ್ರ ಸರಕಾರ ಸೆಸ್ ಮತ್ತು ಸರ್ಚಾರ್ಜ್‌ನಲ್ಲಿ ನಮಗೆ ಮಾತ್ರವಲ್ಲ ಯಾವ ರಾಜ್ಯಕ್ಕೂ ಪಾಲು ಕೊಡುವುದಿಲ್ಲ. ಕರ್ನಾಟಕದಿಂದ 2024-25ರಲ್ಲಿ ಒಟ್ಟು 5,41,709 ಕೋಟಿ ಸಂಗ್ರಹವಾಗಿದೆ. 8,084 ಕೋಟಿ ರು.ಗಳು ಕರ್ನಾಟಕಕ್ಕೆ ನಷ್ಟವಾಗಿದೆ. ಸೆಸ್ ಮತ್ತು ಸರ್ಚಾಜ್ ಶೇ 5ರಷ್ಟನ್ನು ಮೀರಬಾರದು, ಒಂದು ವೇಳೆ ಶೇ.5 ಮೀರಿದರೆ ರಾಜ್ಯಗಳ ತೆರಿಗೆ ಹಂಚಿಕೆಯ ಪಾಲಿನಲ್ಲಿ ಶೇ 50 ರಷ್ಟು ಹೆಚ್ಚಳ ಮಾಡಬೇಕು, ಎಂದು ಮನವಿ ಮಾಡಲಾಗಿದೆ ಎಂದರು.

ಕರ್ನಾಟಕ ಆರ್ಥಿಕವಾಗಿ ಬೆಳವಣಿಗೆಯಾದರೆ ಕೇಂದ್ರ ಸರಕಾರದ ಬೆಳವಣಿಗೆಯೂ ಆಗುತ್ತದೆ. ಹಾಗಾಗಿ ನ್ಯಾಯಯುತವಾಗಿ ಹಂಚಿಕೆಯಾಗಬೇಕು ಎಂದು ಕೋರಲಾಗಿದೆ. ರಾಜ್ಯದ ತಲಾದಾಯವು ಆರು ಜಿಲ್ಲೆಗಳನ್ನು ಹೊರತುಪಡಿಸಿ ಕಡಿಮೆಯಿದೆ. ಕಲ್ಯಾಣ ಕರ್ನಾಟಕದಲ್ಲಿ ಇನ್ನೂ ಕಡಿಮೆಯಿದ್ದು, ಇದು ರಾಜಸ್ಥಾನ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಲದ ಸರಿಸಮಾನವಾಗಿದೆ. ರಾಜಸ್ವ ಕೊರತೆಯಿರುವ ರಾಜ್ಯಗಳಿಗೆ ಈ ಕೊರತೆಯನ್ನು ತುಂಬಲು ಅನುದಾನವನ್ನು ನೀಡಲಾಗುತ್ತದೆ. ಆದರೆ ತೆರಿಗೆ ಹಂಚಿಕೆಯಲ್ಲಿ ನಮ್ಮಷ್ಟೇ ನಷ್ಟವಾಗಿರುವ ಕೇರಳಕ್ಕೆ ಕಳೆದ ವರ್ಷ 38000 ಕೋಟಿಗಳನ್ನು ರಾಜಸ್ವ ಕೊರತೆ ತುಂಬಲು ಒದಗಿಸಲಾಗಿದೆ. ಕರ್ನಾಟಕಕ್ಕೆ ಯಾವುದೇ ರಾಜಸ್ವ ಕೊರತೆ ಅನುದಾನ ಬಂದಿಲ್ಲ ಎಂದು ತಿಳಿಸಿದರು.

ಸಭೆಯಲ್ಲಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರೆಡ್ಡಿ, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ , ಮುಖ್ಯಮಂತ್ರಿಗಳ ಕಾರ್ಯದರ್ಶಿ ಅಂಜುಂ ಪರ್ವೇಜ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

> ಕೇಂದ್ರ ಸರಕಾರದ ವಿವೇಚನಾ ಅನುದಾನ ಶೇ.0.3ಕ್ಕಿಂತ ಹೆಚ್ಚಾಗಬಾರದು ಎಂದು ಮನವಿ ಮಾಡಲಾಗಿದೆ. ವಿತ್ತೀಯ ಹೊಣೆಗಾರಿಕೆ ಕಾಯ್ದೆಯ ಮೂರು ಮಾನದಂಡಗಳ ಪ್ರಕಾರ ನಡೆದುಕೊಂಡಿರುವ ಕರ್ನಾಟಕ ರಾಜ್ಯ . ಹಾಗಾಗಿ ಆರ್ಥಿಕವಾಗಿ ರಾಜ್ಯ ಸದೃಢವಾಗಿದೆ ಎಂದು ಆಯೋಗದ ಗಮನಕ್ಕೆ ತರಲಾಗಿದೆ. ಹೆಚ್ಚುವರಿ ಮನವಿಯಲ್ಲಿಯೂ ಹೇಳಲಾಗಿದೆ. ಇದೊಂದು ಸಾಂವಿಧಾನಿಕ ಸಂಸ್ಥೆಯಾಗಿರುವುದರಿಂದ ಎಲ್ಲಾ ರಾಜ್ಯಗಳಿಗೂ ನ್ಯಾಯ ಒದಗಿಸುವ ಕೆಲಸವಾಗಬೇಕು. ಕರ್ನಾಟಕಕ್ಕೆ ಅನ್ಯಾಯವಾಗಬಾರದು ಎಂದು ಕೋರಲಾಗಿದೆ.
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ವಿಶೇಷ ಅನುದಾನವೂ ಇಲ್ಲ

15ನೇ ಹಣಕಾಸಿನ ಆಯೋಗವು ರಾಜ್ಯಕ್ಕೆ 5495 ಕೋಟಿ ರು.ಗಳ ವಿಶೇಷ ಅನುದಾನವನ್ನು ಕರ್ನಾಟಕ, ತೆಲಂಗಾಣ ಮತ್ತು ಮಿಜೋರಾಂ ರಾಜ್ಯಗಳಿಗೆ ಒದಗಿಸಬೇಕೆಂದು ಶಿಫಾರಸ್ಸು ಮಾಡಿತ್ತು. ಆದರೆ ಕೇಂದ್ರ ಸರಕಾರ ಈ ಅನುದಾನವನ್ನು ಒದಗಿಸಲು ನಿರಾಕರಿಸಿತು. ಇದಲ್ಲದೇ ಪೆರಿಫೆರಲ್ ರಿಂಗ್ ರಸ್ತೆ ಗೆ 3000 ಕೋಟಿ ಹಾಗೂ ಕೆರೆಗಳ ಅಭಿವೃದ್ಧಿಗೆ 3000 ಕೋಟಿ ನೀಡಬೇಕೆಂದು ಶಿಫಾರಸ್ಸು ಮಾಡಿತ್ತು. ಎರಡೂ ಸೇರಿ 11495 ಕೋಟಿ ರು.ಗಳನ್ನು ಒದಗಿಸಬೇಕೆಂದು 15 ನೇ ಹಣಕಾಸಿನ ಆಯೋಗವು ಶಿಫಾರಸ್ಸು ಮಾಡಿತ್ತು. ಬೆಂಗಳೂರು ನಗರ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದು, ನಮ್ಮ ಮನವಿಯಲ್ಲಿ ಕೋರಿರುವಂತೆ ಅನುದಾನವನ್ನು ಒದಗಿಸದೇ ಹೋದರೆ ಬೆಂಗಳೂರು ಅಭಿವೃದ್ಧಿಗೆ 1.ಲಕ್ಷ 15 ಸಾವಿರ ಕೋಟಿಗಳನ್ನು ಒದಗಿಸಬೇಕು ಎಂದು ಕೋರಿದೆ ಎಂದರು.

ವೈಜ್ಞಾನಿಕವಾಗಿ ತೆರಿಗೆ ಹಂಚಿಕೆ ಮಾಡಿ

ಕೇರಳ, ತಮಿಳುನಾಡಿಗೂ ನಮ್ಮಷ್ಟೇ ನಷ್ಟವಾಗಿದ್ದರೂ, ಅವರಿಗೆ ರಾಜಸ್ವ ಕೊರತೆ ಅನುದಾನವನ್ನು ನೀಡಲಾಗಿದೆ. ನಮಗೇಕೆ ಕೊಟ್ಟಿಲ್ಲ ಎಂದು ಪ್ರಶ್ನಿಸಲಾಗಿದೆ. ಜನಸಂಖ್ಯೆ ಆಧಾರದ ಮೇಲೆ ಅನುದಾನ ಹಂಚಿಕೆ ಮಾಡಬಾರದು ಎಂದು ನಾವು ಹೇಳುವುದಿಲ್ಲ. ಆದರೆ ತೆರಿಗೆ ಹಂಚಿಕೆ ವೈಜ್ಞಾನಿಕವಾಗಿ ಮಾಡಬೇಕು ಎಂದು ಕೋರಲಾಗಿದೆ. ಈ ಬಗ್ಗೆ ಇತರೆ ರಾಜ್ಯಗಳು ಧ್ವನಿ ಎತ್ತಿವೆ ಎಂದೂ ಮುಖ್ಯಮಂತ್ರಿಗಳು ತಿಳಿಸಿದರು. ಸಭೆಯು ಒಂದೂ ಕಾಲ ಗಂಟೆಗಳ ಕಾಲ ಸೌಹಾರ್ದಯುತವಾಗಿ ನಡೆದಿದ್ದು, ಆಯೋಗದ ಅಧ್ಯಕ್ಷರು ನಮ್ಮ ಸಲಹೆಗಳನ್ನು ಸ್ವೀಕರಿಸಿದ್ದಾರೆ ಎಂದರು.

ಕೆಕೆಆರ್‌ಡಿಬಿ ಮಂಡಳಿಯಿಂದ ಕೈಗೆತ್ತಿಕೊಂಡಿರುವ ಆರೋಗ್ಯ ಆವಿಷ್ಕಾರ ಯೋಜನೆ

ಆರೋಗ್ಯ ಆವಿಷ್ಕಾರ ಯೋಜನೆಗೆ ಮುಖ್ಯಮಂತ್ರಿ ಇಂದು ಚಾಲನೆ

ಯಾದಗಿರಿ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರೋಗ್ಯ ರಂಗದಲ್ಲಿನ ಪ್ರಗತಿಗಾಗಿ ಕೆಕೆಆರ್‌ಡಿಬಿ ಮಂಡಳಿಯಿಂದ ಆರೋಗ್ಯ ಆವಿಷ್ಕಾರ ಯೋಜನೆಯಡಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಸಹಯೋಗದಲ್ಲಿ 440. 63 ಕೋಟಿ ರು. ವೆಚ್ಚದಲ್ಲಿ ಕಾಮಗಾರಿಗಳಿಗೆ ಯಾದಗಿರಿಯಲ್ಲಿ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅಡಿಗಲ್ಲು ನೆರವೇರಿಸಲಿದ್ದಾರೆ.

ಕಕ ಭಾಗದಲ್ಲಿರುವ ಕಲಬುರಗಿ, ಯಾದಗಿರಿ, ರಾಯಚೂರು, ಬೀದರ್, ಕೊಪ್ಪಳ, ಬಳ್ಳಾರಿ, ವಿಜಯನಗರ ಸೇರಿದಂತೆ 7 ಜಿಲ್ಲೆಗಳಲ್ಲಿನ ಆರೋಗ್ಯ ರಂಗದಲ್ಲಿ ಮೂಲ ಸವಲತ್ತು ಅಭಿವೃದ್ಧಿಗೆ ಮುಂದಾಗಿರುವ ಕೆಕೆಆರ್‌ಡಿಬಿ ಮಂಡಳಿಯಿಂದ ಕೈಗೆತ್ತಿಕೊಂಡಿರುವ ಆರೋಗ್ಯ ಆವಿಷ್ಕಾರ ಯೋಜನೆ ರೂಪಿಸಲಾಗಿದೆ.

ಇತ್ತೀಚೆಗೆ ಕಲಬುರಗಿಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಆರೋಗ್ಯ ರಂಗಕ್ಕೆ 800 ಕೋಟಿ ರು. ವೆಚ್ಚ ಮಾಡುವ ನಿರ್ಧಾರವಾಗಿತ್ತು. ಈ ಪೈಕಿ ಮೊದಲ ಹಂತದಲ್ಲಿ 440. 63 ಕೋಟಿ ರು ಹಣವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ವೆಚ್ಚ ಮಾಡಲಾಗುತ್ತಿದೆ. ಈ ಹಣದಲ್ಲಿ 220 ಕೋಟಿಗೂ ಹೆಚ್ಚು ಕೆಕೆಆರ್‌ಡಿಬಿ ಅನುದಾನ ನೀಡುತ್ತಿದೆ.

1200 ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ

ಆರೋಗ್ಯ ಆವಿಷ್ಕಾರದಲ್ಲಿ ಕಲ್ಯಾಣ ನಾಡಲ್ಲಿ 1200 ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ, 6 ಸಮುದಾಯ ಆರೋಗ್ಯ ಕೇಂದ್ರ ಸ್ಥಾಪನೆ, 1 ನಗರ ಆರೋಗ್ಯ ಕೇಂದ್ರಕ್ಕೂ ಚಾಲನೆ, 14 ಸಿಎಚ್‌ಸಿಗಳನ್ನು 100 ಹಾಸಿಗೆಗೆ ಮೇಲ್ದರ್ಜೆಗೆ ಏರಿಸುವುದು, 3 ಸಿಎಚ್‌ಸಿಗಳನ್ನು 100 ರಿಂದ 1500 ಹಾಸಿಗೆಗೆ ಮೇಲ್ದರ್ಜೆಗೇರಿಸುವುದು, 30 ಹಾಸಿಗೆ 3 ಸಿಎಚ್‌ಸಿಗಳನ್ನು 150 ಹಾಸಿಗೆಗೆ ಹೆಚ್ಚಿಸುವುದು, 2 ಪಿಎಚ್‌ಸಿಗಳನ್ನು 100 ಹಾಸಿಗೆಗೆ ಮೇಲ್ದರ್ಜೆಗೆ ಏರಿಸು ಕೆಲಸಗಳು ಆಗಲಿವೆ.

ಇನ್ನೂ ಈ ಕಾರ್ಯಕ್ರಮದಲ್ಲಿ ಡಿಸಿಎಂ ಡಿಕೆ ಶಿವಕುಮಾರ್, ರಾಜ್ಯಸಭೆ ವಿಪಕ್ಷ ನಾಯಕರಾದ ಡಾ. ಮಲ್ಲಿಕಾರ್ಜುನ ಖರ್ಗೆ, ಸಚಿವರಾದ ಡಾ. ಶರಣಪ್ರಕಾಶ ಪಾಟೀಲ್, ದಿನೇಶ ಗುಂಡೂರಾವ್, ಶರಣಬಸಪ್ಪ ದರ್ಶನಾಪುರ, ಈಶ್ವರ ಖಂಡ್ರೆ, ಸುಧಾಕರ್ ಸೇರಿದಂತೆ ಅನೇಕರು ಯಾದಗಿರಿ ಆರೋಗ್ಯ ಅವಿಷ್ಕಾರ ಪ್ರಾರಂಭೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ವಿಮಾನ ದುರಂತ: ಕೆಎಲ್‌ಇ ಹಳೆಯ ವಿದ್ಯಾರ್ಥಿ ಸಾವು

ಬೆಳಗಾವಿ: ಅಹಮದಾಬಾದ್ ವಿಮಾನ ದುರಂತದಲ್ಲಿ ಮೃತಪಟ್ಟ ರಾಜಸ್ಥಾನ ಮೂಲದ ವೈದ್ಯ ದಂಪತಿಳ ಸಮೇತ ಕುಟುಂಬದ ಐವರು ಮೃತಪಟ್ಟಿದ್ದಾರೆ. ಈ ಕುಟುಂಬದ ಸದಸ್ಯ ಪ್ರತೀಕ್ ಜೋಶಿ ಅವರಿಗೆ ಬೆಳಗಾವಿ ಜತೆಗೆ ನಂಟು ಇರುವುದು ತಿಳಿದುಬಂದಿದೆ.

ಹೌದು ವಿಮಾನ ದುರಂತದಲ್ಲಿ ವೈದ್ಯ ದಂಪತಿಗಳಾದ ಪ್ರತೀಕ್ ಜೋಶಿ, ಅವರ ಪತ್ನಿ ಡಾ. ಕೋಮಿ ವ್ಯಾಸ್ ಹಾಗೂ ಮೂವರು ಮುದ್ದಾದ ಮಕ್ಕಳು ಮೃತಪಟ್ಟಿದ್ದರು. ವೈದ್ಯ ಪ್ರತೀಕ್ ಜೋಶಿ 2000 ನೇ ಇಸವಿಯಲ್ಲಿ ಬೆಳಗಾವಿ ಕೆಎಲ್‌ಇ ಜವಾಹರಲಾಲ್ ನೆಹರು ವೈದ್ಯಕೀಯ ವಿದ್ಯಾಲಯದಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡಿದ್ದರು. ಸಂಸ್ಥೆಯ ಹಳೆಯ ವಿದ್ಯಾರ್ಥಿ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಶಿಕ್ಷಕರು ಕಂಬನಿ ಮಿಡಿದಿದ್ದಾರೆ.

ಪ್ರಾಂಶುಪಾಲರಾದ ಡಾ. ನಿರಂಜನಾ ಮಹಾಂತಶೆಟ್ಟಿ ಮಾತನಾಡಿ. 2000 ರಿಂದ 2005 ರಲ್ಲಿ ಕೆಎಲ್‌ಇ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪ್ರತೀಕ್ ವ್ಯಾಸಂಗ ಮಾಡುತ್ತಿದ್ದರು.

ಅತ್ಯಂತ ಬುದ್ದಿವಂತ ವಿದ್ಯಾರ್ಥಿ. ಶ್ರಮವಹಿಸಿ ವಿದ್ಯಾಭ್ಯಾಸ ಮಾಡುತ್ತಿದ್ದರು. ರೇಡಿಯೋಲಜಿ ಕುರಿತು ಹೆಚ್ಚಿನ ಒಲವು ಹೊಂದಿದ್ದರು. ಅದರಂತೆ ಕೋಲಾರದಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದರು ಎಂದರು.

ಮೃತ ವೈದ್ಯ ಪ್ರತೀಕ್ ಜೋಶಿ ಸಹಪಾಠಿ ಡಾ.ಆನಂದ ಪುರಾಣಿಕಮಠ ಮಾತನಾಡಿ, ದುರಂತ ನೆನೆದು ಬಹಳ ಬೇಜಾರು ಮತ್ತು ದುಃಖವಾಗುತ್ತಿದೆ, ಅವರ ಇಡೀ ಕುಟುಂಬ ದುರ್ಘಟನೆಗೆ ಬಲಿಯಾಗಿದೆ. ಅವರ ಚಿಕ್ಕಮಕ್ಕಳ ಬಗ್ಗೆ ಯೋಚಿಸಿದರೆ ಅತೀವ ವೇದನೆಯಾಗತ್ತದೆ. ಅವರ ತಂದೆತಾಯಿಗಳಿಗೆ ಈ ನಷ್ಟವನ್ನು ಭರಿಸುವ ಶಕ್ತಿಯನ್ನು ದೇವರು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ ಎಂದು ಕಂಬನಿ ಮಿಡಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ನೆಲೆಸಬೇಕಾಗಿದೆ: ಸಚಿವ ಪರಮೇಶ್ವರ

ದೇಶದಲ್ಲೇ ಮೊದಲ ಬಾರಿಗೆ ಕೋಮು ಹಿಂಸೆ ನಿಗ್ರಹ ಪಡೆ

ವಿಶೇಷ ಕಾರ್ಯಪಡೆಯ ಲೋಗೋವನ್ನು ಗೃಹ ಸಚಿವ ಜಿ. ಪರಮೇಶ್ವರ, ಸಚಿವ ದಿನೇಶ್‌ಗುಂಡೂರಾವ್ ಬಿಡುಗಡೆ ಮಾಡಿದರು.

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಜಿಲ್ಲೆ ಒಳಗೊಂಡು, ಕೋಮು ಹಿಂಸೆ ನಿಗ್ರಹಕ್ಕಾಗಿ ರಚನೆಯಾಗಿರುವ ವಿಶೇಷ ಕಾರ್ಯಪಡೆಯನ್ನು (ಎಸ್‌ಎಎಫ್) ಅಗತ್ಯ ಬಂದಲ್ಲಿ ರಾಜ್ಯಕ್ಕೆ ವಿಸ್ತರಣೆ ಮಾಡಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಎಸ್‌ಎಎಫ್ ಕಚೇರಿ ಹಾಗೂ ಪೊಲೀಸ್ ವಸತಿಗೃಹಗಳ ಸಮುಚ್ಛಯ ಉದ್ಘಾಟಿಸಿ ಅವರು ಮಾತನಾಡಿ, ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕ ರಾಜ್ಯ ಸರಕಾರ ಇಂತಹ ಒಂದು ಕಾರ್ಯಪಡೆ ರಚನೆ ಮಾಡಿದೆ. ದ್ವೇಷ ಭಾಷಣ, ಕೋಮು ಸಂಘರ್ಷ ಸೃಷ್ಟಿಸುವವರನ್ನು ಹತ್ತಿಕ್ಕುವ ದಿಸೆಯಲ್ಲಿ ಈ ಕಾರ್ಯಪಡೆ ಕಾರ್ಯನಿರ್ವಹಿಸಲಿದೆ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರೋಗ್ಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಾಂತಿ ನೆಲೆಸಬೇಕಾಗಿದೆ. ಈ ನೆಲ ಮತ್ತೆ ಕೋಮು ಸೌಹಾರ್ದಕ್ಕೆ ಸಾಕ್ಷಿಯಾಗಬೇಕಾಗಿದೆ ಎಂದರು.

ನಕ್ಸಲ್ ನಿಗ್ರಹ ಪಡೆಯ ಸಿಬ್ಬಂದಿ ಈ ಕಾರ್ಯಪಡೆಯಲ್ಲಿ ಕಾರ್ಯ ನಿರ್ವಹಿಸಲಿದ್ದು, ಅಗತ್ಯ ಬಂದಲ್ಲಿ ಸಿಬ್ಬಂದಿ ಸಂಖ್ಯೆ ಹೆಚ್ಚಿಸಲಾಗುವುದು. ಆದರೆ ಇಲ್ಲಿನ ಜನರು ಇದಕ್ಕೆ ಎಲ್ಲರ ಸಹಕಾರ ಅಗತ್ಯ. ಈ ಕಾರ್ಯಪಡೆಗೆ ಹೆಚ್ಚು ಕೆಲಸ ಕೊಡದಂತೆ ನಡೆದುಕೊಳ್ಳಬೇಕು. ಬೇರೆ ಜಿಲ್ಲೆಗೆ ಇಂತಹ ಕಾರ್ಯಪಡೆಯ ಅಗತ್ಯ ಬರಲಾರದು ಎಂದು ಭಾವಿಸಿದ್ದೇವೆ. ಒಟ್ಟಿನಲ್ಲಿ ರಾಜ್ಯವು ಸರ್ವ ಜನಾಂಗದ ಶಾಂತಿಯ ತೋಟ ಆಗಬೇಕು ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಯಾವುದೇ ಕಾರಣಕ್ಕೂ ಇದನ್ನು ರಾಜಕೀಯವಾಗಿ ನೋಡುತ್ತಿಲ್ಲ. ಖಾಕಿಗೆ ಖಾಕಿಯೇ ಧರ್ಮವಾಗಿದ್ದು, ಯಾರೇ ತಪ್ಪು ಮಾಡಿದರೂ ಪಕ್ಷಪಾತ ಇಲ್ಲದೆ ಕ್ರಮವಹಿಸಬೇಕು. ಜಿಲ್ಲೆಯಲ್ಲಿ ಶಾಂತಿ ನೆಲೆಸುವ ನಿಟ್ಟಿನಲ್ಲಿ ಶೀಘ್ರದಲ್ಲಿ ಎಲ್ಲ ಪಕ್ಷಗಳು, ಸಮುದಾಯಗಳು, ಶಿಕ್ಷಣ ತಜ್ಞರು, ಸಾಹಿತಿಗಳು ಎಲ್ಲರನ್ನೂ ಒಳಗೊಂಡು ಶಾಂತಿ ಸಭೆ ನಡೆಸಲಾಗುವುದು ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಮಂಜುನಾಥ ಭಂಡಾರಿ, ಐವನ್ ಡಿಸೋಜ, ಶಾಸಕ ಅಶೋಕ ಕುಮಾರ್ ರೈ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ. ಎ.ಸಲೀಂ, ಐಜಿಪಿ ಅಮಿತ್ ಸಿಂಗ್, ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ಕಾರ್ಯಪಡೆ ಮುಖ್ಯಸ್ಥರಾಗಿರುವ ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ಹಾಜರಿದ್ದರು.

> ಪ್ರಸ್ತುತ ಶೇ 40 ಪೊಲೀಸ್ ಸಿಬ್ಬಂದಿ ವಸತಿಗೃಹಗಳಲ್ಲೇ ವಾಸಿಸುತ್ತಿದ್ದಾರೆ. ಈ ಪ್ರಮಾಣ ಶೇ 80 ಕ್ಕೆ ತಲುಪಬೇಕು ಎಂಬ ಗುರಿ ಇದೆ. ರಾಜ್ಯದಲ್ಲಿ ಪೊಲೀಸ್ ಇಲಾಖೆ ಉತ್ತಮ ಕೆಲಸ ಮಾಡುತ್ತಿದ್ದು, ಶೇ 99 ರಷ್ಟು ಕೊಲೆ ಪ್ರಕರಣಗಳನ್ನು ಪತ್ತೆ ಮಾಡಿ ಕಾನೂನು ಕ್ರಮ ವಹಿಸಲಾಗಿದೆ. ಸೈಬರ್ ಅಪರಾಧ ಹೆಚ್ಚುತ್ತಿದ್ದು, ಪ್ರತಿ ಕಾನ್ಸ್ಟೇಬಲ್ ಸೈಬರ್ ಅಪರಾಧ ಪತ್ತೆ ಹಚ್ಚುವಲ್ಲಿ ತಜ್ಞತೆ ಪಡೆಯಬೇಕೆಂಬ ಉದ್ದೇಶದಿಂದ ಎಲ್ಲ ಜಿಲ್ಲೆಗಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ತರಬೇತಿ ವಿಭಾಗ ಪ್ರಾರಂಭಿಸಲಾಗಿದೆ.
>
> ಪರಮೇಶ್ವರ್, ಗೃಹ ಸಚಿವ

> ಣೆಯಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಗೆ ಕೋಮು ದ್ವೇಷವೇ ಕಪ್ಪುಚುಕ್ಕೆಯಾಗಿದೆ. ಇದನ್ನು ನಿಯಂತ್ರಿಸಲು ರಚನೆ ಮಾಡಿರುವ ಎಸ್ ಎಎಫ್ ಅನ್ನು ಶೇ 90ರಷ್ಟು ಜನರು ಸ್ವಾಗತಿಸಿದ್ದಾರೆ. ಶೇ 5 ರಷ್ಟು ಜನರಿಗೆ ಇದರಿಂದ ತೊಂದರೆ ಆಗಬಹುದು. ಕಾನೂನು ಬಾಹಿರ ಚಟುವಟಿಕೆ ನಿಯಂತ್ರಿಸಿ ಜನರು ಶಾಂತಿಯಿಂದ ನೆಲೆಸಬೇಕು ಎಂಬುದು ನಮ್ಮ ಉದ್ದೇಶ.
>
> ದಿನೇಶ್ ಗುಂಡೂರಾವ್, ಸಚಿವ

ಮಹಿಳಾ ಸಬಲೀಕರಣಕ್ಕೆ ಹೊಸ ಶಕ್ತಿ, ಮಾದರಿ ಆಡಳಿತದ ಮೇಲ್ಪಂಕ್ತಿ

ಡಿ.ಕೆ.ಶಿವಕುಮಾರ್
ಉಪಮುಖ್ಯಮಂತ್ರಿ

ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಮಹಿಳಾ ಸಬಲೀಕರಣದ ಬಗ್ಗೆ ಬಹಳಷ್ಟು ಮಾತುಗಳನ್ನು ಕೇಳುತ್ತಲೇ ಇರುತ್ತೇವೆ. ಒಬ್ಬ ಮಹಿಳೆಯನ್ನು ಸಬಲೀಕರಣಗೊಳಿಸಿದರೆ, ಇಡೀ ಕುಟುಂಬ, ಅದರಿಂದ ಇಡೀ ಸಮಾಜ, ಆ ಮೂಲಕ ಇಡೀ ದೇಶ ಶಕ್ತಿಯುತವಾಗುತ್ತದೆ. ಒಂದು ಕುಟುಂಬದ ಆಧಾರ ಸ್ತಂಭವಾಗಿ ಮಹಿಳೆ ಇರುವುದರಿಂದಲೇ, ಆ ಮಹಿಳೆಗೆ ಸಬಲೀಕರಣದ ಸ್ಪರ್ಶ ನೀಡುವುದು ಅಗತ್ಯವಾಗುತ್ತದೆ. ಯಾವುದೇ ಸಮುದಾಯದ ಏಳಿಗೆಯನ್ನು ಅಳೆಯಬೇಕಾದರೆ, ಆ ಸಮುದಾಯದ ಸ್ತ್ರೀಯರ ಏಳಿಗೆಯನ್ನು ಮಾನದಂಡವಾಗಿ ಪರಿಗಣಿಸಬೇಕು ಎಂದು ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರು. ಅಂದರೆ ಇಡೀ ಸಮಾಜದ ಅಭಿವೃದ್ಧಿಗೆ ಮಹಿಳೆಯರ ಪ್ರಗತಿಯೇ ಅಳತೆಗೋಲು ಇದ್ದಂತೆ.

ಪ್ರತಿ ಸರಕಾರಗಳು ಮಹಿಳಾ ಸಬಲೀಕರಣಕ್ಕಾಗಿ ಯೋಜನೆಗಳನ್ನು ತರುತ್ತವೆ. ಒಂದೋ ಅವು ಬದ್ಧತೆ ಇಲ್ಲದೆ ಬಿದ್ದುಹೋಗುತ್ತವೆ. ಅಥವಾ ಸರಿಯಾದ ಅನುಷ್ಠಾನ ಇಲ್ಲದೆ ಮೂಲೆ ಸೇರುತ್ತವೆ. ಆದರೆ ಕಾಂಗ್ರೆಸ್ ಸರಕಾರ ತಂದ ಪಂಚ ಗ್ಯಾರಂಟಿಗಳಲ್ಲಿ ಪ್ರಮುಖವಾದ ಶಕ್ತಿ ಯೋಜನೆ ಇಂದಿಗೂ ಅತಿ ಜನಪ್ರಿಯ ಯೋಜನೆಯಾಗಿ ಸ್ಥಾಪನೆಯಾಗಿದೆ.

ಏಕೆಂದರೆ ಇಂತಹ ಯೋಜನೆಯನ್ನು ತರಲು ಯಾವ ಸರಕಾರಗಳಿಗೂ ಸಾಧ್ಯವಾಗಿಲ್ಲ. ಸಾರ್ವಜನಿಕ ಸಾರಿಗೆಯನ್ನು ಸಂಪೂರ್ಣವಾಗಿ ಉಚಿತ ಮಾಡಿ, ಪ್ರತಿ ತಿಂಗಳು ಆ ಅಪಾರ ವೆಚ್ಚವನ್ನು ಸರಕಾರವೇ ಭರಿಸುವುದು ಸುಲಭದ ಮಾತಲ್ಲ. ಅಂತಹ ಸಾಹಸವನ್ನು ಕಾಂಗ್ರೆಸ್ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಸರಕಾರ ಈ ಯೋಜನೆಯನ್ನು ತಂದಾಗ, ಎಲ್ಲೆಡೆ ಭಾರಿ ಮೆಚ್ಚುಗೆ ವ್ಯಕ್ತವಾಗಿತ್ತು. ಸಾಮಾನ್ಯವಾಗಿ ಯಾವುದೇ ಯೋಜನೆಗೆ ಆರಂಭದಲ್ಲಿ ಬರುವ ಯಶಸ್ಸು ಅಥವಾ ಮೆಚ್ಚುಗೆ ಮತ್ತೆ ಇರುವುದಿಲ್ಲ. ಆದರೆ ಎರಡೂವರೆ ವರ್ಷ ಕಳೆದರೂ ಶಕ್ತಿ ಯೋಜನೆ ಇಂದಿಗೂ ಖ್ಯಾತಿಯಲ್ಲಿ ಮೇಲಕ್ಕೇರುತ್ತಲೇ ಇದೆ. ಕನ್ನಡನಾಡಿನ ಮಹಿಳೆಯರು ನಮ್ಮನ್ನು ಹರಸುತ್ತಲೇ ಇದ್ದಾರೆ.

2023 ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಜಯ ಗಳಿಸಿದ ಕೂಡಲೇ ಮಹಿಳೆಯರು ಬಸ್ ಹತ್ತಿ ನಮಗೆ ಇನ್ನು ಫ್ರೀ ಸರ್ವಿಸ್ ಎಂದು ಕಂಡಕ್ಟರ್, ಚಾಲಕರಿಗೆ ಹೇಳಿದ್ದರು. ನಮ್ಮನ್ನು ಅಧಿಕಾರಕ್ಕೆ ತಂದ ಆ ನಾರಿಗಳಿಗೆ ಅಂತಹ ಅಧಿಕಾರ ಖಂಡಿತ ಇದೆ. ಆ ಸಮಯದಲ್ಲಿ ಸರಕಾರ ಆಗಷ್ಟೇ ರಚನೆಯಾಗಿತ್ತು. ಆದರೂ ತಡ ಮಾಡದೆಯೇ ಕೂಡಲೇ ಯೋಜನೆಯನ್ನು ಜಾರಿ ಮಾಡಲಾಯಿತು. ಇದರಿಂದಾಗಿ ಮಹಿಳೆಯರ ಕೈಗೆ ಆರ್ಥಿಕ ಶಕ್ತಿ ಸಿಕ್ಕಿದೆ. ಮಹಿಳೆಯರ ಖರ್ಚು ಕಡಿಮೆಯಾಗಿರುವುದು ಮಾತ್ರವಲ್ಲದೆ, ಇಡೀ ಕುಟುಂಬದ ಸಾರಿಗೆಯ ವೆಚ್ಚವೇ ಇಲ್ಲವಾಗಿದೆ. ಒಟ್ಟಾರೆ ರಾಜ್ಯ ಸರಕಾರದ ಶಕ್ತಿ ಯೋಜನೆ ನಾರಿ ಸಬಲೀಕರಣಕ್ಕೆ ಪ್ರೇರಣೆಯಾಗಿದೆ.

ಕೋಟ್ಯಂತರದ ಯಶಸ್ಸು: ಶಕ್ತಿ ಯೋಜನೆ ಜಾರಿಯಾದಾಗಿನಿಂದ ಈವರೆಗೆ ಒಟ್ಟು 476 ಕೋಟಿ ಬಾರಿ ಮಹಿಳೆಯರು ಉಚಿತ ಪ್ರಯಾಣದ ಸೇವೆ ಪಡೆದಿದ್ದಾರೆ. ಇದು ನಿಜಕ್ಕೂ ಅಚ್ಚರಿಯ ದಾಖಲೆ. ಇದಕ್ಕಾಗಿ ನಮ್ಮ ಸರಕಾರ, 12,015 ಕೋಟಿ ರು. ಖರ್ಚು ಮಾಡಿದೆ. ಅಂದರೆ ಇಷ್ಟು ಹಣವನ್ನು ನಾಡಿನ ಮಹಿಳೆಯರ ಪ್ರಯಾಣಕ್ಕೆ ಎರಡೂವರೆ ವರ್ಷದಲ್ಲಿ ಖರ್ಚು ಮಾಡಿದ್ದೇವೆ. ಕೆಎಸ್‌ಆರ್‌ಟಿಸಿಯಲ್ಲಿ 144.46 ಕೋಟಿ ಬಾರಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದು, ಅದಕ್ಕಾಗಿ 4,563.87 ಕೋಟಿ ರು. ಟಿಕೆಟ್ ವೆಚ್ಚ ಭರಿಸಲಾಗಿದೆ. ಬೆಂಗಳೂರಿನ ಬಿಎಂಟಿಸಿಯಲ್ಲಿ 150.94 ಕೋಟಿ ಬಾರಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, 2,064.68 ಕೋಟಿ ರು. ವೆಚ್ಚ ಮಾಡಲಾಗಿದೆ. ವಾಯುವ್ಯ ರಸ್ತೆ ಸಾರಿಗೆ ಬಸ್‌ಗಳಲ್ಲಿ 111.27 ಕೋಟಿ ಬಾರಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, ಅದರ 2973.46 ಕೋಟಿ ರು. ವೆಚ್ಚ ಭರಿಸಲಾಗಿದೆ. ಕಲ್ಯಾಣ ಕರ್ನಾಟಕ ಸಾರಿಗೆಯ ಬಸ್‌ಗಳಲ್ಲಿ 68.87 ಕೋಟಿ ಬಾರಿ ಮಹಿಳೆಯರು ಪ್ರಯಾಣ ಮಾಡಿದ್ದು, 2412.26 ಕೋಟಿ ರು. ಭರಿಸಲಾಗಿದೆ.

ದುಂದುವೆಚ್ಚವಲ್ಲ, ಅಗತ್ಯದ ವೆಚ್ಚ: ಉಚಿತ ಬಸ್ ಪ್ರಯಾಣ ಎಂದಾಕ್ಷಣ ಇದು ದುಂದುವೆಚ್ಚ, ಮಹಿಳೆಯರು ಸುಖಾಸುಮ್ಮನೆ ಓಡಾಡುತ್ತಾರೆ ಎಂದೆಲ್ಲ ಕೆಟ್ಟ ಟೀಕೆಗಳು ಬಂದಿವೆ. ಆದರೆ ಲಕ್ಷಾಂತರ ಉದ್ಯೋಗಸ್ಥ ಮಹಿಳೆಯರು ಒಂದು ರೂಪಾಯಿ ಖರ್ಚಿಲ್ಲದೆ ಓಡಾಡಿದ್ದಾರೆ. ವಿದ್ಯಾರ್ಥಿಗಳು ಹಣದ ಚಿಂತೆ ಇಲ್ಲದೆ ಪ್ರಯಾಣಿಸಿದ್ದಾರೆ. ಪುಣ್ಯಕ್ಷೇತ್ರಗಳ ದರ್ಶನ ಮಾಡುವ ಆಸೆ ಇಟ್ಟುಕೊಂಡವರು ಅದನ್ನು ಪೂರೈಸಿಕೊಂಡು ಪುಣ್ಯ ಸಂಪಾದಿಸಿದ್ದಾರೆ. ಮಹಿಳೆಯರು ಎಂದರೆ ಅಡುಗೆ ಮನೆಗೆ ಸೀಮಿತವಾದವರು ಎಂಬ ಕೀಳು ಮನಸ್ಥಿತಿಯಿಂದ ಹೊರಬರಬೇಕಿದೆ ಎಂಬ ಸಂದೇಶವನ್ನು ನಮ್ಮ ಯೋಜನೆ ನೀಡಿದೆ.

ದಕ್ಷಿಣ ಏಷ್ಯಾ ಸೇರಿದಂತೆ ಹಲವು ದೇಶಗಳಲ್ಲಿ ಬಡ ಕುಟುಂಬಗಳು ತಿಂಗಳಿನ ಆದಾಯದ ಶೇ.20 ರಷ್ಟು ಹಣವನ್ನು ಸಾರಿಗೆಗೆ ಖರ್ಚು ಮಾಡುತ್ತವೆ ಎಂದು ವಿಶ್ವಬ್ಯಾಂಕ್‌ನ ಒಂದು ಅಧ್ಯಯನ ವರದಿಯಲ್ಲಿ ಹೇಳಲಾಗಿದೆ. ಇದೇ ಕಾರಣಕ್ಕೆ ಅನೇಕ ಮಹಿಳೆಯರು ಉದ್ಯೋಗಕ್ಕೆ ಅಥವಾ ಬೇರಾವುದೇ ಉದ್ದೇಶಕ್ಕೆ ಬಸ್‌ನಲ್ಲಿ ಪ್ರಯಾಣ ಮಾಡದೆ ಮನೆಯಲ್ಲೇ ಉಳಿಯುತ್ತಾರೆ. ಉಚಿತ ಬಸ್ ಸೇವೆಯಿಂದಾಗಿ ಈಗ ಮಹಿಳೆಯರ ಉದ್ಯೋಗದ ಓಡಾಟ ಸುಲಭವಾಗಿದೆ.

ವಿಜಯಪುರ ಜಿಲ್ಲೆಯ ಇಂಡಿಯ 20 ಮಹಿಳೆಯರು ಒಡಲ ಧ್ವನಿ ಎಂಬ ಸಂಘಟನೆ ರೂಪಿಸಿಕೊಂಡು, ಹೋಳಿಗೆ ತಯಾರಿಸಿ, ಬೆಂಗಳೂರಿಗೆ ಉಚಿತ ಬಸ್ ಪ್ರಯಾಣ ಮಾಡಿ ಬಂದು ಹೋಳಿಗೆ ಮಾರಾಟ ಮಾಡುತ್ತಾರೆ. ಮೊದಲು ಪ್ರತಿ ದಿನ 200 ಹೋಳಿಗೆ ಮಾಡುತ್ತಿದ್ದವರು, ಈಗ ಒಂದು ಸಾವಿರ ಹೋಳಿಗೆ ತಯಾರಿಸಿ ಮಾರುತ್ತಿದ್ದಾರೆ. ಇವರಿಗೆ ಉಚಿತ ಬಸ್ ಪ್ರಯಾಣದಿಂದ ಓಡಾಟ ಸುಲಭವಾಗಿದೆ. ಇಂತಹ ಅವೆಷ್ಟೋ ಸ್ವಾವಲಂಬಿ, ಸ್ವಾಭಿಮಾನಿ ಮಹಿಳೆಯರಿಗೆ ಈ ಯೋಜನೆ ಶಕ್ತಿ ನೀಡಿದೆ.

ಮಲೆ ಮಾದೇಶ್ವರ ಸೇರಿದಂತೆ ಅನೇಕ ಪುಣ್ಯಕ್ಷೇತ್ರಗಳ ದರ್ಶನ ಮಾಡಲು ಬಡ ಮಹಿಳೆಯರು ಇಡೀ ವರ್ಷ ಹಣ ಕೂಡಿ ಇಡುತ್ತಿದ್ದರು. ಕಳೆದೆರಡು ವರ್ಷಗಳಿಂದ ಯಾರೂ ಹಣದ ಬಗ್ಗೆ ಚಿಂತಿಸುತ್ತಿಲ್ಲ. ಮಹಿಳೆಯರು ದೇವಸ್ಥಾನಗಳಿಗೆ ಹೋಗುತ್ತಿರುವುದರಿಂದಲೇ ರಾಜ್ಯದ 34,565 ಮುಜರಾಯಿ ದೇವಸ್ಥಾನಗಳು ಸೇರಿ 1 ಲಕ್ಷಕ್ಕೂ ಅಧಿಕ ಧಾರ್ಮಿಕ ಕೇಂದ್ರಗಳ ಆದಾಯದಲ್ಲಿ ಏರಿಕೆಯಾಗಿದೆ. 2022-23 ರಲ್ಲಿ ದೇವಾಲಯಗಳ ಹುಂಡಿಯಿಂದ 8.48 ಕೋಟಿ ರು. ದೊರೆತರೆ, 2023-24 ರಲ್ಲಿ 9.59 ಕೋಟಿ ರು. ದೊರೆತಿದೆ. 2024-25 ರಲ್ಲಿ ಇದು 18.08 ಕೋಟಿ ರು.ಗೆ ತಲುಪಿದೆ. ಅಂದರೆ ಶಕ್ತಿ ಯೋಜನೆಯಿಂದಾಗಿ ದೇವಸ್ಥಾನಗಳ ಅಭಿವೃದ್ಧಿ ಸಾಧ್ಯವಾಗಿದೆ. ಧಾರ್ಮಿಕ ಪ್ರವಾಸೋದ್ಯಮದ ಪ್ರಗತಿ ವೇಗವಾಗಿದೆ.

ಯೋಜನೆಗೆ ಇನ್ನಷ್ಟು ಚುರುಕು: ಗ್ಯಾರಂಟಿಗಳನ್ನು ಹಿಂದಕ್ಕೆ ಪಡೆಯಲಿ ಎಂದೇ ಪ್ರತಿಪಕ್ಷಗಳು ಕಾಯುತ್ತಿವೆ. ಆದರೆ ಕಾಂಗ್ರೆಸ್ ಎಂದಿಗೂ ಕೊಟ್ಟ ಮಾತನ್ನು ತಪ್ಪಿಲ್ಲ. ಈ ಯೋಜನೆ ಇನ್ನಷ್ಟು ಚುರುಕಾಗಿ ಮುಂದಕ್ಕೆ ಸಾಗಿ ಇಡೀ ದೇಶಕ್ಕೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಡಲಿದೆ. ಶಕ್ತಿ ಯೋಜನೆ ಆರಂಭವಾದಾಗ ವೃದ್ಧೆಯೊಬ್ಬರು ಬಸ್ಸಿನ ಮೆಟ್ಟಿಲಿಗೆ ನಮಸ್ಕಾರ ಮಾಡಿ ನಮ್ಮ ಸರಕಾರವನ್ನು ಹರಸಿದ್ದರು. ಮಹಿಳೆಯರು ಬಸ್ಸಿನಲ್ಲಿ ಹಾಡು ಹಾಡುತ್ತಾ ಉಚಿತ ಸೇವೆಯ ಸಂಭ್ರಮಾಚರಣೆ ಮಾಡಿದ್ದರು. ಆ ಎಲ್ಲ ಹಾರೈಕೆ, ಆಶೀರ್ವಾದದ ಬಲದೊಂದಿಗೆ ಕಾಂಗ್ರೆಸ್ ಗ್ಯಾರಂಟಿಗಳನ್ನು ಇನ್ನಷ್ಟು ಶಕ್ತಿಯುತಗೊಳಿಸಿದೆ. ನುಡಿದಂತೆ ನಡೆಯುವುದು ಎನ್ನುವುದು ಕೇವಲ ಒಂದು ವಾಕ್ಯವಲ್ಲ, ಅದೇ ನಮ್ಮ ಸಂಕಲ್ಪ ಶಕ್ತಿ.

ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ನಮ್ಮ ರಾಷ್ಟ್ರೀಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಕೆ.ಸಿ.ವೇಣು ಗೋಪಾಲ್, ಸುರ್ಜೇವಾಲ ಅವರ ಮಾರ್ಗದರ್ಶನದಲ್ಲಿ ನಮ್ಮ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಈ ಯೋಜನೆಗೆ ಅಗತ್ಯವಾದ ಅನುದಾನವನ್ನು ಒದಗಿಸಿದ್ದಾರೆ. ನಮ್ಮ ಸಾರಿಗೆ ಇಲಾಖೆಯ ಸಚಿವರಾದ ರಾಮಲಿಂಗಾರೆಡ್ಡಿಯವರು ಇದನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿರುವುದಕ್ಕೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷನಾಗಿ ಇವರೆಲ್ಲರಿಗೂ ನಾನು ರಾಜ್ಯದ ನಾರಿಯರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ವಿಶ್ವವಾಣಿ

ಸಂಪಾದಕೀಯ

ನಶೆಯ ವಿಷಜಾಲಕ್ಕೆ ಇದು ಪುರಾವೆ

ಮಾದಕ ವಸ್ತುಗಳ ಮಾರಾಟಜಾಲವು ನಾಡಿನ ಉದ್ದಗಲಕ್ಕೂ ಹಬ್ಬಿರುವ ಕುರಿತಾಗಿ ಆತಂಕ ವ್ಯಕ್ತಪಡಿಸಿ ಇಲ್ಲಿ ಸಾಕಷ್ಟು ಬಾರಿ ಬರೆಯಲಾಗಿದೆ. ನಶೆಯ ಗೀಳಿಗೆ ಸಿಲುಕಿ ಜನರು, ಅದರಲ್ಲೂ ವಿಶೇಷವಾಗಿ ಯುವಜನರು ತಮ್ಮ ಭವಿಷ್ಯವನ್ನೇ ಹಾಳುಮಾಡಿಕೊಳ್ಳುತ್ತಿರುವುದರ ಬಗ್ಗೆ ಸೂಚ್ಯವಾಗಿ ಎಚ್ಚರಿಸಲಾಗಿದೆ. ಈ ಮಾತಿಗೆ ಪುಷ್ಟಿ ನೀಡುವಂಥ ಸುದ್ದಿಯೊಂದು ಹೈದರಾಬಾದ್‌ನಿಂದ ವರದಿಯಾಗಿರುವುದು ನಿಮಗೆ ಈಗಾಗಲೇ ಗೊತ್ತು. ಖ್ಯಾತ ಹಿನ್ನೆಲೆ ಗಾಯಕಿಯೊಬ್ಬರ ಜನ್ಮದಿನದ ಸಂಭ್ರಮಾಚರಣೆಗೆಂದು ಆಯೋಜಿಸಲಾಗಿದ್ದ ಸಂತೋಷ ಕೂಟದಲ್ಲಿ ಮಾದಕ ದ್ರವ್ಯಗಳ ಬಳಕೆಯಾಗುತ್ತಿದೆ ಎಂಬ ಖಚಿತ ಮಾಹಿತಿ ಅನುಸರಿಸಿ ದಾಳಿ ಮಾಡಿದ ತೆಲಂಗಾಣ ಪೊಲೀಸರಿಗೆ ಗಾಂಜಾ, ವಿದೇಶಿ ಮದ್ಯ ಸಿಕ್ಕಿದೆ. ಸಂತೋಷ ಕೂಟದಲ್ಲಿ ಭಾಗಿಯಾಗಿದ್ದವರ ಪೈಕಿ ಕೆಲವರನ್ನು ಅವರು ವಶಕ್ಕೆ ತೆಗೆದುಕೊಂಡು ಪರೀಕ್ಷೆಗೆ ಒಳಪಡಿಸಿದಾಗ ಮಾದಕ ದ್ರವ್ಯದ ಅಂಶ ಅವರ ರಕ್ತದಲ್ಲಿ ಪತ್ತೆಯಾಗಿದೆ ಎಂಬುದು ಲಭ್ಯ ಸುದ್ದಿ. ದೇಶದ ಯಾವುದೋ ಒಂದು ಮೂಲೆಯಲ್ಲೇ ಈ ಮಟ್ಟಿಗಿನ ವ್ಯಸನ ಕಂಡುಬರುತ್ತಿದೆ ಎಂದರೆ, ಅರಿವಿಗೇ ಬಾರದ ರೀತಿಯಲ್ಲಿ ಆ ಗೀಳು ನಾಡಿನ ಉದ್ದಗಲಕ್ಕೂ ಅದ್ಯಾವ ಮಟ್ಟಿಗೆ ವ್ಯಾಪಿಸಿರಬಹುದು ಎಂಬುದನ್ನೊಮ್ಮೆ ಕಲ್ಪಿಸಿಕೊಳ್ಳಿ. ಪ್ರತಿಷ್ಠಿತರನ್ನು, ಸೆಲೆಬ್ರಿಟಿಗಳನ್ನು ಪೊಲೀಸರು ತಪಾಸಣೆ ಮಾಡುವುದಕ್ಕೆ ಹೋಗುವುದಿಲ್ಲ ಎಂಬ ಭಂಡಧೈರ್ಯವೇ ಇಂಥ ಸಂತೋಷ ಕೂಟಗಳ ಆಯೋಜನೆಗಳಿಗೆ ಕಾರಣ ಎನಿಸುತ್ತದೆ. ಆದ್ದರಿಂದ ಸಾರ್ವಜನಿಕರ ಮತ್ತು ಸಮಾಜದ ಸ್ವಾಸ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಪೊಲೀಸರು ಇಂಥ ಅಡ್ಡಾಗಳನ್ನು ಮುಲಾಜಿಲ್ಲದೆ ತಡಕಬೇಕು, ಅಲ್ಲಿ ಲಭ್ಯವಾಗುವ ಮಾಹಿತಿಗಳನ್ನು ಆಧರಿಸಿ ಮಾದಕ ವಸ್ತುಗಳ ಮಾರಾಟಗಾರರನ್ನು ಮುಲಾಜಿಲ್ಲದೆ ವಶಕ್ಕೆ ತೆಗೆದುಕೊಂಡು ಹೆಡೆಮುರಿ ಕಟ್ಟಬೇಕು. ಏಕೆಂದರೆ, ಕೊಂಚವೇ ಮೈಮರೆತರೂ ಮತ್ತೆ ಚಿಗಿತುಕೊಳ್ಳುವಂಥವರು ಈ ಡ್ರಗ್ ಪೆಡ್ಲರ್‌ಗಳು. ಅದೆಷ್ಟೇ ಪ್ರಭಾವಿಗಳಾಗಿದ್ದರೂ ಬಗ್ಗದೆ ಕಠಿಣ ಕಾನೂನು ಕ್ರಮವನ್ನು ಅವರ ಮೇಲೆ ಜರುಗಿಸುವಂತಾಗಬೇಕು. ಅದು ಈ ಕ್ಷಣದ ಅನಿವಾರ್ಯತೆಯೂ ಹೌದು.

ಸೊಂಪಾದಕೀಯ

ಕೂತ್ ಕೊಂಡ್ ತಿನ್ನಂಗಿಲ್ಲ

ಬೆಂಗಳೂರಿನ ಹೋಟೆಲ್‌ಗಳಲ್ಲಿ ಇನ್ನು ಮುಂದೆ ಹೊಸ ನಿಯಮ ಜಾರಿಗೆ ಬರಲಿದೆಯಂತೆ. ಹೋಟೆಲಿಗೆ ಊಟ, ತಿಂಡಿ, ಕಾಫಿಗೆ ಅಂತ ಬರೋ ಗ್ರಾಹಕರನ್ನು ಬೇಗನೇ ಬೀಳ್ಕೊಡುವುದು ಇದರ ಉದ್ದೇಶ. ಹೋಟೆಲ್ ಅನ್ನೋದೇ ಒಂದು ದೊಡ್ಡ ಬ್ಯುಸಿನೆಸ್ ಆಗಿರುವಾಗ ಇತ್ತೀಚೆಗೆ ನಗರದ ಹೋಟೆಲ್‌ಗಳಲ್ಲಿ ಬ್ಯುಸಿನೆಸ್ ಮಾಡೋರ ಸಂಖ್ಯೆ ಜಾಸ್ತಿ ಆಗಿದೆಯಂತೆ. ಅಂದರೆ ಬೈಟು ಕಾಫಿ ಹೇಳಿ 2 ಅವರ್ಸ್ ಕೂತು ಮಾತುಕತೆ ಮಾಡೋರು ನಂತರ ಎದ್ದು ಹೋಗದೆ ಗಂಟೆಗಟ್ಟಲೆ ಅಲ್ಲೇ ಕುಳಿತು ಪಟ್ಟಾಂಗ ಹೊಡೆಯುವುದನ್ನು ತಪ್ಪಿಸಲು ಈಗ ಬೆಂಗಳೂರಿನ ಹೋಟೆಲ್‌ಗಳಲ್ಲಿ, 'ಕಾಲಹರಣ ಮಾಡಬೇಡಿ, ಬೇರೆ ಗ್ರಾಹಕರಿಗೆ ಜಾಗ ಬಿಟ್ಟು ಕೊಡಿ' ಅಂತ ಹೇಳುವ ಅಭಿಯಾನ ಶುರು ಆಗಿದೆ. ಆದರೆ ಅದನ್ನು ಬಾಯಿ ಬಿಟ್ಟು ಗ್ರಾಹಕರಿಗೆ ಹೇಳೋದು ಕಷ್ಟ. ಹಾಗಾಗಿ ನಿಮ್ಮ ನಂತರ ಮುಂದಿನವರಿಗೆ ಜಾಗ ಬಿಟ್ಟು ಕೊಡಿ ಅಂತ ಬೋರ್ಡ್ ಹಾಕುವ ಮೂಲಕ ಅರಿವು ಮೂಡಿಸಲಿದ್ದಾರೆ ಹೋಟೆಲ್ ಮಾಲೀಕರು. ಅವರು ತಾನೆ ಏನು ಮಾಡಿಯಾರು? ಮನೆಗೆ ಬರೋ ನೆಂಟರೇನೋ ತಿಂಡಿ, ಬಾಡೂಟ ಎಲ್ಲಾ ಆದರೂ ವಾಪಸ್ ಊರಿಗೆ ಹೋಗದೇ ಅಲ್ಲೇ ಝಂಡಾ ಊರೋದನ್ನು ಕೇಳಿದ್ದೇವೆ, ನೋಡಿದ್ದೇವೆ. ಆದರೆ ತೀರಾ ಹೋಟೆಲ್ ಗ್ರಾಹಕರೂ ತಿಂದ ಮೇಲೂ ಎದ್ದು ಹೋಗದೇ ಇದ್ದರೆ, ತಿಂದ ಅನ್ನ ಅವರಿಗೆ ಜೀರ್ಣ ಆಗೋದು ಹೇಗೆ ಅನ್ನೋದು ಮಾಲೀಕರ ಕಾಳಜಿ. ಇಂಥ ಗ್ರಾಹಕರ ಕಾರಣದಿಂದಾಗಿ ತಮ್ಮ ವ್ಯವಹಾರ ಬಿದ್ದುಹೋಗುತ್ತಿದೆ ಎನ್ನುವ ಮಾಲೀಕರು ಈಗ ಬೋರ್ಡ್ ಹಾಕುವ ಮೂಲಕ ಮೆಸೇಜ್ ಅನ್ನು ಗ್ರಾಹಕರಿಗೆ ತಲುಪಿಸುತ್ತಿದ್ದಾರೆ. ಬಹುತೇಕರು ಇಲ್ಲಿಯೇ ಕೂತು, ರಿಯಲ್ ಎಸ್ಟೇಟ್, ಮದುವೆ ಮಾತುಕತೆ, ರಾಜಕೀಯ ಮಾತಾಡೋದಷ್ಟೇ ಅಲ್ಲದೆ, ಒಂದ್ ಕಾಫಿ ಹೇಳಿ ಉದ್ಯೋಗದ ಸಂದರ್ಶನವನ್ನೂ ಮಾಡ್ತಾರೆ ಅನ್ನೋದು ಮಾಲೀಕರ ಅಳಲು. ದರ್ಶಿನಿ ಮಾಲೀಕರೇನೋ ಕುರ್ಚಿಯನ್ನೇ ಹಾಕದೆ ಈ ಸಮಸ್ಯೆಯಿಂದ ಪಾರಾಗುತ್ತಾರೆ. ಆದರೆ ಕುರ್ಚಿ, ಟೇಬಲ್ ಹಾಕಿರುವ ರೆಗ್ಯುಲರ್ ಹೋಟೆಲ್‌ಗಳಿಗೆ ಮಾತ್ರ ಕೆಲವು ರೆಗ್ಯುಲರ್ ಕಸ್ಟಮರ್‌ಗಳಿಂದ ಈ ಕಷ್ಟ ಎದುರಾಗಿದೆ. ಹಾಗಾಗಿ ಇವರಿಗೆ ಟೇಬಲ್ ಮ್ಯಾನರ್ಸ್ ಕಲಿಸದೆ ಬೇರೆ ದಾರಿ ಇಲ್ಲ ಪಾಪ.

ಸಂಪಾದಕರ ಸದ್ಯಶೋಧನೆ

ಯಾವ ಆಸನ ಸುರಕ್ಷಿತ?

ವಿಮಾನದಲ್ಲಿ ಯಾವ ಆಸನವು ಅತ್ಯಂತ ಸುರಕ್ಷಿತ? ಈ ಪ್ರಶ್ನೆಗೆ ಇಲ್ಲಿಯ ತನಕ ನಿಖರ, ಸ್ಪಷ್ಟ ಉತ್ತರ ಸಿಕ್ಕಿಲ್ಲ. ಏಕೆಂದರೆ ಇದು ಆಸನದ ಸ್ಥಾನ, ಅಪಘಾತದ ಸ್ವರೂಪ ಮತ್ತು ಇತರ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಈ ಪ್ರಶ್ನೆಗೆ ಉತ್ತರಿಸಲು, ಸುರಕ್ಷತೆಯನ್ನು ವಿವಿಧ ದೃಷ್ಟಿಕೋನಗಳಿಂದ, ಅಂದರೆ ಅಂಕಿ-ಅಂಶಗಳು, ತಾಂತ್ರಿಕ ಅಂಶಗಳು, ಅಪಘಾತದ ವಿಶ್ಲೇಷಣೆ ಮತ್ತು ಪ್ರಯಾಣಿಕರ ಆರಾಮದಿಂದ ಪರಿಗಣಿಸಬೇಕು. ವಿಮಾನ ಪ್ರಯಾಣವು ಇಂದಿನ ದಿನಗಳಲ್ಲಿ ಅತ್ಯಂತ ಸುರಕ್ಷಿತ ಸಾರಿಗೆ ಮಾಧ್ಯಮಗಳಲ್ಲಿ ಒಂದಾಗಿದೆ. ವಿಮಾನಯಾನ ಉದ್ಯಮವು ಕಟ್ಟುನಿಟ್ಟಾದ ನಿಯಮಾವಳಿಗಳನ್ನು ಅನುಸರಿಸುತ್ತದೆ ಮತ್ತು ಬೋಯಿಂಗ್, ಏರ್‌ಬಸ್‌ನಂಥ ವಿಮಾನ ತಯಾರಿಕಾ ಕಂಪನಿಗಳು ತಮ್ಮ ವಿಮಾನಗಳನ್ನು ತೀವ್ರ ಒತ್ತಡ ಮತ್ತು ಅಪಾಯಕಾರಿ ಪರಿಸ್ಥಿತಿಗಳಿಗೆ ಒಡ್ಡಿ ಪರೀಕ್ಷಿಸುತ್ತವೆ. ಆದರೂ, ವಿಮಾನ ಅಪಘಾತಗಳು ಸಂಭವಿಸಿದರೆ, ಕೆಲವು ಆಸನಗಳು ಇತರರಿಗಿಂತ ಸುರಕ್ಷಿತವಾಗಿರಬಹುದು ಎಂಬುದನ್ನು ಅಂಕಿ-ಅಂಶಗಳು ಮತ್ತು ಅಧ್ಯಯನಗಳು ಸೂಚಿಸುತ್ತವೆ. ವಿಮಾನದ ಆಸನದ ಸುರಕ್ಷತೆಯನ್ನು ಮೌಲ್ಯಮಾಪನ ಮಾಡುವಾಗ, ನಿರ್ಗಮನ ದ್ವಾರಗಳ ಸಾಮೀಪ್ಯ ಅಂದರೆ ತುರ್ತು ಸ್ಥಿತಿಯಲ್ಲಿ ಶೀಘ್ರವಾಗಿ ವಿಮಾನದಿಂದ ಹೊರಬರಲು ಸಹಾಯಕವಾಗುವ ಆಸನಗಳು, ವಿಮಾನದ ರಚನಾತ್ಮಕ ಸ್ಥಾನ, (ಉದಾಹರಣೆಗೆ ರೆಕ್ಕೆಗಳ ಬಳಿಯ ಆಸನಗಳು, ರಚನಾತ್ಮಕವಾಗಿ ಬಲಿಷ್ಠವಾಗಿರುತ್ತವೆ), ಅಪಘಾತದ ಸ್ವರೂಪ ಹಾಗೂ ಆಸನದ ಸ್ಥಾನ (ಕಿಟಕಿಯ ಬಳಿಯ ಆಸನ, ಕಾರಿಡಾರ್ ಆಸನ ಅಥವಾ ಮಧ್ಯದ ಆಸನ)ವನ್ನು ಪರಿಗಣಿಸಲಾಗುತ್ತದೆ. ವಿಮಾನ ಅಪಘಾತಗಳನ್ನು ವಿಶ್ಲೇಷಿಸಿದ ಹಲವು ಅಧ್ಯಯನಗಳು, ವಿಮಾನದ ಹಿಂಭಾಗದ ಆಸನಗಳು ಸಾಮಾನ್ಯವಾಗಿ ಸುರಕ್ಷಿತವೆಂದು ಸೂಚಿಸಿವೆ. 2007ರಲ್ಲಿ 'ಪಾಪ್ಯುಲರ್ ಮೆಕಾನಿಕ್ಸ್' ನಡೆಸಿದ ಅಧ್ಯಯನವು, 1971ರಿಂದ 2007ರವರೆಗಿನ ವಾಣಿಜ್ಯ ವಿಮಾನ ಅಪಘಾತಗಳನ್ನು ವಿಶ್ಲೇಷಿಸಿತು. ಈ ಅಧ್ಯಯನವು ತೋರಿಸಿದಂತೆ, ವಿಮಾನದ ಹಿಂಭಾಗದ ಆಸನಗಳಲ್ಲಿ ಕುಳಿತವರ ಬದುಕುವ ದರವು ಸರಾಸರಿ ಶೇ.69ರಷ್ಟಿದ್ದರೆ, ಮಧ್ಯ ಭಾಗದಲ್ಲಿ ಶೇ.56 ಮತ್ತು ಮುಂಭಾಗದಲ್ಲಿ ಶೇ.49 ಆಗಿತ್ತು. ಈ ಅಂಕಿ-ಅಂಶವು ವಿಮಾನದ ಹಿಂಭಾಗವು ಸಾಮಾನ್ಯವಾಗಿ ಸುರಕ್ಷಿತವೆಂದು ಸೂಚಿಸುತ್ತದೆ. ಇದಕ್ಕೆ ಕಾರಣವೇನೆಂದರೆ, ವಿಮಾನದ ಮುಂಭಾಗವು (ಕಾಕ್‌ಪಿಟ್ ಮತ್ತು ಫಸ್ಟ್-ಕ್ಲಾಸ್ ವಿಭಾಗ) ಸಾಮಾನ್ಯವಾಗಿ ಗಾಳಿಯಲ್ಲಿ ಘರ್ಷಣೆ ಅಥವಾ ರನ್‌ವೇ ಅಪಘಾತದಲ್ಲಿ ಮೊದಲಿಗೆ ತಗಲುವ ಭಾಗವಾಗಿರುತ್ತದೆ. ರೆಕ್ಕೆಗಳ ಬಳಿಯ ಆಸನಗಳು ರಚನಾತ್ಮಕವಾಗಿ ಬಲಿಷ್ಠವಾಗಿದ್ದರೂ, ಇಂಧನ ಟ್ಯಾಂಕ್‌ಗಳ ಸಾಮೀಪ್ಯವು ಬೆಂಕಿಯ ಅಪಾಯವನ್ನು ಹೆಚ್ಚಿಸಬಹುದು. ಹಿಂಭಾಗದ ಆಸನಗಳು ಈ ಎರಡೂ ಅಪಾಯಗಳಿಂದ ತುಲನಾತ್ಮಕವಾಗಿ ದೂರವಿರುತ್ತವೆ. 2015ರಲ್ಲಿ 'ಟೈಮ್' ಮ್ಯಾಗಜೀನ್‌ನ ಇನ್ನೊಂದು ವಿಶ್ಲೇಷಣೆಯು, 1985ರಿಂದ 2000ದವರೆಗಿನ 17 ವಿಮಾನ ಅಪಘಾತಗಳನ್ನು ಪರಿಶೀಲಿಸಿತು. ಈ ಅಧ್ಯಯನವು, ವಿಮಾನದ ಹಿಂಭಾಗದ ಮೂರನೇ ಭಾಗದಲ್ಲಿ ಕುಳಿತವರ ಬದುಕುವ ದರವು ಶೇ.32ರಷ್ಟು ಹೆಚ್ಚಿನದೆಂದು ಕಂಡುಕೊಂಡಿತು. ಆದರೆ, ಈ ಅಂಕಿ-ಅಂಶಗಳು ಸಾರ್ವತ್ರಿಕವಾಗಿ ಎಲ್ಲ ಅಪಘಾತಗಳಿಗೆ ಅನ್ವಯಿಸುವುದಿಲ್ಲ, ಏಕೆಂದರೆ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಮುಂಭಾಗದ ಆಸನಗಳು ಸುರಕ್ಷಿತವಾಗಿರಬಹುದು. ತುರ್ತು ಸ್ಥಿತಿಯಲ್ಲಿ, ವಿಮಾನದಿಂದ ಶೀಘ್ರವಾಗಿ ಹೊರಬರಲು ಸಾಧ್ಯವಾಗುವುದು ಬಚಾವಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಈ ಕಾರಣಕ್ಕಾಗಿ, 'ನಿರ್ಗಮನ ದ್ವಾರಗಳ (exit rows) ಬಳಿಯ ಆಸನಗಳು' ಸಾಮಾನ್ಯವಾಗಿ ಸುರಕ್ಷಿತವೆಂದು ಪರಿಗಣಿಸಲ್ಪಡುತ್ತವೆ. ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (FAA) ಮತ್ತು ಇತರ ವಿಮಾನಯಾನ ನಿಯಂತ್ರಣ ಸಂಸ್ಥೆಗಳು, ಈ ಆಸನಗಳಲ್ಲಿ ಕುಳಿತವರು ತುರ್ತು ಸಂದರ್ಭದಲ್ಲಿ ಸಿಬ್ಬಂದಿಗೆ ಸಹಾಯ ಮಾಡಲು ಸಮರ್ಥರಾಗಿರಬೇಕೆಂದು ಬಯಸುತ್ತವೆ. ನಿರ್ಗಮನ ದ್ವಾರಗಳ ಬಳಿಯ ಆಸನಗಳು, ವಿಶೇಷವಾಗಿ ರೆಕ್ಕೆಗಳ ಮೇಲಿರುವ ತುರ್ತು ನಿರ್ಗಮನ ದ್ವಾರಗಳ ಬಳಿಯವು, ತುರ್ತು ಸ್ಥಿತಿಯಲ್ಲಿ ಶೀಘ್ರವಾಗಿ ವಿಮಾನದಿಂದ ಹೊರಬರಲು ಅವಕಾಶ ನೀಡುತ್ತವೆ. ಆದರೆ, ಈ ಆಸನಗಳನ್ನು ಆಯ್ಕೆ ಮಾಡುವವರು ತಮಗೆ ಜವಾಬ್ದಾರಿಯೂ ಇದೆ ಎಂಬುದನ್ನು ಅರಿತಿರಬೇಕು, ಏಕೆಂದರೆ ತುರ್ತು ಸಂದರ್ಭದಲ್ಲಿ ನಿರ್ಗಮನ ದ್ವಾರವನ್ನು ತೆರೆಯಲು ಸಹಾಯ ಮಾಡಬೇಕಾಗಬಹುದು.

ಸೀಮೆಎಣ್ಣೆಯಿಂದ ಅಡುಗೆ ಅನಿಲದವರೆಗಿನ ಹಾದಿ!

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ

vveditoped@gmail.com

camohanbn@gmail.com

ಒಂದು ಕಾಲದಲ್ಲಿ ಬಡ ಮತ್ತು ಮಧ್ಯಮ ವರ್ಗದ ಮನೆಯಲ್ಲಿ ವಾರದಲ್ಲಿ ಮೂರೂ ದಿನ ಪಡಿತರ ಅಂಗಡಿಯ ಮುಂದೆ ಸೀಮೆಎಣ್ಣೆಗಾಗಿ ಸರತಿ ಸಾಲಿನಲ್ಲಿ ನಿಲ್ಲಬೇಕಿತ್ತು. ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ಸರತಿ ಸಾಲಿನಲ್ಲಿ ನಮ್ಮ ಮನೆಯ ಸೀಮೆಎಣ್ಣೆ ಡಬ್ಬ ಮೊದಲು ಇರಬೇಕೆಂದು ಕಲ್ಲು ಅಥವಾ ಖಾಲಿ ಡಬ್ಬವಿಟ್ಟು ಮನೆಗೆ ಬಂದು ಮಲಗಿ ಮತ್ತೆ ಎರಡು ಗಂಟೆಯ ನಂತರ ಸೀಮೆಎಣ್ಣೆ ಹೊತ್ತುತರುವ ಎತ್ತಿನಗಾಡಿಗಾಗಿ ಕಾಯಬೇಕಿತ್ತು. ಎತ್ತಿನಗಾಡಿಯಲ್ಲಿ ಸೀಮೆಎಣ್ಣೆ ಬಂದೊಡನೆ ಪಡಿತರ ಅಂಗಡಿ ಮುಂದೆ ಸರತಿ ಸಾಲಿನಲ್ಲಿ ನಿಂತಿದ್ದವರಿಗೆ ಎಲ್ಲಿಲ್ಲದ ಸಂಭ್ರಮ. ಪಡಿತರ ಅಂಗಡಿಯ ಮಾಲೀಕ ಪುಸ್ತಕವೊಂದನ್ನು ಹೊರತೆಗೆದು ನಮ್ಮ ತಿಂಗಳ ಪಡಿತರದ ಸೀಮೆಎಣ್ಣೆ ಪಾಲನ್ನು ಬರೆಯುತ್ತಿದ್ದ. ಸರತಿ ಸಾಲಿನಲ್ಲಿ ಮೊದಲು ನಿಂತವರಿಗೆ ಸೀಮೆಎಣ್ಣೆ ಸಿಕ್ಕಕೂಡಲೆ ಎಲ್ಲಿಲ್ಲದ ಸಂಭ್ರಮ. ಕೊನೆಯಲ್ಲಿ ಇದ್ದವರಿಗೆ ಸೀಮೆಎಣ್ಣೆ ಸಿಗದೆ ಬೇಜಾರಿನಲ್ಲಿ ಮನೆಗೆ ಹೊರಡುವ ದೃಶ್ಯಗಳು ಸಾಮಾನ್ಯವಾಗಿತ್ತು. ನಂತರ ಮನೆಗೆ ಬಂದು ಪಂಪ್ ಸ್ಟೋವ್‌ಗೆ ಸೀಮೆಎಣ್ಣೆ ಸುರಿದು ಬಾಕಿ ಉಳಿದ ಸೀಮೆಎಣ್ಣೆಯನ್ನು ಡಬ್ಬದಲ್ಲಿ ಭದ್ರವಾಗಿ ತಿಂಗಳ ಬಳಕೆಗಾಗಿ ಸಂಗ್ರಹಿಸಲಾಗುತ್ತಿತ್ತು. ಮತ್ತೊಂದೆಡೆ ಪಂಪ್ ಸ್ಟೋವ್ ಹಚ್ಚುವುದು ಮತ್ತೊಂದು ಕಥೆ. ಸಣ್ಣದೊಂದು ಸೂಜಿ ಮಾದರಿಯ ಕಡ್ಡಿಯಲ್ಲಿ ಒಲೆಯ ಉರಿಯುವ ಭಾಗಕ್ಕೆ ಚುಚ್ಚಿ ಸೀಮೆಎಣ್ಣೆ ಆಚೆ ಬಂದ ತಕ್ಷಣ ಬೆಂಕಿ ಹಚ್ಚಿ ಅಡುಗೆಗೆ ತಯಾರಿ ನಡೆಯುತ್ತಿತ್ತು. ಅಂದು ಅಡುಗೆ ಅನಿಲವೆಂಬುದು ಬಡವರಿಗೆ ಮತ್ತು ಮಧ್ಯಮವರ್ಗದವರಿಗೆ ನಿಲುಕದ ನಕ್ಷತ್ರವಾಗಿತ್ತು. ಸರಕಾರಿ ನೌಕರರು ಅಥವಾ ವ್ಯವಹಾರಸ್ಥರ ಮನೆಯಲ್ಲಿ ಮಾತ್ರ ಅಡುಗೆ ಅನಿಲ ಹೆಚ್ಚಾಗಿ ಕಾಣಸಿಗುತ್ತಿತ್ತು.

ನಂತರದ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಅಡುಗೆ ಅನಿಲದ ಬಳಕೆಯಲ್ಲಿ ಏರಿಕೆಯಾದರೂ, ವರ್ಷಕ್ಕೆ ಮೂರರಿಂದ ಐದು ಸಿಲಿಂಡರ್ ಮಾತ್ರ ಸಿಗುತ್ತಿತ್ತು. ಹಳ್ಳಿ ಜನರಿಗೆ ಅದೂ ಸಿಗುತ್ತಿರಲಿಲ್ಲ. 'ಗರೀಬಿ ಹಟಾವೋ' ಎಂದು ಹೇಳಿಕೊಂಡೇ ಚುನಾವಣೆ ನಡೆಸುತ್ತಿದ್ದ ಕಾಂಗ್ರೆಸ್ ಪಕ್ಷದ ಅವಧಿಯಲ್ಲಿ ಬಡವರ ಮನೆಯಲ್ಲಿ ನಡೆಯುತ್ತಿದ್ದ ಸೀಮೆಎಣ್ಣೆ ಮತ್ತು ಗ್ಯಾಸ್ ಸಿಲಿಂಡರ್ ಕಥೆ ಇದು. ಮೋದಿಯವರು ಅಧಿಕಾರಕ್ಕೆ ಬಂದ ನಂತರ ದೇಶದಾದ್ಯಂತ ಪ್ರತಿಯೊಂದು ಹಳ್ಳಿ ಮತ್ತು ನಗರಪ್ರದೇಶದ ಜನರಿಗೆ ಅಡುಗೆ ಅನಿಲದ ಸಂಪರ್ಕವನ್ನು ಕಲ್ಪಿಸುವ ಕೆಲಸ ಮಾಡಿದರು. ಕಳೆದ 11 ವರ್ಷಗಳಲ್ಲಿ ಸುಮಾರು 11 ಕೋಟಿಗೂ ಅಧಿಕ ಕುಟುಂಬಗಳಿಗೆ ಉಚಿತವಾಗಿ ಗ್ಯಾಸ್ ಸಿಲಿಂಡರ್ ಸಿಗುವ ಹಾಗೆ ಮಾಡಿದರು. ಸೀಮೆಎಣ್ಣೆ ಮತ್ತು ಪಂಪ್ ಸ್ಟೋವ್ ಎಂಬ ಪದ ಈಗಿನ ಪೀಳಿಗೆಯ ಮಕ್ಕಳ ಕಿವಿಗೆ ಬೀಳುವುದೇ ಇಲ್ಲದಂತಾಗಿದೆ. ಕಾಂಗ್ರೆಸ್ ಅವಧಿಯಲ್ಲಿ ಇದ್ದ ಹಾಗೆ ವರ್ಷಕ್ಕೆ ಬಳಸಬಹುದಾದ ಅಡುಗೆ ಅನಿಲದ ಮೇಲೆ ನಿಯಂತ್ರಣವಿಲ್ಲ. ಮನೆಯಲ್ಲಿ ಸಿಲಿಂಡರ್ ಖಾಲಿ ಆದಾಗಲೆಲ್ಲ ತರಿಸಿಕೊಳ್ಳಬಹುದು. ಹಳ್ಳಿ ಹಳ್ಳಿಗೂ ಅಡುಗೆ ಅನಿಲ ಸಂಪರ್ಕ ನೀಡಲಾಗಿದೆ, ಒಲೆಯ ಮುಂದೆ ಕುಳಿತು ಆರೋಗ್ಯ ಹಾಳುಮಾಡಿಕೊಳ್ಳುತ್ತಿದ್ದ ಹೆಣ್ಣು ಮಕ್ಕಳ ಆರೋಗ್ಯದಲ್ಲಿ ಚೇತರಿಕೆಯಾಗಿದೆ.

'ಗರೀಬಿ ಹಟಾವೋ' ಎಂದವರ ಕಾಲದ ಮತ್ತೊಂದು ದೃಶ್ಯವನ್ನು ನೆನಪಿಸಿಕೊಳ್ಳಬೇಕು. ಹಳ್ಳಿಗಳಿಗೆ ಬೆಳಗಿನ ಜಾವ ಭೇಟಿ ನೀಡಿದರೆ ಶೌಚಕ್ಕೆಂದು ಕೈಯಲ್ಲಿ ಚೊಂಬು ಹಿಡಿದು ಹೊಲದ ಕಡೆ ಹೋಗುತ್ತಿರುವ ದೃಶ್ಯ ಸಾಮಾನ್ಯವಾಗಿರುತ್ತಿತ್ತು. ಮತ್ತೊಂದೆಡೆ ರಸ್ತೆ ಬದಿಗಳಲ್ಲಿ ಕಕ್ಕ ಮಾಡುವ ದೃಶ್ಯ, ಹೊಲಗಳಲ್ಲಿ ನಡೆದುಕೊಂಡು ಹೋದಾಗ ಅದನ್ನು ತುಳಿದುಕೊಂಡು ಹೋಗಿದ್ದ ಅನೇಕ ಪ್ರಸಂಗಗಳು ಇನ್ನೂ ನೆನಪಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ 67 ವರ್ಷಗಳ ನಂತರವೂ ಹಳ್ಳಿಗಳಲ್ಲಿ ಸರಿಯಾದ ಶೌಚಾಲಯ ವ್ಯವಸ್ಥೆ ಇಲ್ಲದಂತೆ ಮಾಡಿದ್ದು ಕಾಂಗ್ರೆಸ್ಸಿನ ದೊಡ್ಡ ಸಾಧನೆ. ಮೋದಿಯವರು ಅಧಿಕಾರಕ್ಕೆ ಬಂದ ನಂತರ ಸ್ವಚ್ಛ ಭಾರತ್ ಅಭಿಯಾನದಲ್ಲಿ ಮನೆಮನೆಗೆ ಶೌಚಾಲಯಗಳ ನಿರ್ಮಾಣಕ್ಕೆ ಕೈಹಾಕಿದರು. ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಬಯಲಿನಲ್ಲಿ ಶೌಚಕ್ಕೆ ಹೋಗುವುದನ್ನು ತಡೆಯಲು ಸಾಧ್ಯವಾಯಿತು. ಅನೇಕ ಕಡೆಗಳಲ್ಲಿ ಹೆಣ್ಣುಮಕ್ಕಳು ಶೌಚಕ್ಕೆ ಹೋದಾಗ ಅತ್ಯಾಚಾರವಾಗುತ್ತಿದ್ದವು. ಹೆಣ್ಣುಮಕ್ಕಳು ಧೈರ್ಯದಿಂದ ಹೊರನಡೆಯಲು ಸಾಧ್ಯವಿರಲಿಲ್ಲ, ಅನೇಕ ಹೆಣ್ಣುಮಕ್ಕಳು ಭಯದಿಂದ ಶೌಚಕ್ಕೆ ಹೋಗುತ್ತಿರಲಿಲ್ಲ. ಹೆಣ್ಣುಮಕ್ಕಳ ಸಬಲೀಕರಣದ ಬಗ್ಗೆ ಮಾತನಾಡುವ ರಾಹುಲ್ ಗಾಂಧಿಯವರು ತಮ್ಮ ಮುತ್ತಜ್ಜನ ಕಾಲದಿಂದ, ಅಮ್ಮನ ಆಡಳಿತದ ಅವಧಿಯವರೆಗೂ ಕಾಂಗ್ರೆಸ್ ಪಕ್ಷ ಹೆಣ್ಣು ಮಕ್ಕಳಿಗೆ ಶೌಚಾಲಯದ ವ್ಯವಸ್ಥೆ ಮಾಡಿರಲಿಲ್ಲವೆಂಬುದನ್ನು ತಿಳಿಯಬೇಕು. ಮೋದಿಯವರು ಶೌಚಾಲಯದ ಬಗ್ಗೆ ಮಾತನಾಡಿದಾಗ ಕಾಂಗ್ರೆಸ್ ಪಕ್ಷದವರು ನಕ್ಕಿದ್ದರು. ಪ್ರಧಾನಿಯಾಗಿ ಇಷ್ಟು ಸಣ್ಣ ವಿಷಯದ ಬಗ್ಗೆ ಮಾತನಾಡುತ್ತಾರೆಂದು ಆಡಿಕೊಂಡಿದ್ದರು. ಮೋದಿಯವರ ಅವಧಿಯಲ್ಲಿ ಕಳೆದ 11 ವರ್ಷಗಳಲ್ಲಿ 12 ಕೋಟಿಗೂ ಅಧಿಕ ಶೌಚಾಲಯಗಳ ನಿರ್ಮಾಣವಾಗಿದೆ. ಹೆಣ್ಣುಮಕ್ಕಳು ಧೈರ್ಯದಿಂದ ಓಡಾಡುವಂತಾಗಿದೆ, ಅತ್ಯಾಚಾರ ಪ್ರಕರಣಗಳು ಕಡಿಮೆಯಾಗಿವೆ. ಮೋದಿಯವರ ಅವಧಿಯಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಹೆದ್ದಾರಿಗಳು, ವಿಮಾನ ನಿಲ್ದಾಣಗಳು ಮತ್ತು ಉತ್ತಮ ರೈಲ್ವೆ ವ್ಯವಸ್ಥೆಯ ಜತೆಗೆ ಬಡ ಹಾಗೂ ಮಧ್ಯಮವರ್ಗದವರಿಗೆ ಅತ್ಯವಶ್ಯಕವಾಗಿ ಬೇಕಿದ್ದ ಅಡುಗೆ ಅನಿಲ, ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆಯನ್ನು ಕೂಡ ಮಾಡಲಾಗಿದೆ.

ಒಂದು ಕಾಲದಲ್ಲಿ ಬೆಂಗಳೂರಿನಂಥ ಪ್ರದೇಶದಲ್ಲಿ ಒಂದು ರಸ್ತೆಗೆ ಒಂದು 'ಬೋರ್ ವೆಲ್' ಅಥವಾ ರಸ್ತೆ ಕೊನೆಯಲ್ಲಿ 'ನೀರಿನ ನಲ್ಲಿ' ಇರುತ್ತಿತ್ತು. ವಾರದಲ್ಲಿ ಎರಡರಿಂದ ಮೂರು ಬಾರಿ ನೀರನ್ನು ಬಿಡಲಾಗುತ್ತಿತ್ತು. ನಲ್ಲಿಗಳ ಮುಂದೆ ಬಿಂದಿಗೆಯನ್ನಿಟ್ಟು ಸರತಿ ಸಾಲಿನಲ್ಲಿ ನೀರಿಗಾಗಿ ಕಾಯುವ ದೃಶ್ಯ ಸಾಮಾನ್ಯವಾಗಿತ್ತು. ನಲ್ಲಿ ಅಥವಾ ಬೋರ್ ವೆಲ್‌ನಿಂದ ನೀರು ತಂದು ಮನೆಯಲ್ಲಿರುವ ದೊಡ್ಡ ಹಂಡೆಗಳಿಗೆ ತುಂಬಿಸುವುದು ದೊಡ್ಡ ಕೆಲಸವಾಗಿತ್ತು. ನೀರಿಗಾಗಿ ನಾರಿಯರು ನಲ್ಲಿಗಳ ಮುಂದೆ ಜಗಳವಾಡುವ ದೃಶ್ಯ ಸಾಮಾನ್ಯವಾಗಿರುತ್ತಿತ್ತು. ಅಪ್ಪಿ ತಪ್ಪಿ ಆ ವಾರ ನೀರು ಬರಲಿಲ್ಲವೆಂದರೆ ಮನೆಯಲ್ಲಿ ನೀರಿನ ಮಿತಬಳಕೆಯ ಆಜ್ಞೆ ಅಮ್ಮನಿಂದ ಬರುತ್ತಿತ್ತು. ಮತ್ತೊಂದೆಡೆ ಹಳ್ಳಿಗಳ ಪರಿಸ್ಥಿತಿ ತೀರಾ ಕೆಟ್ಟದಾಗಿತ್ತು. ನೀರಿಗಾಗಿ ನಾರಿಯರು ಕಿಲೋಮೀಟರುಗಟ್ಟಲೆ ನಡೆದು ಹೋಗಬೇಕಿತ್ತು. ಆಳವಾದ ಬಾವಿಯಲ್ಲಿ ಬಿಂದಿಗೆಯನ್ನು ಬಿಟ್ಟು ನೀರು ಸೇದುವ ದೃಶ್ಯ ಸಾಮಾನ್ಯವಾಗಿತ್ತು. ಗರೀಬಿ ಹಟಾವೋ ಎಂದು ಹೇಳಿದ್ದ ಕಾಂಗ್ರೆಸ್ ಪಕ್ಷ ಭಾರತೀಯರಿಗೆ ಸರಿಯಾದ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಲ್ಲಿ ವಿಫಲವಾಗಿತ್ತು. ಮನೆಗಳಿಗೆ ನೇರವಾಗಿ BWSSB ವತಿಯಿಂದ ನೀರಿನ ಸಂಪರ್ಕ ಪಡೆಯುವುದು ಬಡ ಮತ್ತು ಮಧ್ಯಮ ವರ್ಗಕ್ಕೆ ಸವಾಲಿನ ಕೆಲಸವಾಗಿತ್ತು. ನೀರಿನ ಸಂಪರ್ಕವಿರುವ ಮನೆಯ ಬಾಡಿಗೆ ಹೆಚ್ಚಿರುತ್ತಿತ್ತು. ನೀರಿನ ಸಂಪರ್ಕವಿಲ್ಲದ ಮನೆಯ ಬಾಡಿಗೆ ಕಡಿಮೆ ಇರುತ್ತಿತ್ತು.

ಮೋದಿಯವರು ಅಧಿಕಾರಕ್ಕೆ ಬಂದ ನಂತರ ದೇಶದ ಮೂಲೆಮೂಲೆಗಳಲ್ಲಿ ಮನೆಗಳ ಮುಂದೆ ನಲ್ಲಿನೀರಿನ ವ್ಯವಸ್ಥೆ ಮಾಡಿದರು. ಕಳೆದ 11 ವರ್ಷಗಳಲ್ಲಿ ದೇಶದಾದ್ಯಂತ ಸುಮಾರು 15 ಕೋಟಿ ಕುಟುಂಬಗಳಿಗೆ ಮನೆಮುಂದೆ ಇಂಥ ವ್ಯವಸ್ಥೆ ಕಲ್ಪಿಸಲಾಗಿದೆ. ನೀರಿಗಾಗಿ ರಸ್ತೆ ತುದಿಯ ನಲ್ಲಿಯ ಮುಂದೆ ಜಗಳವಾಡುವ ದೃಶ್ಯಗಳು ಇಲ್ಲದಂತಾಗಿದೆ. ಮೋದಿಯವರು ಕೇವಲ ಅಂಬಾನಿ ಮತ್ತು ಅದಾನಿಯವರಿಗೆ ಸಹಾಯ ಮಾಡುತ್ತಾರೆಂದು ಬೊಬ್ಬೆ ಹೊಡೆಯುವ ರಾಹುಲ್ ಗಾಂಧಿಯವರು ಉತ್ತರಿಸಬೇಕಾದ ಪ್ರಶ್ನೆಯೆಂದರೆ, ಮೋದಿಯವರು ಅಂಬಾನಿ ಮತ್ತು ಅದಾನಿಗೆ ಶೌಚಾಲಯ ಕಟ್ಟಿಸಲಿಲ್ಲ, ಅಂಬಾನಿ ಮತ್ತು ಅದಾನಿ ಮನೆ ಮುಂದೆ ನಲ್ಲಿನೀರಿನ ವ್ಯವಸ್ಥೆ ಮಾಡಲಿಲ್ಲ, ಅವರ ಕುಟುಂಬಕ್ಕೆ ಉಚಿತ ಸಿಲಿಂಡರ್ ವ್ಯವಸ್ಥೆ ಕಲ್ಪಿಸಲಿಲ್ಲ. 2014ರಲ್ಲಿ ಒಂದು ಜಿಬಿ ಇಂಟರ್‌ನೆಟ್ ಬೆಲೆ 270 ರುಪಾಯಿ ಇತ್ತು. ಆದರೆ ಮೋದಿಯವರ ಅಧಿಕಾರಾವಧಿಯ 11 ವರ್ಷಗಳ ನಂತರ ಒಂದು ಜಿಬಿ ಇಂಟರ್‌ನೆಟ್ ಬೆಲೆ 10 ರುಪಾಯಿಗೆ ಇಳಿದಿದೆ. ಇಂಟರ್‌ನೆಟ್ ಮೂಲಕ ಯುಟ್ಯೂಬ್ ಮತ್ತು ಇತರ ಸಾಮಾಜಿಕ ಜಾಲತಾಣಗಳಲ್ಲಿ ತಿಂಗಳಿಗೆ ಲಕ್ಷಾಂತರ ರುಪಾಯಿ ದುಡಿಯುವ ಉದ್ಯೋಗಗಳು ಸೃಷ್ಟಿಯಾಗಿವೆ. ಮನೆಯಲ್ಲಿ ಕುಳಿತು ಅಡುಗೆ ವಿಡಿಯೋ ಮಾಡಿ ಅನೇಕ ಗೃಹಿಣಿಯರು ತಿಂಗಳಿಗೆ ಲಕ್ಷಾಂತರ ರೂಪಾಯಿ ಸಂಪಾದಿಸುತ್ತಿದ್ದಾರೆ.

ಒಂದು ಅಂದಾಜಿನ ಪ್ರಕಾರ 1997ರವರೆಗೂ ಭಾರತದಲ್ಲಿ ಕೇವಲ 337 ಕಿಲೋಮೀಟರುಗಳಷ್ಟು ನಾಲ್ಕು ಪಥದ ರಸ್ತೆಗಳಿದ್ದವು. ಸ್ವಾತಂತ್ರ್ಯ ಬಂದು 50 ವರ್ಷ ಕಳೆದಿದ್ದರೂ ಇಷ್ಟು ಕಡಿಮೆಯ ನಾಲ್ಕು ಪಥದ ರಸ್ತೆಗಳಿದ್ದವೆಂದರೆ ತೆರಿಗೆ ಹಾಗೂ ಸಾಲದ ಹಣವನ್ನು ಕಾಂಗ್ರೆಸ್ ಸರಕಾರ ಯಾವ ಪುರುಷಾರ್ಥಕ್ಕೆ ಬಳಸುತ್ತಿತ್ತೆಂಬುದನ್ನು ಅರ್ಥಮಾಡಿಕೊಳ್ಳಿ. ಅಟಲ್ ಬಿಹಾರಿ ವಾಜಪೇಯಿಯವರ ಅಧಿಕಾರಾವಧಿಯಲ್ಲಿ ಕೇವಲ ಐದು ವರ್ಷಗಳಲ್ಲಿ 'ಸುವರ್ಣ ಚತುಷ್ಪಥ' ಯೋಜನೆಯ ಮೂಲಕ ದೇಶದ ನಾಲ್ಕು ಮಹಾನಗರಗಳನ್ನು ಸಂಪರ್ಕಿಸಲಾಯಿತು. ಇಂದಿನ ಭಾರತದ ಆರ್ಥಿಕ ಬೆಳವಣಿಗೆಯ ಪ್ರಮುಖ ರೂವಾರಿ ಸುವರ್ಣ ಚತುಷ್ಪಥ ಯೋಜನೆ. ಅವರದ್ದೇ ದಾರಿಯಲ್ಲಿ ಸಾಗುತ್ತಿರುವ ಮೋದಿಯವರು ಪ್ರತಿನಿತ್ಯ ಸುಮಾರು 38 ಕಿಲೋಮೀಟರುಗಳಷ್ಟು ಹೆದ್ದಾರಿ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಆರ್ಥಿಕ ಬೆಳವಣಿಗೆಯ ಚಟುವಟಿಕೆಗೆ ಮತ್ತಷ್ಟು ಚುರುಕು ಮುಟ್ಟಿಸಿದ್ದಾರೆ.

ನರೇಂದ್ರ ಮೋದಿಯವರ ಅಂತಾರಾಷ್ಟ್ರೀಯ ಪ್ರವಾಸಗಳ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುವ ಕಾಂಗ್ರೆಸ್ಸಿಗರಿಗೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವು ಕಂಡಿರುವ ಯಶಸ್ಸಿನ ಬಗ್ಗೆ ಮಾತನಾಡಲಾಗುವುದಿಲ್ಲ. ಜಗತ್ತಿನ ಬಹುತೇಕ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸುವಲ್ಲಿ ಮೋದಿಯವರು ಯಶಸ್ವಿಯಾಗಿದ್ದಾರೆ. ಉತ್ತಮ ವಿದೇಶಾಂಗ ನೀತಿಯ ಫಲವಾಗಿ ಇಂದು ಭಾರತಕ್ಕೆ ವಿದೇಶಿ ಬಂಡವಾಳದ ಸುರಿಮಳೆಯಾಗುತ್ತಿದೆ. ನೋಡನೋಡುತ್ತಲೇ ಚೀನಾ ದೇಶಕ್ಕೆ ಆರ್ಥಿಕವಾಗಿ ಶಾಕ್ ನೀಡಿದ ಮೋದಿ, ಚೀನಾ ದೇಶದಲ್ಲಿದ್ದಂಥ ಹಲವು ಕಂಪನಿಗಳು ಭಾರತಕ್ಕೆ ತಮ್ಮ ವ್ಯವಹಾರವನ್ನು ಸ್ಥಳಾಂತರಿಸುವಂತೆ ಮಾಡಿದ್ದರು. ದಕ್ಷಿಣ ಕೊರಿಯಾ ದೇಶದ SAMSUNG ಮೊಬೈಲ್ ಸಂಸ್ಥೆಯು ತನ್ನ ಎರಡನೇ ಉತ್ಪಾದನಾ ಘಟಕವನ್ನು ಉತ್ತರ ಪ್ರದೇಶದಲ್ಲಿ ಸ್ಥಾಪಿಸಿದೆ, KIA ಕಂಪನಿ ಆಂಧ್ರಪ್ರದೇಶದ ಪೆನುಕೊಂಡ ಬಳಿ ತನ್ನ ಉತ್ಪಾದನಾ ಘಟಕವನ್ನು ಸ್ಥಾಪಿಸಿದೆ, APPLE ಕಂಪನಿ ತನ್ನ ಉತ್ಪಾದನಾ ಘಟಕವನ್ನು ಕೋಲಾರದ ನರಸಾಪುರದಲ್ಲಿ ಸ್ಥಾಪಿಸಿದೆ. ಚೀನಾ ದೇಶದ XIOMI ಮೊಬೈಲ್ ಉತ್ಪಾದನಾ ಘಟಕ ವಿಶಾಖಪಟ್ಟಣದಲ್ಲಿದೆ, TESLA ಕಂಪನಿ ಬೆಂಗಳೂರಿನಲ್ಲಿ ನೋಂದಣಿ ಮಾಡಿಸಿದೆ. AMAZON ಹಾಗೂ TESLA ಕಂಪನಿಯ ಸಂಸ್ಥಾಪಕರು ಉಪಗ್ರಹಗಳ ಮೂಲಕ ದೇಶದ ಮೂಲೆ ಮೂಲೆಗಳನ್ನು ತಲುಪುವ ಅಂತರ್ಜಾಲ ಸೇವೆಯನ್ನು ನೀಡಲು ಭಾರತಕ್ಕೆ ಬರುತ್ತಿದ್ದಾರೆ. ಕಳೆದ 11 ವರ್ಷಗಳಲ್ಲಿ ಬದಲಾದ ಭಾರತದಲ್ಲಿ ಸೀಮೆಎಣ್ಣೆ ಬಳಸುತ್ತಿದ್ದ ಅಡುಗೆ ಮನೆಯಲ್ಲಿ ಅಡುಗೆ ಅನಿಲ ಬಂದಿದೆ. ಬಯಲಿನಲ್ಲಿನ ಶೌಚಕ್ಕೆ ಬ್ರೇಕ್ ಬಿದ್ದಿದೆ. ರಸ್ತೆ ತುದಿಯ ನಲ್ಲಿಗಳ ಮುಂದೆ ಸರತಿ ಸಾಲಿನಲ್ಲಿ ನಿಂತು ನಾರಿಯರು ನೀರುತರುವ ಪರಿಸ್ಥಿತಿಯಿಲ್ಲ. ಕೇವಲ ಅಂಬಾನಿ ಮತ್ತು ಅದಾನಿಯನ್ನು ಮುನ್ನೆಲೆಗೆ ತಂದು ಮಾತನಾಡುವ ಕಾಂಗ್ರೆಸ್ಸಿಗರು ಮೋದಿಯವರು ಬಡ ಮತ್ತು ಮಧ್ಯಮ ವರ್ಗದವರ ಜೀವನದಲ್ಲಿ ತಂದಂಥ ಆಮೂಲಾಗ್ರ ಬದಲಾವಣೆಯ ಬಗ್ಗೆ ತುಟಿ ಬಿಚ್ಚುವುದಿಲ್ಲ.

ಟೂರಿಸ್ಟ್ ಫ್ಯಾಮಿಲಿ ಅಲ್ಲ ಇದು ಟೂಲ್‌ಕಿಟ್ ಫ್ಯಾಮಿಲಿ

ಪದಸಾಗರ

ನವೀನ್ ಸಾಗರ್

vveditoped@gmail.com

naveensagar2709@gmail.com

ಮನಸ್ಸು ಕಳೆದ 6 ತಿಂಗಳುಗಳಿಂದ ಧ್ಯಾನಿಸುತ್ತಿರುವುದು ಒಂದೇ ವಿಷಯ. ಪ್ರವಾಸ ಪ್ರವಾಸ ಪ್ರವಾಸ! ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ('ಎಐ') ಇತ್ತೀಚಿನ ದಿನಗಳಲ್ಲಿ ನನ್ನನ್ನು ವಿಪರೀತ ಎನ್ನುವಷ್ಟು ವಿಸ್ಮಯಗೊಳಿಸಿದ ವಿಚಾರ. ಎಷ್ಟು ಅಂದರೆ, ಮನಸಲ್ಲಿ ಅಂದುಕೊಳ್ಳೋದೆಲ್ಲ ನನ್ನ ಮೊಬೈಲ್ ಮತ್ತು ಕಂಪ್ಯೂಟರಿಗೆ ಗೊತ್ತಾಗ್ತಾ ಇದೆಯಾ ಅನ್ನುವಷ್ಟು. ನಾವು ಮೊಬೈಲಿನಲ್ಲಿ ಸರ್ಚ್ ಮಾಡೋದನ್ನು, ಹೆಚ್ಚು ನೋಡೋದನ್ನು, ನಮ್ಮ ಆಸಕ್ತಿಗಳನ್ನು ಆಧರಿಸಿ ಅಂಥದ್ದೇ ವಿಷಯಗಳನ್ನು ನಮ್ಮ ಮುಂದೆ ಗುಡ್ಡೆ ಹಾಕುವುದು, ಸಜೆಸ್ಟ್ ಮಾಡೋದು ಒಂದು ಹಂತದ ಅಚ್ಚರಿಯಾಗಿತ್ತು. ಆದರೆ ಆ ನಂತರ ನಾವು ಮನೆಯಲ್ಲಿ ಸುಮ್ಮನೆ ಮಾತನಾಡಿಕೊಳ್ಳೋದನ್ನೂ ನಮ್ಮ ಮೊಬೈಲ್‌ಗಳು ಕೇಳಿಸಿಕೊಂಡು ಅರ್ಥ ಮಾಡಿಕೊಂಡು ನಮಗೆ ರೆಕಮಂಡೇಷನ್ ಕೊಡೋಕೆ ಶುರುಮಾಡಿದವು. ಇದಂತೂ ಭಯ ಮತ್ತು ಅಚ್ಚರಿ ಎರಡನ್ನೂ ಒಮ್ಮೆಗೇ ಮೂಡಿಸಿಬಿಟ್ಟಿತ್ತು. ಮನೆಗೆ ಹೊಸತೊಂದು ಮಂಚ ಬೇಕು ಅಂತ ನಾನು-ಅಮ್ಮ ಎದುರು ಬದುರು ನಿಂತು ಮಾತನಾಡಿಕೊಂಡದ್ದನ್ನು ಮೊಬೈಲ್ ಕೇಳಿಸಿಕೊಳ್ಳುತ್ತೆ. ಮೊಬೈಲಿನ ಸೋಷಿಯಲ್ ಮೀಡಿಯಾಗಳು, ಅಪ್ಲಿಕೇಶನ್‌ಗಳು ಅದಕ್ಕೆ ರಿಯಾಕ್ಟ್ ಮಾಡುತ್ತವೆ ಅಂದ್ರೆ ಈ ಮಾಯೆಗೆ ಏನಂತ ಹೇಳಬೇಕು. ನಾವು ಎಲ್ಲ ಅಪ್ಲಿಕೇಶನ್‌ಗಳಿಗೆ ಮೈಕ್ರೋಫೋನ್, ಕ್ಯಾಮೆರಾ, ಕಾಂಟ್ಯಾಕ್ಟ್, ಲೊಕೇಶನ್ ಇವೆಲ್ಲದರ ಆಕ್ಸೆಸ್ ಕೊಟ್ಟಿದ್ದೇವೆ. ಹೀಗಾಗಿ ಅದು ನಮ್ಮನ್ನು ಅರ್ಥಮಾಡಿಕೊಳ್ಳುತ್ತಿದೆ ಅಂತ ಅರ್ಥವೇನೋ ಆಯ್ತು. ಆದರೂ ನಮ್ಮ ಖಾಸಗಿತನ, ನಮ್ಮ ಗೋಪ್ಯತೆ ಹೀಗೆಲ್ಲ ಕಳೆದುಹೋಗಿಬಿಡ್ತಾ ಎಂದು ದಿಗಿಲಾಗುತ್ತದೆ. ನಾವು ಮೊಬೈಲನ್ನು ಜೇಬಲ್ಲಿಟ್ಟುಕೊಂಡು ಓಡಾಡಿರೋ ಜಾಗಗಳೆಲ್ಲವನ್ನು ಆಧರಿಸಿ ನಮ್ಮ ಅಭಿರುಚಿ ಅಗತ್ಯಗಳನ್ನು ಈ ಜಗತ್ತು ನಿರ್ಧರಿಸುತ್ತಿದೆ ಅಂದ್ರೆ, ಜಗತ್ತು ನಮ್ಮ ಯೋಚನೆಗೆ ತಕ್ಕಂತೆ ವರ್ತಿಸಿ ನಮ್ಮ ಬದುಕನ್ನು ಸುಲಭಗೊಳಿಸುತ್ತಿದೆ ಅಂತ ಖುಷಿಪಡಬೇಕಾ? ಅಥವಾ ನಮ್ಮನ್ನು ನಿಯಂತ್ರಿಸುತ್ತಿದೆ ಅಂತ, ನಮ್ಮ ಪ್ರೈವೆಸಿ ನುಚ್ಚುನೂರು ಮಾಡಿ ನಮ್ಮನ್ನೇ ಆಳುತ್ತಿದೆ ಎಂದು ಬೇಸರಪಟ್ಟುಕೊಳ್ಳಬೇಕಾ?

ಗೊತ್ತಿಲ್ಲ. ಆದರೆ ಈ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅನ್ನೋದು ನಮ್ಮ ನ್ಯಾಚುರಲ್ ಇಂಟೆಲಿಜೆನ್ಸ್‌ನ ಪ್ರತಿರೂಪ ಅಲ್ಲವಾ? ನಾನು ನನ್ನ ಬರಹದ ಮೊದಲ ಸಾಲಿಗೆ ಬರುತ್ತೇನೆ. ನಾನು ಪ್ರವಾಸದ ಬಗ್ಗೆ ಧೇನಿಸುತ್ತಿದ್ದೇನೆ, ಗೂಗಲ್‌ನಲ್ಲಿ, ಯುಟ್ಯೂಬ್, ಇನ್‌ಸ್ಟಾ, ಫೇಸ್ಬುಕ್, ಟ್ವಿಟರ್‌ನಲ್ಲಿ ಪ್ರವಾಸದ ಬಗ್ಗೆಯೇ ಜಾಲಾಡುತ್ತೇನೆ ಎಂಬ ಕಾರಣಕ್ಕೆ ನನಗೆ ಕೇವಲ ಪ್ರವಾಸಿ ಸಂಬಂಧಿ ವಿಷಯಗಳೇ ಮತ್ತೆ ಮತ್ತೆ ಫೀಡ್‌ನಲ್ಲಿ ಬರುವುದು ಓಕೆ. 'ಎಐ' ಕೈಚಳಕ ಎಂದು ಒಪ್ಪಿಕೊಂಡುಬಿಡುತ್ತೇನೆ. ಆದರೆ ನನಗೆ ಸಿಗುವ ವ್ಯಕ್ತಿಗಳು, ನನ್ನನ್ನು ಮಾತನಾಡಿಸುವವರು, ನನಗೆ ಫೋನ್ ಮಾಡುವವರು, ಅಕ್ಕಪಕ್ಕದ ಮನೆಯವರು, ಎಲ್ಲರೂ ಪ್ರವಾಸದ ಬಗ್ಗೆಯೇ ಮಾತಾಡೋದು ಯಾವ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್? ಇದನ್ನು ನ್ಯಾಚುರಲ್ ಇಂಟೆಲಿಜೆನ್ಸ್ ಅನ್ನಬಹುದಾ? ನಾನು ಯಾವ ಕೆಲಸದಲ್ಲಿದ್ದೇನೆ ಅಂತ ಅರ್ಥಮಾಡಿಕೊಂಡು ಅದರ ಕುರಿತೇ ನನ್ನ ಸುತ್ತಲಿನ ಸಮಾಜ ರಿಯಾಕ್ಟ್ ಮಾಡುವುದು ಬಹಳ ಸಹಜ ಕ್ರಿಯೆ ಅಲ್ವಾ? ನಾನು ಕ್ರಿಕೆಟ್ ಪ್ರೇಮಿ ಎಂದು ಗೊತ್ತಾದರೆ ನನ್ನ ಜತೆ ಕ್ರಿಕೆಟ್ ಆಸಕ್ತರೇ ಮಾತನಾಡುತ್ತಾರೆ. ರಾಜಕೀಯ ಆಸಕ್ತನಾದರೆ ಅದನ್ನೇ ಮಾತನಾಡುವವರು ಹತ್ತಿರವಾಗುತ್ತಾರೆ. ಸಿನಿಮಾ, ಫಿಟ್ನೆಸ್, ಸೆಕ್ಸ್, ಎಲ್ಲವೂ ಹೀಗೆಯೇ. ಈ ಸಹಜಬುದ್ಧಿಮತ್ತೆಯ ಪ್ಯಾಟರ್ನ್ ಇಟ್ಕೊಂಡೇ ಸೃಷ್ಟಿಯಾದದ್ದು ಕೃತಕ ಬುದ್ಧಿಮತ್ತೆ.

ಆದರೆ ಇವೆರಡನ್ನೂ ಮೀರಿ ನನ್ನನ್ನು ಅಚ್ಚರಿಗೊಳಿಸುವುದು ಪ್ರಕೃತಿ ನಮ್ಮ ಆಲೋಚನೆಗೆ ತಕ್ಕಂತೆ ವರ್ತಿಸುತ್ತಿದೆ ಎಂಬ ಅಂಶ. ಅದು ನಿಜವಾಗಿಯೂ ನಮ್ಮ ಆಲೋಚನೆಗೆ ಅನುಗುಣವಾಗಿ ವರ್ತಿಸುತ್ತಿರುತ್ತದೆಯೋ ಅಥವಾ ನಮಗೆ ಹಾಗನಿಸುತ್ತಿರುತ್ತದೆಯೋ ಇಂದಿಗೂ ಗೊಂದಲವೇ. ನಾನು 'ಪ್ರವಾಸಿ ಪ್ರಪಂಚ' ಪತ್ರಿಕೆಗೆ ಸಿದ್ಧತೆ ನಡೆಸುತ್ತಾ ಇದ್ದಾಗ ಅತ್ತ ನನ್ನ ಇನ್ನೊಂದು ಫೇವರಿಟ್ ಕ್ಷೇತ್ರವಾದ ಸಿನಿಮಾರಂಗದಲ್ಲಿ 'ಬ್ಯಾಕ್-ಟು-ಬ್ಯಾಕ್' ಟ್ರಾವೆಲ್ ಸಂಬಂಧಿ ಸಿನಿಮಾಗಳೇ ರಿಲೀಸಾಗ್ತಾ ಇದ್ದವು. ನೋಡಿದವರು ಏನಂತಾರೆ.. ಅದು ಪ್ರಯಾಣದ ಕಥೆಯೇ. 'ಪಾರು ಪಾರ್ವತಿ' ಅಂತ್ಯಾವುದೋ ಒಂದು ಸಿನಿಮಾ ಬಂತು. ಅದೂ ಒಂದು 'ಸೋಲೋ ಟ್ರಿಪ್'ನ ಕಥೆಯೇ. ಅರೆ ಇದು ಹೇಗೆ ಸಾಧ್ಯ? ನಾನು ಟ್ರಾವೆಲ್ ಟೂರಿಸಂ ಬಗ್ಗೆ ಯೋಚಿಸುತ್ತಿರುವುದಕ್ಕೆ ಪ್ರತಿಯಾಗಿ ಯೂನಿವರ್ಸ್ ಇಂಥದ್ದನ್ನೇ ನನ್ನ ಮುಂದೆ ಹರವಿಡುತ್ತಿದೆಯಾ? ಇಲ್ಲ ಅದು ಜಗತ್ತಿನ ಪ್ರತಿ ಆಲೋಚನೆಗೂ ರಿಯಾಕ್ಟ್ ಮಾಡುತ್ತದೆ. ಆದರೆ ನಮಗೆ ಕಾಣಿಸೋದು ನಮ್ಮ ಆಸಕ್ತಿಯ ಸುತ್ತಲಿನದ್ದು. ಇನ್ಯಾರೋ ಹಣಕಾಸಿನ ಬಗ್ಗೆಯೇ ಯೋಚಿಸುತ್ತಿರುವವನಿಗೆ ಲಕ್ಕೀ ಭಾಸ್ಕರ್, ಜೀಬ್ರಾ ಥರದ ಸಿನಿಮಾ ಕಂಡು, 'ಅರೆ! ನನ್ನ ಆಲೋಚನೆ ಅರ್ಥ ಮಾಡಿಕೊಂಡಂಥ ಸಿನಿಮಾ ಬಂದಿದ್ಯಲ್ಲ, ಇದು ಹೇಗೆ?' ಅಂತ ಅಚ್ಚರಿಯಾಗ್ತಾ ಇರಬಹುದು. ಅವನ ಜಗತ್ತಲ್ಲೂ ಟ್ರಾವೆಲ್ ಸಿನಿಮಾ ಬಂದಿರುತ್ತದೆ. ನನ್ನ ಜಗತ್ತಲ್ಲೂ ಹಣದ ಸಿನಿಮಾ ಬಂದಿರುತ್ತದೆ. ಆದರೆ ನಮಗೆ ಕಾಣಿಸೋದು ನಮ್ಮ ಆಲೋಚನೆಯ ಸುತ್ತಲಿರೋದು ಮಾತ್ರ. ಇಲ್ಲಿ ಜಗತ್ತಿಗೆ ನಾವು ರಿಯಾಕ್ಟ್ ಮಾಡ್ತಿದೀವೋ, ನಮಗೆ ಜಗತ್ತು ರಿಯಾಕ್ಟ್ ಮಾಡ್ತಿದೆಯೋ ಎಂಬುದು ಬಗೆಹರಿಯದ ಒಗಟು. ಪರಸ್ಪರ ರಿಯಾಕ್ಟ್ ಮಾಡಿಕೊಳ್ಳುತ್ತಿದ್ದೇವೆ ಎಂಬುದು ಅಂತಿಮ ಸತ್ಯ.

ಅಸಲಿಗೆ ನಾನು ಬರೆಯಹೊರಟದ್ದು ಮೇಲಿನ ವಿಷಯ ಅಲ್ಲವೇ ಅಲ್ಲ. ನಾನು ಬರೆಯಬೇಕೆಂದುಕೊಂಡಿದ್ದು 'ಟೂರಿಸ್ಟ್ ಫ್ಯಾಮಿಲಿ' ಎಂಬ ತಮಿಳು ಸಿನಿಮಾ ಬಗ್ಗೆ. ಒನ್ಸ್ ಅಗೇನ್ ಪ್ರವಾಸವನ್ನೇ ಆವಾಹಿಸಿಕೊಂಡಿರುವ ನನಗೆ ಕಳೆದ ಒಂದು ತಿಂಗಳಿಂದ ಈ ಟೂರಿಸ್ಟ್ ಫ್ಯಾಮಿಲಿ ಎಂಬ ಪೋಸ್ಟರ್ ಫೇಸ್‌ಬುಕ್‌ನಲ್ಲಿ ಆಗಾಗ್ಗೆ ಕಾಣಿಸಿಕೊಳ್ತಾನೇ ಇತ್ತು. ನಾನು ಇದನ್ನು ನಿರ್ಲಕ್ಷಿಸುತ್ತಲೇ ಇದ್ದೆ. ಆದರೆ ಕಳೆದ ಒಂದು ವಾರದಿಂದ ಈ ಚಿತ್ರ ಒಟಿಟಿಯಲ್ಲಿ ಟ್ರೆಂಡಿಂಗಿನಲ್ಲಿದೆ. ಜನ ಮುಗಿಬಿದ್ದು ನೋಡ್ತಿದ್ದಾರೆ. ನೋಡಿದ ನಂತರ ಅಭಿಪ್ರಾಯ ಬರೆಯುತ್ತಿದ್ದಾರೆ. ಮೊದಲ ಇನ್ನಿಂಗ್ಸಿನಲ್ಲಿ ಬಂದ ಅಭಿಪ್ರಾಯಗಳೆಲ್ಲ ಸೂಪರ್ ಪಾಸಿಟಿವ್. ''ಇಂಥ ಚಿತ್ರ ನಮ್ಮ ಕನ್ನಡದವ್ರು ಯಾಕೆ ಮಾಡಲ್ಲ, ಆಕ್ಟಿಂಗ್ ಸೂಪರ್, ಕಥೆ ಸೂಪರ್, ನಗಿಸಿ ಅಳಿಸುವ, ಅಳಿಸಿ ನಗಿಸುವ ಅದ್ಭುತ ಚಿತ್ರ. ಮಾನವೀಯತೆ ಸಾರುವ ಚಿತ್ರ''- ಹೀಗೆ ಸಾಲು ಸಾಲು ಹೊಗಳಿಕೆಗಳು. ಸೋಷಿಯಲ್ ಮೀಡಿಯಾ ಇರೋದೇ ಹಾಗೆ. ಅದು ಸನ್ನಿಗೆ ಒಳಪಡಿಸೋ ಮಾಧ್ಯಮ. ಊರೆಲ್ಲ ಹೊಗಳುವಾಗ ನಾನು ಹೊಗಳದಿದ್ದರೆ ಸಮಾಜ ಒಪ್ಪುತ್ತಾ ಎಂದು ಹೆದರುವಂತೆ ಮಾಡುತ್ತದೆ. ಇಂಥ ಸಮಯದಲ್ಲಿ ಅಲ್ಲೊಬ್ಬ ಈ ಹರಿವಿಗೆ ವಿರುದ್ಧವಾಗಿ ಈಜಿಬಿಡುತ್ತಾನೆ. ಅಷ್ಟೊತ್ತು ಹೊಗಳುತ್ತಿದ್ದ ಗುಂಪು ಶುರುವಲ್ಲಿ ಇವನನ್ನು ವಿಚಿತ್ರವಾಗಿ ನೋಡುತ್ತದೆ. ವಿರೋಧಿಸಬೇಕಾ, ಪರ ನಿಲ್ಲಬೇಕಾ ಅಂತ ಯೋಚಿಸುತ್ತದೆ. ಹಾಗೆ ನೋಡ್ತಾ ಇದ್ದಂತೆ ಆ ವಿರುದ್ಧ ಈಜಿನ ವ್ಯಕ್ತಿಯ ಹಿಂದೆ ಇನ್ನೊಂದು ನೂರು ಜನ ಈಜಿ ಬರುವುದು ಕಾಣುತ್ತದೆ. ಅಲ್ಲಿಂದ ಅಸಲಿ ಮಂಥನ ಶುರುವಾಗುತ್ತದೆ.

ಯೆಸ್. ಟೂರಿಸ್ಟ್ ಫ್ಯಾಮಿಲಿ ಮೊದಲ ಸುತ್ತಿನ ಹೊಗಳಿಕೆಯ ನಂತರ ಆಳದ ವಿಮರ್ಶೆಗೆ ಒಳಪಡಲಾರಂಭಿಸಿತು. ಚಿತ್ರದ ಒಳಗಿರೋ ಹಿಡನ್ ಅಜೆಂಡಾ ಮತ್ತು ಪ್ರಾಪಗ್ಯಾಂಡಗಳ ಅನಾವರಣವಾಯಿತು. ಜನ ಆಗ ಯೋಚಿಸಲಾರಂಭಿಸಿದರು. ಅರೆ ಹೌದಲ್ಲ, ನಾವು ಈ ದೃಷ್ಟಿಕೋನದಲ್ಲಿ ಯೋಚಿಸಲೇ ಇಲ್ಲವಲ್ಲ ಎಂದು. ಕೊನೆಗೆ ಮತ್ತದೇ ದ್ವಂದ್ವ. ಕಾನೂನು ಕಟ್ಟಳೆ ಮುಖ್ಯವೋ, ಮಾನವೀಯತೆ ಮುಖ್ಯವೋ. ಈ ಚಿತ್ರವನ್ನು ಮೆಚ್ಚಿದ್ದು ತಪ್ಪೋ ಸರಿಯೋ. ಮೆಚ್ಚಬೇಕಿತ್ತೋ ವಿರೋಧಿಸಬೇಕಿತ್ತೋ! ಸಿನಿಮಾದ ಗೆಲುವಿಗೆ ಇದಕ್ಕಿಂತ ಇನ್ನೇನು ಬೇಕು?

ಸೋಷಿಯಲ್ ಮೀಡಿಯಾದಲ್ಲಿ ಎಲ್ಲ ವಿಮರ್ಶೆಗಳನ್ನು ಓದಿದ ನಂತರ ಸಿನಿಮಾ ನೋಡುವ ಯಾರೇ ಆದರೂ ಪೂರ್ವಗ್ರಹ ಪೀಡಿತರಾಗುವುದು ಸಹಜ. ಆದರೆ ನನಗೆ ಸಿನಿಮಾ ನೋಡುವ ಕಲೆ ಒಲಿದಿರುವುದರಿಂದ ಎಲ್ಲವನ್ನೂ ಮರೆತು ನೋಡುತ್ತಾ ಹೋದೆ. ನಾನು ಪ್ರತಿ ಸಿನಿಮಾವನ್ನೂ ತೀರಾ ಸಾಮಾನ್ಯ ಪ್ರೇಕ್ಷಕನಾಗಿ ನೋಡುವುದನ್ನು ಇಷ್ಟಪಡುತ್ತೇನೆ. ಅದು ನನ್ನ ಸುಖಕ್ಕಾಗಿ. ಅಳಿಸುವ ತಾಕತ್ತಿರುವ ದೃಶ್ಯ ಅಳಿಸಬೇಕು. ನಗಿಸುವ ಶಕ್ತಿ ಇರುವ ಸೀನ್ ನಗಿಸಬೇಕು. ಸಿನಿಮಾ ನೋಡುವಾಗ ವಿಮರ್ಶಕನಾಗಬಾರದು. ನೋಡಿದಮೇಲೆ ವಿಮರ್ಶಕನಾಗಬೇಕು.

ಟೂರಿಸ್ಟ್ ಫ್ಯಾಮಿಲಿ ಚಿತ್ರದ ಕಥೆಯ ಎಳೆ ಚಿಕ್ಕದು. ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು ಉದ್ಭವವಾಗಿರುವುದರಿಂದ, ಅಲ್ಲಿ ಬದುಕು ದುಸ್ತರವಾಗಿ ಒಂದು ಕುಟುಂಬ ರಾತ್ರೋರಾತ್ರಿ ಜಲಮಾರ್ಗದಲ್ಲಿ ಕದ್ದು ಭಾರತದ ಗಡಿ ದಾಟುತ್ತದೆ. ರಾಮೇಶ್ವರದಲ್ಲಿ ಪೊಲೀಸರನ್ನು ಯಾಮಾರಿಸಿ, ಎಮೋಶನಲ್ ಆಗಿ ಪಳಗಿಸಿ ಚೆನ್ನೈ ತಲುಪಿಕೊಳ್ಳುತ್ತದೆ. ನಕಲಿ ಕಾರ್ಡ್‌ಗಳನ್ನು ಮಾಡಿಕೊಂಡು ಸೆಟ್ಲ್ ಆಗುತ್ತಾರೆ. ತಾವು ನಿರಾಶ್ರಿತರು ಎಂದು ಹೇಳಿಕೊಳ್ಳದೆಯೇ ನೆರೆಹೊರೆಯವರನ್ನೆಲ್ಲ ತಮ್ಮ ಮಾನವೀಯ ಗುಣದಿಂದ, ಸ್ನೇಹಪರತೆಯಿಂದ ಗೆಲ್ಲುತ್ತಾರೆ. ಆ ನಂತರ ಸತ್ಯ ಹೇಳಿಕೊಳ್ಳುತ್ತಾರೆ. ಆದರೆ ಭಾರತದವರು ಈ ಶ್ರೀಲಂಕನ್ ನಿರಾಶ್ರಿತರನ್ನು ತಮ್ಮವರನ್ನಾಗಿಸಿಕೊಳ್ಳುತ್ತಾರೆ. ಕಾನೂನಿನ ಕೈಯಿಂದಲೂ ಉಳಿಸುತ್ತಾರೆ. ಶುಭಂ.

ಹೌದು ಸಿನಿಮಾ ಅಂತ ನೋಡಿದಾಗ, ದೃಶ್ಯಗಳು ನಗಿಸುವಲ್ಲಿ, ಅಳಿಸುವಲ್ಲಿ ಯಶಸ್ವಿಯಾಗಿವೆ. ಒಬ್ಬೊಬ್ಬರ ಅಭಿನಯ, ದೃಶ್ಯಕಟ್ಟುವಿಕೆ, ಭಾವುಕ ಸನ್ನಿವೇಶಗಳು ಎಲ್ಲವೂ ಸೂಪರ್. ನಾನು ಎರಡು ಮೂರು ದೃಶ್ಯಗಳಲ್ಲಿ ನನಗೇ ಅರಿವಿಲ್ಲದೆ ಕಣ್ಣೀರು ತುಂಬಿಕೊಂಡೆ.

ಆದರೆ ಸಿನಿಮಾ ಮುಗಿದ ನಂತರ ಬೇಡವೆಂದರೂ ಆಶಯದ ಬಗ್ಗೆ ಪ್ರಶ್ನೆ ಏಳುತ್ತದೆ. ಲಕ್ಕೀ ಭಾಸ್ಕರ್ ಚಿತ್ರದಲ್ಲಿ ನಾಯಕ ಕುಟುಂಬಕ್ಕಾಗಿ ಫೈನಾನ್ಷಿಯಲ್ ಫ್ರಾಡ್ ಮಾಡುವುದರ ಬಗ್ಗೆ ವಿಮರ್ಶಕರು ವ್ಯಾಪಕ ವಿರೋಧ ವ್ಯಕ್ತಪಡಿಸಿದ್ದರು. ಸಂದೇಶದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಈ ಚಿತ್ರ ಕೂಡ ಅದಕ್ಕಿಂತ ಆತಂಕಕಾರಿ ಸಂದೇಶವನ್ನು ಸುಪ್ತವಾಗಿ ನೀಡುತ್ತದೆ. ಅಕ್ರಮ ವಲಸೆ ಒಪ್ಪಿತ. ಮಾನವೀಯತೆ ಮೊದಲು ಎಂದು ಜನರನ್ನು ಒಪ್ಪಿಸುವ ನಿಟ್ಟಿನಲ್ಲಿ ಟ್ಯೂನ್ ಮಾಡುತ್ತದೆ ಟೂರಿಸ್ಟ್ ಫ್ಯಾಮಿಲಿ.

ಇದು ಪ್ರಾಪಗ್ಯಾಂಡ ಬಿತ್ತುವ ಉದ್ದೇಶ ಹೊತ್ತುಕೊಂಡೇ ಬಂದಿದೆ ಅನಿಸುವುದು ಯಾಕೆ ಅಂದರೆ, ಚಿತ್ರದ ಮೊದಲಲ್ಲಿ ಅಥವಾ ಅಟ್ ಲೀಸ್ಟ್ ಕೊನೆಯಲ್ಲಿ ಒಂದು ಡಿಸ್‌ಕ್ಲೈಮರ್ ಕೂಡ ಹಾಕುವುದಿಲ್ಲ, ಅಕ್ರಮ ವಲಸೆ ಯಾವುದೇ ಕಾರಣಕ್ಕೆ ಆದರೂ ಕಾನೂನುಬಾಹಿರ. ಈ ಚಿತ್ರ ಅದನ್ನು ಬೆಂಬಲಿಸುವುದಿಲ್ಲ ಎಂಬ ಒಂದು ಡಿಸ್‌ಕ್ಲೈಮರ್ ಆದರೂ ಹಾಕಿದ್ದರೆ ಚಿತ್ರಕ್ಕೆ ಘನತೆ ಸಿಗುತ್ತಿತ್ತು.

ಬಾಲಿವುಡ್‌ನಲ್ಲಿ ರಾಜ್‌ಕುಮಾರ್ ಹಿರಾನಿ 'ಡಂಕೀ' ಎಂಬ ಚಿತ್ರ ನಿರ್ದೇಶಿಸಿದ್ದರು. ಅದು ಕೂಡ ಅಕ್ರಮವಲಸೆ ಕುರಿತ ಚಿತ್ರ. ಡಂಕೀ ಅಂದರೇನೇ ಅದು ಅಕ್ರಮಮಾರ್ಗದಲ್ಲಿ ದೇಶ ದಾಟುವ ಪ್ರಕ್ರಿಯೆ. ಡಂಕೀ ಚಿತ್ರ ಅಕ್ರಮ ವಲಸೆಯ ಪರ ನಿಂತು ಮಾಡಿದ್ದ ಸಿನಿಮಾ. 'ಯಾವ್ಯಾವುದೋ ಅನಿವಾರ್ಯತೆಗೆ, ಸೂಕ್ತ ದಾಖಲೆಗಳಿಲ್ಲದೆ ಗಡಿ ದಾಟಿ ಹೋಗಬೇಕಾಗುತ್ತದೆ. ಮನುಷ್ಯತ್ವ ಮೊದಲು ಎಂಬುದನ್ನು ಪರಿಗಣಿಸಿ' ಎಂಬ ನೇರ ಸಂದೇಶ ನೀಡಿದ ಚಿತ್ರ. ಇದು ನೇರ ಸಂದೇಶ ನೀಡಿದೆ, ಹಿಡನ್ ಅಜೆಂಡಾ ಇಟ್ಟುಕೊಂಡಿಲ್ಲ ಅಂತ ಸಮರ್ಥಿಸಬಹುದಾ? ನೋ. ಇನ್‌ಫ್ಯಾಕ್ಟ್ ಡಂಕೀ ಚಿತ್ರದಲ್ಲಿ ಭಾರತೀಯರು ವಿದೇಶಕ್ಕೆ ಅಕ್ರಮ ವಲಸೆ ಹೋಗಿ ಅಲ್ಲಿ ತಮ್ಮನ್ನು ಸಮರ್ಥಿಸಿಕೊಳ್ಳುವಂತೆ ಚಿತ್ರಿಸಲಾಗಿದೆ. ಇಲ್ಲಿ ನಾವು ಗಮನಿಸಬೇಕಾದ ಅಂಶ ಒಂದಿದೆ. ದೇಶದಲ್ಲಿ 'ಸಿಎಎ' ಮತ್ತು 'ಎನ್‌ಆರ್‌ಸಿ' ಜಾರಿಗೆ ತರಲು ಕೇಂದ್ರ ಸರಕಾರ ಉದ್ದೇಶಿಸಿದ್ದ ಸಮಯದಲ್ಲಿ ಅದರ ವಿರುದ್ಧ ಹೋರಾಟಗಳು ಶುರುವಾದವು. ಅಕ್ರಮ ವಲಸೆ ತಡೆಯಲು ಸಿಎಎ ಮತ್ತು ಎನ್‌ಆರ್‌ಸಿ ಅತ್ಯಗತ್ಯ ಅಂತ ಗೊತ್ತಿದ್ದರೂ ವೋಟ್‌ಬ್ಯಾಂಕ್ ರಾಜಕಾರಣ ಮಾಡುತ್ತಿರುವ ಪಕ್ಷಗಳು ಅಕ್ರಮ ವಲಸಿಗರನ್ನೇ ನಂಬಿಕೊಂಡಿರುವುದರಿಂದ ಇದರ ವಿರುದ್ಧ ನಿಂತಿದ್ದವು. ಇಂಥ ಸಮಯದಲ್ಲಿ ರಾಜ್‌ಕುಮಾರ್ ಹಿರಾನಿ ಪಾಕಿಸ್ತಾನಿಯರೋ, ಬಾಂಗ್ಲಾದೇಶಿಯರೋ ಭಾರತಕ್ಕೆ ಡಂಕೀ ಮಾರ್ಗದಲ್ಲಿ ಬಂದು ಸಮರ್ಥನೆಗೆ ನಿಲ್ಲುವ ಸಿನಿಮಾ ಮಾಡಲು ಸಾಧ್ಯ ಇರಲಿಲ್ಲ, ಆ ಸಿನಿಮಾವನ್ನು ಜನ ಒಪ್ಪುತ್ತಲೂ ಇರಲಿಲ್ಲ, ಹೀಗಾಗಿ ಜಾಣ ಹಿರಾನಿ ಭಾರತೀಯರನ್ನೇ ಅಕ್ರಮವಲಸಿಗರನ್ನಾಗಿ ತೋರಿಸಿ ಒಪ್ಪಿಸುವ ಜಾಣತನ ತೋರಿದ. ಪ್ರೇಕ್ಷಕ ಇದನ್ನು ಒಪ್ಪಿದರೆ, ಬಾಂಗ್ಲಾ, ಪಾಕಿ, ಅಫ್ಘನ್, ಶ್ರೀಲಂಕನ್ಸ್ ಇವರೆಲ್ಲರ ಅಕ್ರಮ ವಲಸೆ ಒಪ್ಪಲೇಬೇಕಲ್ಲವಾ! ಇದು ನೇರ ಸಿನಿಮಾ ಎಂಬಂತೆ ಮಾಡಿ ಅಜೆಂಡಾವನ್ನು ಅಡಗಿಸಿಟ್ಟಿದ್ದಲ್ಲವಾ? ಹೀಗಾಗಿ ಟೂರಿಸ್ಟ್ ಫ್ಯಾಮಿಲಿ ಮತ್ತು ಡಂಕೀ ಎರಡೂ ಡೇಂಜರಸ್ ಸಿನಿಮಾಗಳೇ. ನಕ್ಸಲರನ್ನು, ಭಯೋತ್ಪಾದಕರನ್ನು, ಅಂಡರ್ ವರ್ಲ್ಡ್ ಕ್ರಿಮಿಗಳನ್ನು ವೈಭವೀಕರಿಸಿ, ಅವರ ಮೇಲೆ ಸಿಂಪಥಿ ಹುಟ್ಟಿಸಿ ಹೀರೋಗಳನ್ನಾಗಿ ಮಾಡುವ ಸಿನಿಮಾಗಳು ಕಾಲಕಾಲಕ್ಕೆ ಬಂದುಹೋಗಿವೆ. ಅದರ ಮುಂದುವರಿದ ಭಾಗವೇ ಅಕ್ರಮ ವಲಸಿಗರನ್ನು ಒಳ್ಳೆಯವರು ಎಂದು ಬಿಂಬಿಸುವ ಸಿನಿಮಾಗಳು.

ನಿಮಗೆ ನೆನಪಿರಬಹುದು. ಎಂಬತ್ತರ ದಶಕದಲ್ಲಿ ನಮ್ಮದೇ ರಾಜ್ಯದ ನಾರಾಯಣ ಅನ್ನೋವ್ರು ಮೀನು ಹಿಡಿಯಲು ಹೋಗಿ, ಪ್ರಕೃತಿ ವಿಕೋಪಕ್ಕೆ ಸಿಲುಕಿ ಅರಿವಿಲ್ಲದೇ ಭಾರತದ ಗಡಿಯಿಂದ ಪಾಕ್ ಗಡಿಗೆ ಬಿಸಾಕಲ್ಪಡುತ್ತಾರೆ. ತಾವು ಗಡಿ ದಾಟಿದ್ದೇವೆ ಎಂಬುದೂ ಅವರಿಗೆ ಗೊತ್ತಿರೋದಿಲ್ಲ. ಆದರೆ ಪಾಕಿಸ್ತಾನ ಅದನ್ನು ಅಕ್ರಮ ವಲಸೆ ಎಂದು ಪರಿಗಣಿಸಿ ಅವರನ್ನು ಬರೋಬ್ಬರಿ ಇಪ್ಪತ್ತೊಂದು ವರ್ಷ ಜೈಲಿನಲ್ಲಿಡುತ್ತದೆ. ಡಿಪೋರ್ಟ್ ಕೂಡ ಮಾಡುವುದಿಲ್ಲ. ವಾಜಪೇಯಿ ಅವರ ಅವಧಿಯಲ್ಲಿ ಅವರಿಗೆ ಬಿಡುಗಡೆ ಸಿಕ್ಕು ಭಾರತಕ್ಕೆ ಮರಳುತ್ತಾರೆ. 'ಮತ್ತೆ ಮುಂಗಾರು' ಎಂಬ ಚಿತ್ರ ಇದೇ ಕಥಾನಕವನ್ನು ಇಟ್ಟುಕೊಂಡು ತಯಾರಾಗಿತ್ತು.

ಗೊತ್ತಿದ್ದೋ ಗೊತ್ತಿಲ್ಲದೆಯೋ, ಅನಿವಾರ್ಯತೆಗೋ ಇನ್ನೇನಕ್ಕೋ ದೇಶದ ಗಡಿ ದಾಟಿ ಇನ್ನೊಂದು ದೇಶಕ್ಕೆ ಕಾಲಿಡುವುದು ಸಮರ್ಥನೀಯ ಅಲ್ಲವೇ ಅಲ್ಲ. ಭಾವನೆಗಳ ಹೆಸರಲ್ಲಿ ಜನರನ್ನು ಇಂಥ ವಿಚಾರಗಳಲ್ಲಿ ದಿಕ್ಕುತಪ್ಪಿಸುವುದು ಅಪಾಯಕಾರಿ ಬೆಳವಣಿಗೆ. ಜನ ಇದನ್ನು ಸಿನಿಮಾವಾಗಿ ಮೆಚ್ಚುವುದು ತಪ್ಪೇನಲ್ಲ, ಆದರೆ ಆ ನಂತರ ಈ ಸಿನಿಮಾದ ಸಂದೇಶವನ್ನು ಖಂಡಿಸದೇ ಹೋದರೆ, ಕಡೇಪಕ್ಷ ಗಮನಿಸದೇ ಹೋದರೆ ಅದು ಆತಂಕಪಡಬೇಕಾದ ವಿಷಯ.

ಕನ್ನಡ, ಹಿಂದಿ, ತಮಿಳು ಅಂತ ಬಡಿದಾಡುವವರು, ಕ್ರಿಕೆಟ್ ಫ್ರಾಂಚೈಸ್ ಹೆಸರಲ್ಲಿ ಭಾಷಾಭಿಮಾನ ಮೆರೆಯುವವರು, ಒಂದು ಅಕ್ರಮ ವಲಸೆಯ ಚಿತ್ರವನ್ನು, ಅದೂ ಪರದೇಶದಿಂದ ಭಾರತಕ್ಕೆ ನುಸುಳುವವರನ್ನು ಒಪ್ಪಿ 'ಆಹಾ ಓಹೋ' ಎನ್ನುತ್ತಿರುವುದು ಕಣ್ಣೀರಿಡುತ್ತಿರುವುದು ವಿಪರ್ಯಾಸ!

'ಪ್ರತಿ ಸನ್ಯಾಸಿಗೂ ಒಂದು ಪಾತಕ ಇತಿಹಾಸ, ಪ್ರತಿ ಪಾತಕಿಗೂ ಒಂದು ಒಳ್ಳೆ ಭವಿಷ್ಯ ಇರುತ್ತದೆ' ಅನ್ನೋ ಮಾತು ನಿಜವಿರಬಹುದು. ಆದರೆ ಪಾತಕವನ್ನು ಒಪ್ಪಲಾಗುವುದಿಲ್ಲವಲ್ಲ. ಅಪರಾಧಕ್ಕೆ ಶಿಕ್ಷೆ ಆಗಲೇಬೇಕು. ಅದೇ ರೀತಿ ಮಾನವೀಯತೆಗೆ ಮಣೆ ಹಾಕಿ, ಅಕ್ರಮವಲಸೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಮನೆಯಲ್ಲಿ ಆರ್ಥಿಕ ಸಂಕಷ್ಟವಿದೆ ಅಂತ ನೆರೆಮನೆಗೆ ಹೋಗಿ ಇರಲಾಗುವುದಿಲ್ಲ ಅಲ್ಲವೇ? ನೆರೆಹೊರೆಯವರ ಆರ್ಥಿಕ ಕಷ್ಟಗಳಿಗೇ ಮಿಡಿಯದ ಜನರು ಆರ್ಥಿಕಸಂಕಷ್ಟದಿಂದ ಅಕ್ರಮವಲಸೆ ಬಂದವನನ್ನು ಒಪ್ಪಿಕೊಳ್ಳುವುದರಲ್ಲಿ ಯಾವ ಲಾಜಿಕ್ ಇದೆ? ಪೊಲೀಸ್ ವ್ಯವಸ್ಥೆ, ಭದ್ರತಾ ವ್ಯವಸ್ಥೆ ಮತ್ತು ಭಾರತೀಯರ ಎಮೋಷನ್‌ಗಳನ್ನು ಅಣಕಿಸುವ ಸಿನಿಮಾ ಈ ಟೂರಿಸ್ಟ್ ಫ್ಯಾಮಿಲಿ. ತಮಿಳುನಾಡು ಈಗ ಅಕ್ರಮ ವಲಸಿಗರ ಅತಿ ದೊಡ್ಡ ತಾಣವಾಗಿದೆ. ಶ್ರೀಲಂಕನ್ ನಿರಾಶ್ರಿತರೇ ಸ್ಟಾಲಿನ್‌ನ ಅತಿ ದೊಡ್ಡ ವೋಟ್ ಬ್ಯಾಂಕ್. ಲಕ್ಷಗಟ್ಟಲೆ ಇರುವ ಶ್ರೀಲಂಕನ್ ರೆಫ್ಯೂಜಿಗಳನ್ನು ಯಾವುದೇ ಕಾರಣಕ್ಕೂ ಕಳೆದುಕೊಳ್ಳಲು ಸ್ಟಾಲಿನ್ ತಯಾರಿಲ್ಲ. ಈಗಾಗಲೇ ಸರಕಾರದ ಬೊಕ್ಕಸದ ಅತಿ ದೊಡ್ಡ ಪಾಲು ಶ್ರೀಲಂಕನ್ ನಿರಾಶ್ರಿತರ ಪಾಲಾಗಿದೆ. ಅವರಿಗೆ ಅಕ್ರಮವಾಗಿ ವೋಟರ್ ಐಡಿ, ಆಧಾರ್ ಕೂಡ ಕೊಟ್ಟದ್ದಾಗಿದೆ. ಇನ್ನು ಉಳಿದಿರೋದೇನು? ಮುಂದಿನ ವರ್ಷ ಬರುವ ಚುನಾವಣೆಯಲ್ಲಿ ಅವರೆಲ್ಲರೂ ಸ್ಟಾಲಿನ್ ಪಕ್ಷಕ್ಕೆ ವೋಟ್ ಹಾಕಿ ಗೆಲ್ಲಿಸೋದು. ಅಷ್ಟೇ!

ತಮಿಳುನಾಡಲ್ಲಿ ಬಿಜೆಪಿ ಬಲಗೊಳ್ಳುತ್ತಿದೆ. ಎಐಎಡಿಎಂಕೆ ಮೈತ್ರಿಯಾಗುತ್ತಿದೆ. ತೃತೀಯ ಶಕ್ತಿಯಾಗಿ ವಿಜಯ್ ಪಕ್ಷ ಹೊರಹೊಮ್ಮುತ್ತಿದೆ. ಇಂಥ ಟೈಮಲ್ಲಿ 'ಸಿಎಎ', 'ಎನ್‌ಆರ್‌ಸಿ' ಜಾರಿ ಆಗೇಬಿಡುತ್ತದೆ ಎಂಬ ಆತಂಕವೂ ಸ್ಟಾಲಿನ್‌ಗಿದೆ. ಈಗ ನಿರಾಶ್ರಿತರ ವೋಟ್ ಉಳಿಸಿಕೊಳ್ಳೋದು ಸ್ಟಾಲಿನ್‌ಗೆ ಬಹು ಮುಖ್ಯವಾಗಿದೆ. ತಮಿಳುನಾಡಿನ ಜನರಲ್ಲೂ ನಿರಾಶ್ರಿತರ ಬಗ್ಗೆ ಒಳ್ಳೇ ಭಾವನೆ ಬಿತ್ತುವುದು ಅಗತ್ಯವಾಗಿದೆ. ಈ ದಿಸೆಯಲ್ಲಿ ಬಂದಿರೋ ಚಿತ್ರವೇ ಟೂರಿಸ್ಟ್ ಫ್ಯಾಮಿಲಿ ಎಂಬ ಸುಪ್ತ ಸಂದೇಶದ ಟೂಲ್‌ಕಿಟ್ ಚಿತ್ರ. ತಮಿಳುನಾಡಿನಲ್ಲಿ ಬ್ರೇನ್ ವಾಷ್ ಮಾಡೋಕೆ ಬಂದಿರೋ ಈ ಚಿತ್ರ ಇಡೀ ದೇಶದ ಬ್ರೇನ್ ವಾಷ್ ಮಾಡೋ ಕೆಲಸ ಮಾಡುತ್ತಿದೆ. ಜನರು ಭಾವನೆಗಳಿಗೆ ಮರುಳಾಗಿ ಅಪಾಯಕಾರಿ ಸಂದೇಶವನ್ನು ನಿರ್ಲಕ್ಷಿಸುತ್ತಿದ್ದಾರೆ. ಇದು ನಿಜವಾದ ಟ್ರ್ಯಾಜಿಡಿ.

ಭಟ್ಟರ್ ಸ್ಕಾಚ್

- **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಭಟ್ರೇ, ರವಿ ಹಂಜ್ ಲಿಂಗಾಯತ ಹೋರಾಟಗಾರರ ಬುಡಕ್ಕೆ ಕೈಹಾಕಿದ್ದಾರಲ್ಲ?
– **ಲಿಂಗ ಮೆಚ್ಚಿ ಅಹುದಹುದು ಎನ್ನುತ್ತಿರಬಹುದು!**

- **ಪೂರ್ಣಯ್ಯ, ಮೈಸೂರು**
ಭಟ್ರೇ, ಪ್ರೇಮ 'ಭಿಕ್ಷೆ' ಕೇಳಲು ನಲ್ಲೆಯ ಮನೆಗೆ ಹೋದ ನನ್ನನ್ನು, ಪೊಲೀಸರಿಗೆ ಫೋನ್ ಮಾಡಿ ಭಿಕ್ಷುಕ ಅಂತ ಹಿಡಿಸುವುದು ಸರಿಯೇ?
– **ನೀನು 'ಪ್ರೇಮ ಪೂಜಾರಿ' ಅಂತ ಹೇಳಬೇಕಿತ್ತು!**

- **ಮಲ್ಲಿಕಾರ್ಜುನ ಹರಪನಹಳ್ಳಿ, (ಇಮೇಲ್ ಮೂಲಕ)**
ಭಟ್ರೇ, ಪ್ರಾಮಾಣಿಕನಾಗಿರುವುದೇ ಕೆಲವರಿಗೆ ತಪ್ಪು ಎನಿಸುತ್ತಿದೆಯಲ್ಲ?
– **ಲಂಚ ಸ್ವೀಕರಿಸುವಾಗ ಕೆಲವರು ಹಾಗೆ ಭಾವಿಸುತ್ತಾರಂತೆ!**

- **ದರ್ಶನ ಗೌಡ, ಪದ್ಮನಾಭನಗರ**
ಭಟ್ರೇ, ಸಿದ್ದರಾಮಯ್ಯನವರ ಸರಕಾರ ಭದ್ರವಾಗಿ ಇರಲು ಕಾರಣ?
– **ದುರ್ಬಲ ಪ್ರತಿಪಕ್ಷ!**

- **ಸಿ.ನಾಗನಗೌಡ, ಅರಸೀಕೆರೆ**
ಭಟ್ರೇ, ಮಹೇಶ ಜೋಶಿಗೆ ರಾಜ್ಯ ಸಚಿವ ಸ್ಥಾನ ಬೇಕಂತೆ?
– **ಅದು ಚಾಮರಾಜಪೇಟೆಯಲ್ಲಿ ಸಿಕ್ರೆ ತಗೊಂಡು ಬಿಲ್ ಕಳಿಸು ಅಂತ ಹೇಳಿದ್ರಂತೆ ಸಿದ್ದರಾಮಯ್ಯ!**

- **ಬಸವರಾಜ ಪಲ್ಲೇದ, ಬೆಳಗಾವಿ**
ಭಟ್ರೇ, ಎಚ್ಚೆಸ್ವಿ ನಿಧನದ ನಂತರ ಕನ್ನಡ ಕಾವ್ಯಲೋಕ ಹೇಗಿದೆ?
– **ಇನ್ನೇನಿದ್ದರೂ ನನ್ನದೇ ಆಟ ಅಂದ್ರಂತೆ ಲಕ್ಷ್ಮಣರಾಯರು!**

- **ಸಿದ್ದೇಶ ಹಾಸನ, ಹಾಸನ**
ಭಟ್ರೇ, ಇಪ್ಪತ್ತು ರುಪಾಯಿ ಆದ್ರೂ ಪರವಾಗಿಲ್ಲ, 'ಪ್ರವಾಸಿ ಪ್ರಪಂಚ' ಖರೀದಿಸುತ್ತೇವೆ ಅಂತ ಇಲ್ಲೊಬ್ಬ ಹೇಳ್ತಾನಲ್ಲ?
– **ಅವನ ಕೋರಿಕೆಯನ್ನು ಈಡೇರಿಸಲಾಗುವುದು!**

- **ನಿರ್ಮಲಾ ರಾಮಣ್ಣ, ಬೆಂಗಳೂರು**
ಭಟ್ರೇ, ಉದ್ಧವ್ ಠಾಕ್ರೆ-ರಾಜ್ ಠಾಕ್ರೆ ಒಂದಾಗಬಹುದಾ?
– **ಅದ್ಯಾವ ಮಹಾ? ರಾಯರ ಮಠ-ಉತ್ತರಾದಿಮಠದ ಸ್ವಾಮೀಜಿಗಳು ಒಂದಾಗಿದ್ದಾರೆ!**

- **ಸತ್ಯವತಿ ನಾಗೇಶ ರಾವ್, ಕತ್ತರಿಗುಪ್ಪೆ**
ಭಟ್ರೇ, ಕಾಲ್ತುಳಿತ ಪ್ರಕರಣ ಪಕ್ಕಕ್ಕೆ ಸರೀತು ಅಂತೀರಾ?
– **ಜಾತಿಗಣತಿ ಮುಂದೆ ಅದ್ಯಾವ ಲೆಕ್ಕ?!**

ಆರೋಗ್ಯವಂತರಾಗಿರಲು ಹೀಗಿರಲಿ ನೀವಾಡುವ ಮಾತು!

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com
drsadhanashree@gmail.com

ಸ್ನೇಹಿತರೇ, ಆಯುರ್ವೇದವು 'ವ್ಯಾಧಿ'ಗೆ ಹಲವಾರು ಸಮಾನಾರ್ಥಕ ಪದಗಳನ್ನು ನೀಡಿದೆ! ಅದರಲ್ಲಿ ಬಹಳ ಮುಖ್ಯವಾದದ್ದು- 'ಪಾಪ್ಮಾ'! ಹೌದು, ಆಯುರ್ವೇದವು ರೋಗವನ್ನು 'ಪಾಪ್ಮಾ' ಎಂದು ಕರೆದಿದೆ. ಕಾರಣ, ನಮ್ಮ ಪಾಪಕರ್ಮಗಳ ಫಲವೇ ರೋಗ ಅಥವಾ ವ್ಯಾಧಿಯ ಸ್ಥಿತಿ. ''ಸದಾ ಸ್ವಸ್ಥರಾಗಿರಲು ಕೇವಲ ನಮ್ಮ ದೇಹದ ಕಾಳಜಿ ಮಾಡಿದರೆ ಸಾಲದು. ಬದಲಿಗೆ, ತ್ರಿವಿಧ ಪಾಪಕರ್ಮಗಳಿಂದ ದೂರವಿರಬೇಕು'' ಎಂದು ನಮ್ಮ ಆರ್ಷರು ಸ್ಪಷ್ಟವಾಗಿ ಹೇಳಿದ್ದಾರೆ. ಅವುಗಳು- ಕಾಯಿಕ, ವಾಚಿಕ ಮತ್ತು ಮಾನಸಿಕ. ಅಂದರೆ, ನಮ್ಮ ಶರೀರ, ಮಾತು ಮತ್ತು ಮನಸ್ಸಿನ/ಯೋಚನೆಗಳ ಮೂಲಕ ಮಾಡುವ ಪಾಪಕರ್ಮಗಳು. ಈ ಪಾಪಕರ್ಮಗಳಲ್ಲಿ ವಾಗ್ಭಟಾಚಾರ್ಯರು ವಾಚಿಕ ಪಾಪಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದು, ಮಾತುಗಳ ಮೂಲಕ ಆಗುವ ನಾಲ್ಕು ರೀತಿಯ ಪಾಪಗಳನ್ನು ನಿಷೇಧಿಸಿದ್ದಾರೆ. ಅವುಗಳೆಂದರೆ ಪೈಶುನ್ಯ, ಪರುಷ, ಅನೃತ ಮತ್ತು ಸಂಭಿನ್ನಾಲಾಪ.

'ಪೈಶುನ್ಯ' ಎಂದರೆ ಒಬ್ಬ ವ್ಯಕ್ತಿಯ ಬೆನ್ನ ಹಿಂದೆ ಅವನ ಬಗ್ಗೆ ಕೆಟ್ಟದಾಗಿ ಮಾತನಾಡುವುದು ಅಥವಾ ಅವನ ಬಗ್ಗೆ ಸುಳ್ಳು ವಿಷಯವನ್ನು ಹರಡುವುದು. ವಾಸ್ತವದ ವಿರುದ್ಧವಾಗಿ ಮಾತನಾಡಿ ಮತ್ತೊಬ್ಬರ ಚಾರಿತ್ರ್ಯಹರಣ ಮಾಡುವುದು ಪೈಶುನ್ಯ. ಯಾವುದಾದರೂ ವ್ಯಕ್ತಿಯ ಮೇಲೆ ನಮಗೆ ಸ್ವಲ್ಪ ಬೇಜಾರು ಅಥವಾ ಸಿಟ್ಟು ಬಂದರೆ ನಾವು ತಕ್ಷಣವೇ ಮಾಡುವುದು ಈ ಪೈಶುನ್ಯದ ಪಾಪಕರ್ಮವನ್ನು. ಆದರೆ, ಜೋಕೆ! ಮುಂದೊಂದು ದಿನ ಇದು ನಮಗೆ ಗಂಡಾಂತರಕಾರಿ ಆಗಬಹುದು!

'ಪರುಷ' ಎಂದರೆ ಕಠೋರವಾದ ಮಾತುಗಳು. ಬೇರೆಯವರ ಮನಸ್ಸನ್ನು ಚುಚ್ಚಿ, ನೋವು ಮಾಡುವಂಥ ಮಾತುಗಳನ್ನು ಪರುಷ ವಚನ ಎಂದು ಹೇಳಬಹುದು. ವಿಷಯ ಎಂಥದ್ದೇ ಇರಲಿ, ಅದರಿಂದ ನಮಗೆ ಎಷ್ಟೇ ಅಸಮಾಧಾನವಿರಲಿ, ಅದನ್ನು ವ್ಯಕ್ತಪಡಿಸುವಾಗ ಬೇರೆಯವರಿಗೆ ನೋವನ್ನು ತರದ ರೀತಿಯಲ್ಲಿ ಮಾತನಾಡುವ ಪ್ರಯತ್ನವು ಸದಾ ನಮ್ಮದಾಗಿರಲಿ.

'ಅನೃತ' ಎಂದರೆ ಸುಳ್ಳು ಮಾತು. ವಾಸ್ತವಕ್ಕೆ ದೂರವಾದ/ನಾವೇ ಸಂಯೋಜಿಸಿರುವ/ವಸ್ತುಸ್ಥಿತಿಗೆ ವಿರುದ್ಧವಾಗಿರುವ ಮಾತುಗಳು ಅಸತ್ಯದ ಮಾತುಗಳು.

'ಸಂಭಿನ್ನಾಲಾಪ' ಎಂದರೆ ಅಸಂಬದ್ಧವಾದ/ನಮಗೆ ಸಂಬಂಧಪಡದ ವಿಷಯಗಳನ್ನು, ಅದನ್ನು ಸಂಪೂರ್ಣವಾಗಿ ತಿಳಿದುಕೊಳ್ಳದೆ ಮಾತನಾಡುವುದು. 'ಗಾಸಿಪ್'ಗಳು ಬಹಳ ಜನಕ್ಕೆ ಬಹಳ ಪ್ರಿಯವಾದ ಕೆಲಸ. ಫೋನ್/ಮೆಸೇಜ್‌ಗಳಲ್ಲಿ, ಪಾರ್ಟಿಗಳಲ್ಲಿ ಬಹಳಷ್ಟು ಮಂದಿ ಮಾಡುವ ಪಾಪವೆಂದರೆ ಸಂಭಿನ್ನಾಲಾಪ!

ಬಹುಶಃ ನಮ್ಮ ದಿನನಿತ್ಯದ ಜೀವನದಲ್ಲಿ ಬಹುತೇಕರು ಈ ಮೇಲಿನ ಪಾಪಗಳನ್ನು ನಿರಂತರವಾಗಿ ಮಾಡಿ ಅದರ ಫಲವನ್ನು ಅನುಭವಿಸುತ್ತಿರುತ್ತೇವೆ. ಈ ರೀತಿಯ ಪಾಪಗಳು ಸಂಚಿತವಾಗಿ ಅದು ಮುಂದೊಮ್ಮೆ ಒಂದು ವ್ಯಾಧಿಯ ರೂಪವನ್ನು ತಾಳಿ ನಮ್ಮನ್ನು ಬಾಧಿಸಲು ಪ್ರಾರಂಭಿಸುತ್ತದೆ. ಹಾಗಾಗಿ, ಸ್ವಾಸ್ಥ್ಯವನ್ನು ಸದಾ ಕಾಪಾಡಿಕೊಳ್ಳಲು ಬರೀ ದೇಹವನ್ನಷ್ಟೇ ಅಲ್ಲದೇ ನಮ್ಮ ಮಾತುಗಳ ಮೇಲೆಯೂ ನಮಗೆ ಅತಿ ಹೆಚ್ಚಿನ ನಿಗಾ ಇರಬೇಕು. ಸದಾ ನಮಗೂ ಸ್ವಾಸ್ಥ್ಯದ ದಾರಿಯನ್ನು ತೋರಿಸುವ ಹಾಗೂ ಪರರಿಗೂ ಹಿತದ ಅನುಭವವನ್ನು ನೀಡುವ ನಮ್ಮ ಮಾತುಗಳು ಹೇಗಿರಬೇಕು ಎಂಬುದರ ಬಗ್ಗೆ ಆಯುರ್ವೇದವು ಸವಿಸ್ತಾರವಾಗಿ ಹೇಳಿದೆ. ಅದನ್ನು ಇಂದಿನ ಈ ಲೇಖನದಲ್ಲಿ ತಿಳಿದುಕೊಳ್ಳೋಣ.

ಶಾಸ್ತ್ರವು ಹೇಳುತ್ತದೆ, ಹೀಗಿದ್ದರೆ ನಿಮ್ಮ ಮಾತು ಸದಾ ಚೆಂದ ಅಂತ: ಕಾಲೇ ಹಿತಂ ಮಿತಂ ಬ್ರೂಯಾತ್ ಅವಿಸಂವಾದಿ ಪೇಶಲಮ್। ಪೂರ್ವಾಭಿಭಾಷೀ ..॥

- **ಕಾಲೇ ಬ್ರೂಯಾತ್:** ಹೀಗೆಂದರೆ ಸಕಾಲದಲ್ಲಿ ಆಡುವ ಸರಿಯಾದ ಮಾತು. ಈ ರೀತಿಯ ಮಾತುಗಳನ್ನಾಡುವವರು, ತಮ್ಮ ಎಲ್ಲಾ ಕಾರ್ಯಗಳಲ್ಲೂ ಯಶಸ್ವಿಯಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದರೆ, ಅಕಾಲಿಕವಾಗಿ ಆಡುವ ಮಾತುಗಳಿಂದ ನಾವು ಹಲವಾರು ಬಾರಿ ನೋವನ್ನು, ದುಃಖವನ್ನು ಅನುಭವಿಸುವುದೇ ಹೆಚ್ಚು. ಗಡಿಬಿಡಿಯಲ್ಲಿ ಹೊರಗೆ ಹೊರಡುತ್ತಿರುವಾಗ, ಎಲ್ಲಿಗೆ? ಏತಕ್ಕೆ? ಎಂಬ ಅಕಾಲಿಕ ಪ್ರಶ್ನೆಗಳು ನಮಗೆ ಕೋಪವನ್ನು ತರಬಹುದು. ಅದೇ ರೀತಿಯಲ್ಲಿ, ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಹೊರಡುತ್ತಿರುವ ರೋಗಿಗೆ 'ಮತ್ತೆ ಬನ್ನಿ' ಎಂಬ ಮಾತು ಮನಸ್ಸಿಗೆ ಕಿರಿಕಿರಿಯನ್ನು ಉಂಟುಮಾಡಬಹುದು. ಸಂಸಾರದ ಜೀವನವನ್ನು ಸುಖವಾಗಿರಿಸಿಕೊಳ್ಳಲು ಸಕಾಲದ ಮಾತುಗಳನ್ನು ಆಡುವ ಕಲೆಯನ್ನು ಕಲಿಯಲೇಬೇಕು. ನಾನು ಯಾರ ಮುಂದೆ ಮಾತನಾಡುತ್ತಿದ್ದೇನೆ, ಎಲ್ಲಿದ್ದೇನೆ, ಎಷ್ಟು ಮಾತನಾಡಬೇಕು, ಯಾವುದು ಮಾತನಾಡಿದರೆ ಸರಿ, ಯಾವುದು ತಪ್ಪು ಎಂಬ ಅರಿವಿಲ್ಲದೆ ಮನಸ್ಸಿಗೆ ಬಂದಂತೆ ಮಾತನಾಡುವ ವ್ಯಕ್ತಿಯು ಜನರ ಮಧ್ಯದಲ್ಲಿ ಅಭಾಸಕ್ಕೀಡಾಗುತ್ತಾನೆ.
- **ಹಿತಂ ಬ್ರೂಯಾತ್:** ಹೀಗೆಂದರೆ ಹಿತವಾದ ಮಾತನ್ನು ಪರರಿಗೆ ಹಿತವೆನಿಸುವ ರೀತಿಯಲ್ಲಿ ಆಡಬೇಕು. ಮಾತನಾಡುವಾಗ ವ್ಯಕ್ತಿ ಹಿತ ಹಾಗೂ ಸಮಷ್ಟಿ ಹಿತ- ಇವೆರಡನ್ನೂ ಅರ್ಥಮಾಡಿಕೊಂಡು ಆಡಿದರೆ ಅದು ಅತ್ಯಂತ ಸಫಲವಾಗುತ್ತದೆ. ಆಡಿದ ಒಂದು ಶಬ್ದದ ಪರಿಣಾಮ ಎಲ್ಲಿಯವರೆಗೆ ಆಗಬಹುದು ಎಂಬ ದೂರಾಲೋಚನೆಯನ್ನು ಮಾಡಿ ನಂತರ ಆ ಪದವನ್ನು ಬಳಸುವುದು ಕ್ಷೇಮ. ಯಾವ ಮಾತನ್ನು ನಾವು ಆಡುವುದರಿಂದ ನಮಗೂ, ಇತರ ಎಲ್ಲರಿಗೂ ಯಾವುದೇ ಶಾರೀರಿಕ, ವಾಚಿಕ ಅಥವಾ ಮಾನಸಿಕ ನೋವು ಉಂಟಾಗುವುದಿಲ್ಲವೋ ಅಂಥ ಮಾತನ್ನೇ ಸದಾ ಆಡಬೇಕು. ಹಿತವಾದ ನುಡಿಗಳ ಜತೆಗೆ ನಾವು ಆಡಿದ ಮಾತು ಸದಾ ಪ್ರಯೋಜನಕಾರಿಯಾಗಿರಬೇಕು ಎಂಬ ಅರಿವಿದ್ದರೆ ಉತ್ತಮ..
- **'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್'**- ಅಂದರೆ, ಎಂದಿಗೂ ಪ್ರಿಯವಾದ ಸತ್ಯವನ್ನೇ ಹೇಳಬೇಕು. ಅಪ್ರಿಯವಾದ ಸತ್ಯವನ್ನು ನುಡಿಯಬಾರದು. ಪ್ರಿಯವಾಗಿದ್ದರೂ ಸುಳ್ಳನ್ನು ಹೇಳಬಾರದು ಎಂಬುದು ನಮ್ಮ ಸನಾತನೀಯ ಧರ್ಮದ ಮಾತು. ಹಾಗಾದರೆ, ತಿಳಿದೂ ಅಪ್ರಿಯವಾದ ಸತ್ಯವನ್ನು ಹೇಳದೆ ಇರುವುದು ತಪ್ಪಾಗುವುದಲ್ಲವೇ ಎಂಬ ಸಂಶಯ ಸಹಜವಾಗಿಯೇ ಹುಟ್ಟುತ್ತದೆ. 'ಅಪ್ರಿಯಂ ಸತ್ಯಂ ನ ಬ್ರೂಯಾತ್'- ಅಂದರೆ ಅಪ್ರಿಯವಾದ ಸತ್ಯವನ್ನು ಹೇಳಬಾರದು. ಅದೇ ರೀತಿ 'ಸತ್ಯಂ ಬ್ರೂಯಾತ್'- ಅಂದರೆ ಸದಾ ಸತ್ಯವನ್ನೇ ಹೇಳಬೇಕು. ನಾವು ಇವೆರಡೂ ತತ್ತ್ವಗಳನ್ನು ಪಾಲಿಸಬಹುದಾದ ಏಕೈಕ ವಿಧಾನವೆಂದರೆ- ಅಪ್ರಿಯವಾದ ಸತ್ಯವನ್ನು ಪ್ರಿಯವಾಗುವ ರೀತಿಯಲ್ಲಿ ಅಥವಾ ಅದರಿಂದ, ಕೇಳಿದ ವ್ಯಕ್ತಿಗೆ ಯಾವುದೇ ರೀತಿಯ ನೋವು ಉಂಟಾಗದೇ ಇರುವಂತೆ ಹೇಳಬೇಕು ಎಂಬುದು ಇದರರ್ಥ. ಇದನ್ನು ನಾವು ನಮ್ಮ ಜೀವನದಲ್ಲಿ ಪಾಲಿಸಿದ್ದೇ ಆದರೆ ಅನೇಕ ಸಂಕಷ್ಟಕರ ಪರಿಸ್ಥಿತಿಯಿಂದ ಸುಲಭವಾಗಿ ಪಾರಾಗಬಹುದು. ಅಕ್ಬರ್-ಬೀರಬಲ್ಲರ ಕತೆ ನಮ್ಮೆಲ್ಲರಿಗೂ ಗೊತ್ತಿರಲೇಬೇಕು. 'ನಿಮ್ಮ ಮಕ್ಕಳು ಇನ್ನು ಕೆಲವೇ ವರ್ಷಗಳಲ್ಲಿ ಸಾಯುತ್ತಾರೆ' ಎಂಬ ಅಪ್ರಿಯವಾದ ಸತ್ಯದ ಮಾತನ್ನು ಹೇಳುವ ಬದಲಿಗೆ 'ನೀವು ನಿಮ್ಮ ಮಕ್ಕಳಿಗಿಂತ ಹೆಚ್ಚು ಕಾಲ ಬಾಳುತ್ತೀರಿ' ಎಂಬ ಮಾತಿನ ಪರಿಣಾಮದಲ್ಲಾಗುವ ಅಗಾಧ ವ್ಯತ್ಯಾಸವನ್ನು ಈ ಕತೆ ಸಾರುತ್ತದೆ.
- **ಮಿತಂ ಬ್ರೂಯಾತ್:** 'ತಲೆಯೆಲ್ಲಾ ಹರಟಬೇಡ' ಎಂದು ಮೊಮ್ಮಕ್ಕಳಿಗೆ ಬಯ್ಯುತ್ತಿದ್ದ ನಮ್ಮ ಅಜ್ಜಿಯ ಮಾತು ನನಗೆ ಸದಾ ನೆನಪಿಗೆ ಬರುತ್ತದೆ. ಅತಿಯಾಗಿ ಮಾತನಾಡುವವರನ್ನು ಹಿರಿಯರು ಎಂದಿಗೂ ಮೆಚ್ಚುತ್ತಿರಲಿಲ್ಲ. ಅತಿಯಾದ ಮಾತು ವಿಷಯಗಳ ಗಾಂಭೀರ್ಯವನ್ನು ಕುಗ್ಗಿಸುತ್ತದೆ. ಜತೆಗೆ, ಅತಿಯಾದ ಮಾತು ಯಾವಾಗಲೂ ಪರರಿಗೆ ಕಿರಿಕಿರಿಯೆನಿಸುತ್ತದೆ. ಸಾಮಾನ್ಯವಾಗಿ, ಕಾಲೇಜು ಗಳಲ್ಲಿ ರಗಳೆ ಮೇಷ್ಟ್ರು ಬಂದಾಗ, ''ಅಯ್ಯೋ ಮಾರಾಯ, ಇನ್ನು ಇವರ ಕೊರೆತ ಆರಂಭವಾದರೆ ದೇವರೇ ಗತಿ'' ಎಂಬ ವಿದ್ಯಾರ್ಥಿಗಳ ಮಾತನ್ನು ಕೇಳಿಯೇ ಇರುತ್ತೇವೆ. ಇಂದಿನ ಈ ಆಧುನಿಕ ಜೀವನದಲ್ಲಿ ಜನರಿಗೆ ಸಮಯವೆಲ್ಲಿದೆ? ಆದ್ದರಿಂದ ನಾವು ಹೇಳಬೇಕಾದ ವಿಷಯವನ್ನು ಸ್ಪಷ್ಟವಾಗಿ, ಸರಿಯಾಗಿ, ಅತಿ ಕಡಿಮೆ ಶಬ್ದಗಳಲ್ಲಿ ಹೇಳಿದರೆ ಅದು ಎಲ್ಲರಿಗೂ ಹಿತವನ್ನು ಉಂಟುಮಾಡುವುದು ನಿಶ್ಚಿತ.
- **ಅಭಿಸಂವಾದಿ ಬ್ರೂಯಾತ್:** ಹೀಗೆಂದರೆ, ಸದಾ ಸತ್ಯವನ್ನೇ ನುಡಿಯಬೇಕು. ಸಾಲಗಾರನ ಕರೆಗಳಿಗೆ ಹೆದರಿ ಮನೆಯೊಳಗಿದ್ದ ತಂದೆಯು ಮಗನ ಮೂಲಕ ಹೇಳಿ ಕಳುಹಿಸಿದರಂತೆ- 'ಅಪ್ಪ ಇಲ್ಲ ಎಂದು ಹೇಳು' ಅಂತ! 'ಅಪ್ಪ ಇಲ್ಲ ಎಂದು ಹೇಳು ಅಂತ ಅಪ್ಪ ಹೇಳಿದ್ದಾರೆ' ಎಂದನಂತೆ ಮಗ. ಆಗಲಿಲ್ಲವೇ ಅಪಮಾನ? ಸ್ನೇಹಿತರೆ, ಈ ಸುಳ್ಳಿನ ಕಥೆಯೇ ಅಷ್ಟು, ಸುಳ್ಳಿಗೊಂದು ಸುಳ್ಳನ್ನು ಸೇರಿಸಿ ಸುಳ್ಳಿನ ಸರಮಾಲೆಯನ್ನೇ ಕಟ್ಟಬೇಕಾಗುತ್ತದೆ. ಆದರೆ ಸುಳ್ಳನ್ನು ಮುಚ್ಚಿಡುವುದಕ್ಕೆ ಸಾಧ್ಯವೇ ಇಲ್ಲ. ಸುಳ್ಳಿನಿಂದ ನಾವು ಕಟ್ಟಿಕೊಂಡ ಬದುಕಲ್ಲಿ ಎಂದಿಗೂ ಸುಖವನ್ನು ಮತ್ತು ಸ್ವಾಸ್ಥ್ಯವನ್ನು ಅನುಭವಿಸಲು ಸಾಧ್ಯವೇ ಇಲ್ಲ, ತಾತ್ಕಾಲಿಕವಾಗಿ ಸುಳ್ಳು ನಮ್ಮನ್ನು ಕಷ್ಟದಿಂದ ದೂರ ಮಾಡಿದರೂ ಪರಿಣಾಮದಲ್ಲಿ ಸತ್ಯವೇ ನಮಗೆ ಪರಮ ಸುಖವನ್ನು ನೀಡುವುದು ಎಂಬುದನ್ನು ನಾವು ಸದಾ ನೆನಪಿನಲ್ಲಿಡಬೇಕು.
- **ಪೇಶಲಮ್ ಬ್ರೂಯಾತ್:** ಹೀಗೆಂದರೆ, ನಾವು ಆಡುವ ಮಾತುಗಳು ಸದಾ ಮನೋಜ್ಞವಾಗಿ ಮತ್ತು ಮಧುರವಾಗಿ ಇರಬೇಕು. ನಾವು ಹೇಳುವುದನ್ನು ಸುಂದರವಾಗಿ, ಸ್ಪಷ್ಟ ಶಬ್ದಗಳಲ್ಲಿ ಇನ್ನೊಬ್ಬರಿಗೆ ಸಂಪೂರ್ಣ ಅರ್ಥವಾಗುವಂತೆ ಹೇಳುವುದು ಉತ್ತಮ. ಉದಾಹರಣೆಗಳಿಲ್ಲದ, ಅಲಂಕಾರರಹಿತವಾದ, ಉತ್ತಮ ಶಬ್ದಗಳಿಲ್ಲದ ಮಾತುಗಳು ಕೇಳುಗರ ಮನಸ್ಸಿನಲ್ಲಿ ಒಳ್ಳೆಯ ಪರಿಣಾಮವನ್ನು ಬೀರಲು ಸಾಧ್ಯವಿಲ್ಲ. ಸತ್ಯವನ್ನು ಹೇಳುವುದರ ಜತೆಗೆ ಮಾತುಗಳು ಸುಂದರವಾಗಿಯೂ ಇರಲಿ ಎನ್ನುವುದು ಆಯುರ್ವೇದದ ಅಭಿಮತ.
- **ಪೂರ್ವಾಭಿಭಾಷಿ:** ಈಗಿನ ಕಾಲದಲ್ಲಂತೂ, ನಮಗೆ ಅಕ್ಕ ಪಕ್ಕದ ಮನೆಯವರ ಪರಿಚಯ ಇರುವುದೇ ವಿರಳ. ಯಾವುದಾದರೂ ಸಭೆ-ಸಮಾರಂಭಕ್ಕೆ ಹೋಗಿ ಅಲ್ಲಿ ಕಾಲ ಕಳೆದರೂ, ನಮ್ಮ ಪಾಡಿಗೆ ನಾವು ಮೊಬೈಲ್‌ಗಳ ವೀಕ್ಷಣೆಯಲ್ಲಿ ವ್ಯಸ್ತರಾಗಿರುವುದೇ ಹೆಚ್ಚು. ಸ್ವಲ್ಪ ವರ್ಷಗಳ ಹಿಂದೆಯಾದರೂ ಟ್ರೇನ್‌ನಲ್ಲಿ ಅಥವಾ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಒಬ್ಬರಿಗೊಬ್ಬರು ಪರಿಚಯ ಮಾಡಿಕೊಂಡು ಗಂಟೆಗಟ್ಟಲೆ ಹರಟೆ ಹೊಡೆಯುವ ಅಭ್ಯಾಸವಿತ್ತು. ಆದರೆ, ಈಗಂತೂ ಎರಡು ಮೂರು ದಿನಗಳು ಒಟ್ಟಿಗೆ ಪ್ರಯಾಣ ಮಾಡಿದರೂ ಒಬ್ಬರ ಮುಖ ಇನ್ನೊಬ್ಬರಿಗೆ ಬೇಡವಾದ ಪರಿಸ್ಥಿತಿ. 'ನಮಗೇಕೆ ಇತರರ ಗೊಡವೆ?' ಎಂಬ ನಿರ್ಲಕ್ಷ್ಯ ಕೆಲವರಿಗಾದರೆ, 'ಅವರೇ ಬೇಕಾದರೆ ಮಾತನಾಡಿಸಲಿ' ಎಂಬ ಅಹಂಕಾರ ಇನ್ನು ಕೆಲವರಿಗೆ. ಆದರೆ ಆಯುರ್ವೇದ ಹೇಳುತ್ತದೆ- ನಾವೇ ಸವಿನಯದಿಂದ ಮೊದಲು ಮಾತನಾಡಿಸಿದರೆ ಅದರಿಂದ ಆಗುವ ಪರಿಣಾಮಗಳು ಬಹಳ ಉತ್ತಮವಾದದ್ದು ಅಂತ. ಹಾಗಾಗಿ, ಪರಿಚಯ ಇಲ್ಲದವರನ್ನು ನಾವೇ ಮೊದಲು ಹೋಗಿ ಪರಿಚಯ ಮಾಡಿಕೊಳ್ಳುವುದು ಸದಾ ಶ್ರೇಯಸ್ಕರ.

ನಮ್ಮ ನುಡಿಯ ಮೂಲಕ ಸ್ವಾಸ್ಥ್ಯವನ್ನು ಸಂಪಾದಿಸಲು ನೆನಪಿನಲ್ಲಿಟ್ಟುಕೊಳ್ಳಬೇಕಾದಂಥ ಇನ್ನಷ್ಟು ಆಚರಣೆಗಳೆಂದರೆ:

- ನಮ್ಮ ಮಾತಿನಲ್ಲಿ ಇನ್ನೊಬ್ಬರ ದೋಷವನ್ನು ಹೇಳಬಾರದು.
- ತನ್ನ ಹೊಗಳಿಕೆಯನ್ನು ತಾನೇ ಮಾಡಿಕೊಳ್ಳಬಾರದು.
- ಇನ್ನೊಬ್ಬರ ರಹಸ್ಯವನ್ನು ಎಂದಿಗೂ ಹೊರಗೆಡಹಬಾರದು.
- ಸಜ್ಜನರಿಗೆ ಮತ್ತು ಗುರುಹಿರಿಯರಿಗೆ ತಿರುಗಿಸಿ ಉತ್ತರಿಸಬಾರದು.
- ಅತಿ ಎತ್ತರದ ಸ್ವರದಲ್ಲಿ ಅಥವಾ ಅತಿ ಸಣ್ಣ ಸ್ವರದಲ್ಲಿ ಮಾತನಾಡಬಾರದು.
- ಮಾತನಾಡುವಾಗ ಅಹಂಕಾರಿಕ ಮಾತು ಅಥವಾ ಅಟ್ಟಹಾಸದ ನಗು ಒಳ್ಳೆಯದಲ್ಲ.
- ಅವಾಚ್ಯ ಮಾತು ಎಂದಿಗೂ ಸಲ್ಲದು.
- ಪ್ರಸನ್ನವದನರಾಗಿ ಒಂದು ಒಳ್ಳೆಯ ನಗುವಿನೊಂದಿಗೆ ಸದಾ ಮಾತನಾಡುವ ಪ್ರಯತ್ನವಿರಲಿ!

ಸ್ಮಿತವಿರಲಿ ವದನದಲಿ ಕಿವಿಗೆ ಕೇಳಿಸದಿರಲಿ।
ಹಿತವಿರಲಿ ವಚನದಲಿ ಋತವ ಬಿಡದಿರಲಿ।
ಹಸನೊಂದು ನುಡಿಯಲ್ಲಿ, ನಡೆಯಲ್ಲಿ, ನೋಟದಲಿ।
ಪಸರುತಿರೆ ಬಾಳ್ ಚೆಲುವು ಮಂಕುತಿಮ್ಮ॥

ಜೇಡರಬಲೆ

ರವೀ ಸಜಂಗದ್ದೆ

ರಷ್ಯಾ ಮೇಲೆ ಉಕ್ರೇನ್ ದಾಳಿ!

ಯುದ್ಧವೆಂದರೆ ಹಾಗೆಯೇ- ಶುರುವಾಗೋ ದಿನ ಮಾತ್ರ ಒಂದು ದೇಶದ ನಿಯಂತ್ರಣದಲ್ಲಿರುತ್ತದೆ, ಆದರೆ ಮುಗಿಸುವ ದಿನ ಮಾತ್ರ ಎರಡೂ ದೇಶಗಳ ನಿಯಂತ್ರಣದಲ್ಲಿರುವುದಿಲ್ಲ. ರಷ್ಯಾ-ಉಕ್ರೇನ್ ನಡುವಿನ ಯುದ್ಧ 3 ವರ್ಷಗಳಿಂದ ನಡೆಯುತ್ತಿದೆ! ಇದು ಕೆಲವೇ ದಿನದೊಳಗೆ ಮುಗಿದು, ಬಲಿಷ್ಠ ರಷ್ಯಾ ದೇಶವು ಅಷ್ಟೇನೂ ಶಕ್ತಿಶಾಲಿಯಲ್ಲದ ಉಕ್ರೇನನ್ನು ಸೋಲಿಸುವ ಸಾಧ್ಯತೆ ದಟ್ಟವಾಗಿತ್ತು ಮತ್ತು ವಾಸ್ತವಕ್ಕೆ ಹತ್ತಿರವಿದ್ದ ಆಲೋಚನೆಯೂ ಆಗಿತ್ತು.

ಆದರೆ ಹಾಗಾಗಲಿಲ್ಲ! ಒಂದೆರಡು ಯುದ್ಧವಿರಾಮಗಳೂ ಜತೆಯಾಗಿ ಈ ಯುದ್ಧ 4ನೇ ವರ್ಷಕ್ಕೆ ಕಾಲಿಟ್ಟಿದೆ. ಎರಡೂ ಕಡೆಯಲ್ಲಿ ಅಪಾರ ಸಾವು-ನೋವು-ನಷ್ಟಗಳಾಗಿವೆ. ವರ್ಷಗಳ ಹಿಂದೆ, ನ್ಯಾಟೋ ಸಮೂಹದ ಹಲವು ದೇಶಗಳ ಒತ್ತಡದಿಂದಾಗಿ ಉಕ್ರೇನ್, ಬೆಲಾರಸ್, ಕಝಕಿಸ್ತಾನ್ ಮತ್ತು ದಕ್ಷಿಣ ಆಫ್ರಿಕಾ ದೇಶಗಳು ತಮ್ಮ ಸಂಗ್ರಹದಲ್ಲಿದ್ದ ಅಣುಬಾಂಬ್/ಶಸ್ತ್ರಾಸ್ತ್ರಗಳನ್ನು ರಷ್ಯಾಕ್ಕೆ ಮಾರಿದವು. ಇದಕ್ಕೆ ಪ್ರತಿಯಾಗಿ ಅವು ಅಮೆರಿಕ ಮತ್ತು ರಷ್ಯಾದಿಂದ ಆರ್ಥಿಕ ಮತ್ತಿತರ ನೆರವನ್ನು ಪಡೆದವು. ಇದಾದ ಕೆಲ ವರ್ಷಗಳಲ್ಲಿ ರಷ್ಯಾ-ಉಕ್ರೇನ್ ಸಂಬಂಧ ಹದಗೆಡಲಾರಂಭಿಸಿ ಯುದ್ಧ ಶುರುವಾಯಿತು. ಒಂದೊಮ್ಮೆ ಉಕ್ರೇನ್‌ಗೆ ತನ್ನದೇ ಆದ ಅಣ್ವಸ್ತ್ರ ಬಲವಿದ್ದಿದ್ದರೆ, ಈ ಯುದ್ಧ ಶುರುವಾಗುತ್ತಿರಲಿಲ್ಲವೇನೋ! ಒಟ್ಟಿನಲ್ಲಿ ಈ ಯುದ್ಧ ವಿಶ್ವದ ವಿವಿಧ ದೇಶಗಳ ಮೇಲೆ ತನ್ನ ನಕಾರಾತ್ಮಕ ಛಾಯೆಯನ್ನು ಬೀರಿದೆ.

ಈ ಯುದ್ಧವನ್ನು ಕೊನೆಗಾಣಿಸುವ/ದೀರ್ಘವಿರಾಮ ನೀಡುವ ನಿಟ್ಟಿನಲ್ಲಿ ಹಲವಾರು ಯತ್ನಗಳಾಗುತ್ತಿದ್ದರೂ, ಅವು ಯಶ ಕಾಣದೆ ಎರಡೂ ಕಡೆಗಳಲ್ಲಿ ಸಾವು-ನೋವು ಸಂಭವಿಸುತ್ತಿವೆ. ಐರೋಪ್ಯ ಒಕ್ಕೂಟ, ನ್ಯಾಟೋ, ಚೀನಾ ಮತ್ತು ಅಮೆರಿಕ ಪರದೆಯ ಹಿಂದಿನಿಂದಲೇ ಈ ಯುದ್ಧಕ್ಕೆ ಪ್ರೇರಣೆ, ಸಂಪನ್ಮೂಲ, ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿವೆ. ಆದರೆ ಈ ಬಾಬತ್ತಿಗೆ ಅಗಾಧ ಹಣ ಖರ್ಚಾಗುವುದರಿಂದ ದಿನಗಳೆದಂತೆ ಈ ರಾಷ್ಟ್ರಗಳು ತಮ್ಮ ನೆರವನ್ನು ತಗ್ಗಿಸುತ್ತಾ ಬಂದವು. ಈ ಯುದ್ಧದಿಂದ ತಮಗೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂದರಿತ ಈ ದೇಶಗಳು ಮೌನವಾಗಿ ಕೈಯೆತ್ತಿದವು. ಯುದ್ಧದ ಮೇಲೆ ಹೂಡಿಕೆ ಮಾಡಿ ಒಂದಷ್ಟು ರಾಜತಾಂತ್ರಿಕ ಮತ್ತು ವ್ಯಾವಹಾರಿಕ ಲಾಭ ಮಾಡಿಕೊಳ್ಳುವ ಅವುಗಳ ಆಲೋಚನೆಗಳು, ಆಯಾ ದೇಶಗಳ ಮುಖ್ಯಸ್ಥರಿಂದಾಗಿ ಮಕಾಡೆ ಮಲಗಿವೆ. ಹೀಗಾಗಿ ಈ ಯುದ್ಧವನ್ನೀಗ ರಷ್ಯಾ ಮತ್ತು ಉಕ್ರೇನ್ ಮಾತ್ರವೇ ನಿರ್ವಹಿಸಬೇಕಿದೆ.

ಈ ನಡುವೆ ಉಕ್ರೇನ್ ನಡೆಸಿದ 'ಆಪರೇಷನ್ ಸ್ಪೈಡರ್ ವೆಬ್' ಎಂಬ ಅನೂಹ್ಯ ದಾಳಿಯು ರಷ್ಯಾವನ್ನು ಕಂಗೆಡಿಸಿ, ಶಸ್ತ್ರಾಸ್ತ್ರ ಸಂಗ್ರಹಕ್ಕೆ ಅಪಾರ ಹಾನಿಮಾಡಿದೆ, ರಷ್ಯಾದ ಅಸ್ಮಿತೆಗೆ ದೊಡ್ಡ ಪೆಟ್ಟು ನೀಡಿದೆ. ಇದರ ಒಂದಿಷ್ಟು ವಿವರ ಹೀಗಿದೆ: ಈ ಯುದ್ಧ ಜೂನ್ 1ರಂದು ತೀವ್ರವಾಯಿತು. ಉಕ್ರೇನ್‌ನ ಮಿಲಿಟರಿ ತರಬೇತಿ ಕೇಂದ್ರವೊಂದರ ಮೇಲೆ ರಷ್ಯಾದಿಂದ 'ಇಸ್ಕಾಂಡರ್-ಎಂ' ಕ್ಷಿಪಣಿ ದಾಳಿಯಾದ ಪರಿಣಾಮ 12 ಉಕ್ರೇನಿ ಸೈನಿಕರು ಸತ್ತು ನೂರಾರು ಮಂದಿ ಗಾಯಗೊಂಡರು. ಇದಕ್ಕೆ ಪ್ರತೀಕಾರವೆಂಬಂತೆ ಉಕ್ರೇನ್ ಪಡೆಗಳು ರಷ್ಯಾದ ಐದು ಪ್ರಮುಖ ವಾಯುನೆಲೆಗಳ ಮೇಲೆ ಕಂಡು ಕೇಳರಿಯದ ರೀತಿಯಲ್ಲಿ 117 ಡ್ರೋನ್‌ಗಳಿಂದ ದಾಳಿ ನಡೆಸಿದವು. ಇದರಿಂದಾಗಿ ರಷ್ಯಾದ ಅತ್ಯಾಧುನಿಕ ಕ್ಷಿಪಣಿಗಳು, ರಾಡಾರ್ ಮತ್ತು ಕಮಾಂಡ್ ವಿಮಾನಗಳು ನಾಶವಾದವು. ಈ ದಾಳಿಗೆ ಉಕ್ರೇನ್ ನೀಡಿದ ಹೆಸರು 'ಆಪರೇಷನ್ ಸ್ಪೈಡರ್ ವೆಬ್'. ಈ ದಾಳಿಗೊಳಗಾದ ರಷ್ಯಾದ ನೆಲೆಗಳು ಉಕ್ರೇನ್ ಗಡಿಯಿಂದ ಸಾವಿರಾರು ಕಿ.ಮೀ. ದೂರವಿದ್ದರೂ ಗುರಿ ತಲುಪಿದ್ದು ಈ ದಾಳಿಯ ನಿಖರತೆಗೆ ಸಾಕ್ಷಿ. ಈ ದಾಳಿಯಿಂದ ರಷ್ಯಾಕ್ಕೆ ಆಗಿರುವ ನಷ್ಟ ಸುಮಾರು 60,000 ಕೋಟಿ ರುಪಾಯಿಗಳು!

ಈ ದಾಳಿಗೆ ಬಳಸಿದ ಡ್ರೋನ್‌ಗಳನ್ನು ರಿಮೋಟ್ ನಿಯಂತ್ರಿತ ಮುಚ್ಚಳವಿರುವ ಮರದ ಪಾತ್ರೆಗಳ ಒಳಗೆ ಪ್ಯಾಕ್ ಮಾಡಿ ರಷ್ಯಾದೊಳಗೆ ಸಾಗಿಸಲಾಯಿತು. ಕಳ್ಳಸಾಗಣೆ ಮೂಲಕ ಅಲ್ಲಿಗೆ ಉಕ್ರೇನ್‌ನಿಂದ ಸಾಕಷ್ಟು ಟ್ರಕ್‌ಗಳನ್ನು ಕಳುಹಿಸಿ, ಅವು ರಷ್ಯಾದವೆಂದು ಭಾಸವಾಗುವಂತೆ ಸಜ್ಜುಗೊಳಿಸಿ ಡ್ರೋನ್‌ಗಳಿರುವ ಪಾತ್ರೆಗಳನ್ನು ಅವುಗಳಲ್ಲಿ ಇರಿಸಲಾಯಿತು. ಈ ಟ್ರಕ್ಕುಗಳು ರಷ್ಯಾದ ಹೆದ್ದಾರಿ ಸಂಚಾರದಲ್ಲಿ ಇತರ ವಾಹನಗಳೊಂದಿಗೆ ಬೆರೆತವು. ಚೆಕ್‌ಪೋಸ್ಟ್‌ಗಳ ಮೂಲಕ ಸಲೀಸಾಗಿ ಸಾಗಲು ಬೇಕಾದ ಪರವಾನಗಿ ಮತ್ತಿತರ ದಾಖಲೆಗಳನ್ನು, ರಷ್ಯಾದ ಪೊಲೀಸ್ ವ್ಯವಸ್ಥೆಗೆ ಅನುಮಾನ ಬಾರದಂತೆ ಉಕ್ರೇನ್ ಸಜ್ಜುಗೊಳಿಸಿತು ಎನ್ನಲಾಗಿದೆ. ಮೊದಲೇ ಗೊತ್ತುಮಾಡಿದ ಸ್ಥಳಗಳಲ್ಲಿ ಅವನ್ನು ಪಾರ್ಕ್ ಮಾಡುವಂತೆ ಅದರ ಚಾಲಕರುಗಳಿಗೆ ಸೂಚಿಸಲಾಯಿತು. ಹೀಗೆ ಟ್ರಕ್ಕುಗಳು ನಿಂತ ಅಷ್ಟೂ ಪ್ರದೇಶಗಳು ರಷ್ಯಾದ ವಾಯುನೆಲೆಗಳ ಸಮೀಪದ ರಾಷ್ಟ್ರೀಯ ಹೆದ್ದಾರಿ ಸ್ಥಳಗಳಾಗಿದ್ದವು! ಆ ಟ್ರಕ್ಕುಗಳ ಚಾವಣಿಯನ್ನು, 'ಆಪರೇಷನ್ ಸ್ಪೈಡರ್ ವೆಬ್' ತಂಡವು ಉಕ್ರೇನ್‌ನ ಮೂಲೆಯಲ್ಲಿ ಕುಳಿತು ರಿಮೋಟ್ ಕಂಟ್ರೋಲ್ ವ್ಯವಸ್ಥೆಯ ಮೂಲಕ ತೆರೆಯುವಂತೆ ಮಾಡಿತು. ನಂತರ, ಡ್ರೋನ್‌ಗಳು ಸ್ವತಂತ್ರವಾಗಿ ಹಾರಿ ನಿರ್ದಿಷ್ಟ ಗುರಿ ತಲುಪುವಂತೆ ಕಮಾಂಡ್ ನೀಡಿತು. ಕೆಲ ನಿಮಿಷಗಳಲ್ಲೇ ರಷ್ಯಾದ ಐದು ಅತ್ಯಂತ ಭದ್ರ ಮತ್ತು ಗೌಪ್ಯ ವಾಯುನೆಲೆಗಳು, ಕ್ಷಿಪಣಿ ಸಂಗ್ರಹಾಗಾರಗಳ ಮೇಲೆ ಡ್ರೋನ್‌ಗಳು ಹಾರಿ ಸ್ವಯಂಸ್ಫೋಟಗೊಂಡು ಅವನ್ನು ಧ್ವಂಸಗೊಳಿಸಿದವು. ಟ್ರಕ್‌ನಿಂದ ಮಿಕ್ಕ ಎಲ್ಲಾ ಡ್ರೋನ್‌ಗಳು ಹಾರಿದ ನಂತರ, ಕೊನೆಯ ಡ್ರೋನ್ ಅಲ್ಲೇ ಸ್ಫೋಟಗೊಂಡು ಟ್ರಕ್ ಕೂಡ ನಾಶವಾಗುವಂತೆ ಈ ಆಪರೇಷನ್ ಅನ್ನು ಯೋಜಿಸಲಾಗಿತ್ತು. ಈ ಅನೂಹ್ಯ ದಾಳಿಯಿಂದ ರಷ್ಯಾ ಮಕಾಡೆ ಮಲಗಿತು.

ರಷ್ಯಾದ ಈ ಸೂಕ್ಷ್ಮ ಪ್ರದೇಶಗಳನ್ನು ಉಕ್ರೇನ್ ಅಷ್ಟು ನಿಖರವಾಗಿ ಜಾಲಾಡಿ ದಾಳಿ ಮಾಡಿದ್ದು ಹೇಗೆ ಎಂಬುದೇ ಕೌತುಕದ ಸಂಗತಿ. ಲಭ್ಯ ಮಾಹಿತಿಯಂತೆ, ರಷ್ಯಾದ ಈ ಪ್ರದೇಶಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಉಕ್ರೇನ್ ಹಲವು ಗೂಢಚಾರರನ್ನು ನಿಯೋಜಿಸಿತ್ತು. ಜತೆಗೆ, ಉಕ್ರೇನಿಗೆ ನ್ಯಾಟೋ ಒದಗಿಸಿದ ಉಪಗ್ರಹ ಗೌಪ್ಯ ದತ್ತಾಂಶ ಮತ್ತು ಅತ್ಯಾಧುನಿಕ ಐಎಸ್‌ಆರ್ (ಗುಪ್ತಚರ, ಕಣ್ಗಾವಲು, ವಿಚಕ್ಷಣ) ತಂತ್ರಜ್ಞಾನವು ಈ ಕಾರ್ಯಾಚರಣೆ ಅಂದುಕೊಂಡಂತೆ ನೆರವೇರಲು ಸಹಕರಿಸಿತು. ಉಕ್ರೇನ್‌ಗಿಂತ ಅಧಿಕ ಶಸ್ತ್ರಾಸ್ತ್ರಗಳನ್ನು ರಷ್ಯಾ ಹೊಂದಿದ್ದರೂ ಈ ಹಂತದಲ್ಲಿ ಅದು ದೊಡ್ಡ ಪೆಟ್ಟು ತಿಂದಿದೆ. ಶತ್ರುದೇಶದ ಮೇಲೆ, ಅದೇ ದೇಶದ ಒಳಗಿನಿಂದಲೇ ಹೇಗೆ ದಾಳಿ ನಡೆಸಬಹುದು ಮತ್ತು ಅದರ ಪರಿಣಾಮ ಹೇಗಿರುತ್ತದೆ ಎಂಬುದನ್ನು ಈ ಕಾರ್ಯಾಚರಣೆ ತೆರೆದಿಟ್ಟಿದೆ. ಸಾಮಾನ್ಯವಾಗಿ ಬಾನೆತ್ತರದಲ್ಲಿರುವ, ವ್ಯವಸ್ಥಿತ ಪ್ರತಿದಾಳಿ ಮತ್ತು ರಾಡಾರ್ ವ್ಯವಸ್ಥೆಯ ಗಮನಕ್ಕೆ ಬಾರದಂತೆ, ನೆಲದಿಂದ ಕೆಲವೇ ಅಡಿಗಳಷ್ಟು ಎತ್ತರದಿಂದ ಹೀಗೆ ಡ್ರೋನ್ ದಾಳಿ ನಡೆಸುವ ಮೂಲಕ ಉಕ್ರೇನ್ ಅಚ್ಚರಿ ಮೂಡಿಸಿದೆ.

ಈ ದಾಳಿಯಿಂದಾಗಿ, ಜೂನ್ 2ರಂದು ನಡೆಯಬೇಕಿದ್ದ ಕದನವಿರಾಮ ಸಭೆಯು ಒಮ್ಮತ ಮೂಡದೆ ಕೆಲ ನಿಮಿಷಗಳಲ್ಲೇ ಮುಕ್ತಾಯಗೊಂಡಿತು. ರಷ್ಯಾದ ಸೇನಾಸಾಮರ್ಥ್ಯ ಮತ್ತು ಯೋಧರ ಮನೋಬಲದ ಮೇಲಾದ ಈ ದಾಳಿಯ ಪರಿಣಾಮವನ್ನು ಈ ಹಂತದಲ್ಲಿ ಅಂದಾಜಿಸಲಾಗದಿದ್ದರೂ, ಇದುವರೆಗಿನ ಯುದ್ಧದಲ್ಲಿ ಹಿನ್ನಡೆ ಅನುಭವಿಸಿಕೊಂಡೇ ಬಂದಿದ್ದ ಉಕ್ರೇನ್‌ಗೆ ಈ ಗೆಲುವು ಒಂದಿಷ್ಟು ಉತ್ತೇಜನ ನೀಡಿರುವಂತೆ ಭಾಸವಾಗುತ್ತಿದೆ. ಅಷ್ಟರ ಮಟ್ಟಿಗೆ 'ಆಪರೇಷನ್ ಸ್ಪೈಡರ್ ವೆಬ್' ಬೀಗುತ್ತಿದೆ. ರಷ್ಯಾ ಸದ್ಯಕ್ಕೆ ಗಾಯಗೊಂಡ ಹುಲಿಯಂತಾಗಿದೆ. ಗಾಯಗೊಂಡ ಹುಲಿ ಯಾವಾಗಲೂ ಶತ್ರುಸಂಹಾರಕ್ಕೆ ಹೊಂಚುಹಾಕುತ್ತಿರುತ್ತದೆ. ಯುದ್ಧೋನ್ಮಾದವೆಂಬುದು ನಾಗರಿಕತೆಯ ಮೇಲಿನ ಅಯಾಚಿತ ಪ್ರಹಾರವೇ. ಈ ಪ್ರಹಾರ ಸದ್ಯಕ್ಕಂತೂ ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ, ಛೇ!

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಐಪಿಎಲ್ UGLY, ಪಿಚ್ಚಲ್ಲಿ ಭಾವೋನ್ಮಾದದ GOOGLY!

ಪದಪ್ರಸಾದ
ತುರುವೇಕೆರೆ ಪ್ರಸಾದ್
vveditoped@gmail.com
turuvekereprasad@gmail.com

ಕ್ರಿಕೆಟ್ ಒಂದು ಕಾಲಕ್ಕೆ 'ಸಭ್ಯರ ಆಟ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಆದರೆ ಇತ್ತೀಚಿನ ವಿದ್ಯಮಾನಗಳನ್ನು ನೋಡಿದರೆ ಕ್ರಿಕೆಟ್ 'ಅಸಭ್ಯರ ಕೂಟ' ಎನ್ನುವಂತಾಗಿದೆ. ಕ್ರಿಕೆಟ್ ಎಂಬುದು ಆಟಕ್ಕಿಂತ ಹೆಚ್ಚಾಗಿ ಒಂದು ಉದ್ಯಮವಾಗಿದೆ. ಲಾಭಕೋರರ, ಶ್ರಮವಿಲ್ಲದೆ ಕೋಟಿ ಕೋಟಿ ಲಪಟಾಯಿಸುವ ಜೂಜುಕೋರರ ದಂಧೆಯಾಗಿದೆ. ಕ್ರಿಕೆಟ್ ಒಂದು 'ಕಲಾತ್ಮಕ ಮೋಜಿನ ಆಟ' ಎನ್ನುವ ಖ್ಯಾತಿ ಕಳೆದುಕೊಂಡು 'ಬಾಜಿ ಕಟ್ಟೋ ಆಟ' ಎಂಬ ಕುಖ್ಯಾತಿಗೆ ಪಾತ್ರವಾಗಿದೆ.

ಕ್ರಿಕೆಟನ್ನೇ ಅದರಲ್ಲೂ ಐಪಿಎಲ್ ಅನ್ನೇ ಗುರಿಯಾಗಿಟ್ಟುಕೊಂಡೇ ಕೋಟಿ ಕೋಟಿ ಹಣ ಬಾಚಲು ಹಲವು ಫ್ರಾಂಚೈಸಿಗಳನ್ನು ಹುಟ್ಟುಹಾಕಲಾಗಿದೆ. ಈ ಫ್ರಾಂಚೈಸಿಗಳು ಕ್ರಿಕೆಟ್ ಆಟವನ್ನು ಪ್ರಮೋಟ್ ಮಾಡುತ್ತಿಲ್ಲ, ಬದಲಿಗೆ ಕ್ರಿಕೆಟ್ ಹೆಸರಲ್ಲಿ ಜನರ ಕೋಟಿ ಕೋಟಿ ಹಣ ಲೂಟಿ ಮಾಡುತ್ತಿದ್ದಾರೆ. ಈ ಎಲ್ಲಾ ಫ್ರಾಂಚೈಸಿಗಳ ಮಾಲೀಕರು ಕೋಟ್ಯಧೀಶ್ವರರು, ಸಿನಿಮಾ ತಾರೆಯರು ಮತ್ತು ಉದ್ಯಮಿಗಳು. ಹೊರದೇಶಗಳ 62 ಆಟಗಾರರೂ ಸೇರಿದಂತೆ 182 ಆಟಗಾರರು ಸುಮಾರು 640 ಕೋಟಿ ರು.ಗೆ ಹರಾಜಾಗಿದ್ದಾರೆ. ಒಂದಿಷ್ಟು ಫ್ರಾಂಚೈಸಿಗಳು, ನೂರಾರು ಆಟಗಾರರು, ಬೆಟ್ಟಿಂಗ್ ಏಜೆಂಟ್ಸ್, ಬೆಟ್ಟಿಂಗ್ ಜಾಲತಾಣಗಳು, ಜಾಹೀರಾತು ಸಂಸ್ಥೆಗಳು, ಮಾಧ್ಯಮ ಗುಂಪುಗಳು ಹೀಗೆ ಕೋಟಿ ಕೋಟಿ ಹಣ ಕೈ ಬದಲಾಗುವ ಒಂದು ವಿಷವರ್ತುಲವಿದು! ಜಗತ್ತಿನಲ್ಲೇ ಎರಡನೇ ಅತಿ ಶ್ರೀಮಂತ ಕ್ರಿಕೆಟ್ ಲೀಗ್ ಎಂದು ಐಪಿಎಲ್‌ಗೆ ಹೆಗ್ಗಳಿಕೆ ಇದೆ. ಮಾಧ್ಯಮ ಹಕ್ಕುಗಳಿಂದ 6.4 ಬಿಲಿಯನ್ ಡಾಲರ್ ವರಮಾನವಿದೆ. ಪ್ರತಿ ಐಪಿಎಲ್ ಮ್ಯಾಚ್ ಬೆಲೆ ಅಂದಾಜು 13.4 ಮಿಲಿಯನ್ ಡಾಲರ್. ಅಂದಾಜು ಪ್ರಾಯೋಜಕ ಆದಾಯವೇ ಸುಮಾರು 59 ಮಿಲಿಯನ್ ಡಾಲರ್.

ಕ್ರಿಕೆಟ್ ಇಂಥ ಅನಾಹುತಕಾರಿ ಮಟ್ಟ ತಲುಪಿದ್ದಕ್ಕೆ ಮುಖ್ಯ ಕಾರಣ ರೋಚಕತೆ. ರೋಚಕತೆ ಹೆಚ್ಚಾದಷ್ಟೂ ಅದರಿಂದಾಗುವ ಅಪಾಯಗಳ ಪ್ರಮಾಣವೂ ಹೆಚ್ಚುತ್ತಾ ಹೋಗುತ್ತದೆ. ಐಪಿಎಲ್ ಷೇರು ಮಾರುಕಟ್ಟೆಯ ಒಂದು ಅಲ್ಪಕಾಲೀನ ವ್ಯಾಪಾರದ (ಷಾರ್ಟ್ ಟರ್ಮ್ ಟ್ರೇಡ್) ಸ್ವರೂಪ ಪಡೆದಿದೆ. ತ್ವರಿತ ನಿರ್ಧಾರಗಳು, ಅಪಾಯದ ಲೆಕ್ಕಾಚಾರಗಳು, ನಾಟಕೀಯ ಅನಿರೀಕ್ಷಿತ ತಿರುವುಗಳು ಅತಿ ದೊಡ್ಡ ಲಾಭಕ್ಕೆ ಎಡೆಮಾಡಿಕೊಡಬಹುದು ಇಲ್ಲವೇ ಅಪಾರ ನಷ್ಟವನ್ನೂ ಉಂಟುಮಾಡಬಹುದು. ಇದು ಐಪಿಎಲ್ ರೋಚಕತೆಯ ಒಂದು ವ್ಯಾವಹಾರಿಕ ಮುಖ.

ಈ ರೋಚಕತೆಗೆ ಇನ್ನೊಂದು ಮುಖವಿದೆ. ಬದುಕಿನ ಎಲ್ಲಾ ಹಂತಗಳಲ್ಲೂ ಕ್ಷಣ ಕ್ಷಣಕ್ಕೂ ನಾವು ಮೇಲಿಂದ ಮೇಲೆ ರೋಚಕತೆಯನ್ನೇ ನಿರೀಕ್ಷಿಸುತ್ತಾ ಹೋಗುವ ಒಂದು ವಿಲಕ್ಷಣ ಜೀವನಶೈಲಿಯನ್ನು ಅಪ್ರಜ್ಞಾಪೂರ್ವಕವಾಗಿಯೇ ರೂಢಿಸಿಕೊಂಡುಬಿಟ್ಟಿದ್ದೇವೆ. ಕ್ರಿಕೆಟ್ ಸಹ ಇದರ ಒಂದು ಭಾಗ! ಪ್ರತಿ ಬಾಲು, ಪ್ರತಿ ಹೊಡೆತ ಒಂದು ರೋಚಕತೆ ತೆರೆದಿಡುವ ತುದಿಗಾಲಲ್ಲಿ ನಿಂತಿರುತ್ತೇವೆ. ವೈಯಕ್ತಿಕ ಹಂತದಿಂದ ಈ ರೋಚಕತೆ ಸಮುದಾಯದ 'ಸಮೂಹ ಸನ್ನಿ' ಹಂತ ತಲುಪಿಬಿಟ್ಟರಂತೂ ಅಪಾಯ ಕಟ್ಟಿಟ್ಟಬುತ್ತಿ. ಅತಿಯಾದ ರೋಚಕತೆ, ಭಾವೋನ್ಮಾದ ನಮ್ಮ ಯೋಚನಾಶಕ್ತಿಯನ್ನು ಕುಂಠಿತಗೊಳಿಸುತ್ತದೆ. ಯುಕ್ತಾಯುಕ್ತತೆಯ ಪರಿಜ್ಞಾನದಿಂದ ದೂರ ಮಾಡುತ್ತದೆ. ಗಮನ ಕೇಂದ್ರೀಕರಿಸುವ ತಾದ್ಯಾತ್ಮ್ಯ ಶಕ್ತಿಯನ್ನು ಹಾಳುಗೆಡವುತ್ತದೆ. ನಿರ್ಧಾರಗಳು ಗೊಂದಲಮಯವಾಗುತ್ತವೆ. ಕಲ್ಪನೆಯ ಸುಖದ ಭ್ರಮೆಯಲ್ಲಿ ತೇಲುವಂತೆ ಮಾಡುತ್ತದೆ. ಚಿಕ್ಕ ವೈಫಲ್ಯವೂ ಹತಾಶೆ, ಖಿನ್ನತೆಯಲ್ಲಿ ಪರ್ಯವಸಾನವಾಗುತ್ತದೆ. ಮುಖ್ಯವಾಗಿ ಭಾವೋನ್ಮಾದ ಸಮೂಹ ಸನ್ನಿಯಾಗಿ ಸಾಮಾಜಿಕ ಸ್ವಾಸ್ಥ್ಯವನ್ನೇ ಹಾಳುಗೆಡವುತ್ತದೆ. ಇತ್ತೀಚೆಗೆ ಸಣ್ಣ ಪುಟ್ಟ ವಿಷಯಗಳೂ ಅತಿಸೂಕ್ಷ್ಮ ಎನಿಸುತ್ತಿರುವುದು, ಅನಗತ್ಯ ಮಹತ್ವ ಪಡೆದುಕೊಳ್ಳುತ್ತಿರುವುದು, ಕ್ರಿಕೆಟ್ ದುರಂತ ಎಲ್ಲಕ್ಕೂ ಈ ಸಮಚಿತ್ತತೆಯನ್ನು ಕಾಪಾಡಿಕೊಳ್ಳಲಾಗದ ಭಾವೋನ್ಮಾದವೇ ಕಾರಣವಾಗುತ್ತಿದೆ.

ಐಪಿಎಲ್‌ನಲ್ಲಿ ಎತ್ತು-ಕುರಿಗಳಂತೆ ಆಟಗಾರರನ್ನು ಹರಾಜು ಹಾಕುವುದೇ ಒಂದು ಅಮಾನವೀಯ ಪ್ರಕ್ರಿಯೆ. ಆಟಗಾರ ತನ್ನ ಶ್ರೇಷ್ಠತೆಯನ್ನು ವ್ಯಕ್ತಪಡಿಸಲು ತನ್ನನ್ನು ತಾನು ಮಾರಿಕೊಳ್ಳುವ ಅನಿವಾರ್ಯತೆಗೆ ಸಿಲುಕುತ್ತಾನೆ. ಇದು ಆಟಗಾರನೊಬ್ಬನ ಸೃಜನಶೀಲ, ಕಲಾತ್ಮಕ ಆಟಕ್ಕಿಂತ ಅವನ ಆಕ್ರಮಣಕಾರಿ ಆಟವನ್ನಷ್ಟೇ ಬೇಡುತ್ತದೆ. ಇದಕ್ಕೆ ಅಗತ್ಯವಾದ ತರಬೇತಿಗೇ ಆಟಗಾರ ಲಕ್ಷಾಂತರ ರುಪಾಯಿ ಖರ್ಚು ಮಾಡಬೇಕು. ಬರೀ ಪ್ರತಿಭೆ ಇದ್ದರಷ್ಟೇ ಸಾಲದು, ಅವನು ಈ ಅನಾರೋಗ್ಯಕರ ಸ್ಪರ್ಧೆಯ ಎಲ್ಲ ಮಜಲುಗಳನ್ನೂ ಗೆಲ್ಲಬೇಕು. ಇದು ಕೌಶಲಕ್ಕಿಂತ ಹೆಚ್ಚಾಗಿ ಕುಯುಕ್ತಿಯನ್ನೇ, ಮೌಲ್ಯಗಳಿಗಿಂತ ಹೆಚ್ಚಾಗಿ ತಂತ್ರಗಾರಿಕೆಯನ್ನೇ ಅವಲಂಬಿಸುತ್ತದೆ. ಹೀಗೆ ಒಂದು ಫ್ರಾಂಚೈಸಿ ಕೊಂಡ ಆಟಗಾರ ಆ ತಂಡಕ್ಕಾಗಿ ಆಡುತ್ತಾನೆಯೇ ಹೊರತು ಯಾವುದೇ ಪ್ರಾದೇಶಿಕ ಭಾವನೆ, ದೇಶವನ್ನು ಪ್ರತಿನಿಧಿಸುವ ಪರಿಕಲ್ಪನೆ ಅವನಲ್ಲಿರಲು ಸಾಧ್ಯವೇ ಇಲ್ಲ. ಆರ್‌ಸಿಬಿ ತಂಡದ ಸಂಸ್ಥಾಪಕ ವಿಜಯ್ ಮಲ್ಯ ಅವರೇ ಸಂದರ್ಶನವೊಂದರಲ್ಲಿ ''ರಾಯಲ್ ಚಾಲೆಂಜರ್ ಎನ್ನುವುದೊಂದು ಮದ್ಯದ ಬ್ರಾಂಡ್. ಅದರ ಪ್ರಚಾರಕ್ಕಾಗಿಯಷ್ಟೇ ನಾನು ಫ್ರಾಂಚೈಸಿ ಸ್ಥಾಪಿಸಿದ್ದು, ವ್ಯಾಪಾರಿ ಉದ್ದೇಶ ಬಿಟ್ಟು ಬೇರೆ ಯಾವುದೇ ಉದ್ದೇಶ ಇರಲಿಲ್ಲ'' ಎಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಹೀಗಿರುವಾಗ 'ಆರ್‌ಸಿಬಿ ಬೆಂಗಳೂರು' ಎಂದು ಹೆಸರಿರುವ ಮಾತ್ರಕ್ಕೆ ಅದು 'ನಮ್ಮದು' ಆಗುವುದು ಹೇಗೆ? ಆದರ ಆಟಗಾರರು 'ಅವತಾರ ಪುರುಷರು' ಆಗುವುದು ಹೇಗೆ? (ಇದು ಎಲ್ಲಾ ತಂಡಗಳಿಗೂ ಅನ್ವಯಿಸುತ್ತದೆ). ಕಾಲ್ತುಳಿತ ದುರಂತ ಸಂಭವಿಸಿದ ಮೇಲೂ ಯಾವೊಬ್ಬ ಆಟಗಾರನೂ ಸಂತ್ರಸ್ತರ ಮನೆಗೆ ಹೋಗಿ ಸಾಂತ್ವನ ಹೇಳಲಿಲ್ಲ. ಒಂದು ಬಹಿರಂಗ ಪತ್ರಿಕಾಗೋಷ್ಠಿ ಮಾಡಿ ಕನ್ನಡ ಜನತೆಗೆ ವಿಷಾದ ತಿಳಿಸಲಿಲ್ಲ. ಪರಿಸ್ಥಿತಿ ಹೀಗಿರುವಾಗ ಯಾಕೀ ಭಾವೋನ್ಮಾದ? ವೀರಾವೇಶ?

ಹರಾಜಾದ ಆಟಗಾರರು ಆಟದ ಮೈದಾನದಲ್ಲಿ ತೋರುವ ವರ್ತನೆಯಾದರೂ ಎಂಥದ್ದು? ಅದಕ್ಕೂ ನಿಜಕ್ಕೂ ಅಸಹ್ಯ ಹುಟ್ಟಿಸುವಂಥದ್ದು. ಇವರು ಮೈದಾನದಲ್ಲೂ ಆಕ್ರಮಣಕಾರಿ ಮನಸ್ಥಿತಿಯನ್ನೇ ತೋರುತ್ತಾರೆ. ಮೈದಾನದುದ್ದಕ್ಕೂ ಎಂಜಲು ಉಗಿಯುತ್ತಾರೆ. ಹಲವರು ಅಂಪೈರ್‌ಗಳ ಜತೆ ಜಗಳಕ್ಕಿಳಿಯುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಸಹ-ಆಟಗಾರರನ್ನೂ ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಅವರೊಂದಿಗೂ ಸಂಘರ್ಷಕ್ಕಿಳಿಯುತ್ತಾರೆ. ಚುಚ್ಚುಮಾತುಗಳನ್ನು, ಕುಹಕಗಳನ್ನು ಆಡಿ ರೇಗಿಸಿ ಪ್ರಚೋದಿಸುತ್ತಾರೆ. ಒಬ್ಬ ಆಟಗಾರ ಚೆನ್ನಾಗಿ ಆಡಿ ಔಟಾದರಂತೂ ಶತ್ರುವೊಬ್ಬನನ್ನು ಸಂಹಾರ ಮಾಡಿದ ಪರಿಯಲ್ಲಿ ವಿಕಾರವಾಗಿ ಕಿರಿಚುತ್ತಾ, ವಿಕೃತ ಸಂತೋಷದಿಂದ ಮುಖ ಹಿಂಡಿ, ವಿಚಿತ್ರ ಅಂಗಚೇಷ್ಟೆಯಲ್ಲಿ ರಾಕ್ಷಸರಂತೆ ವರ್ತಿಸುತ್ತಾರೆ. ಧೋನಿ, ಗಿಲ್, ಶ್ರೇಯಸ್ ಅಂತ ಬೆರಳೆಣಿಕೆಯಷ್ಟು ಮಂದಿಯನ್ನು ಬಿಟ್ಟರೆ ಹೆಸರಾಂತ ಆಟಗಾರರೂ ಒಂದು ಆಟದ ಶ್ರೇಷ್ಠತೆಗೆ ಕೊಡಬೇಕಾದ ಘನತೆ, ಗೌರವಗಳನ್ನು ಮೈದಾನದಲ್ಲಿ ಕೊಡುವುದಿಲ್ಲ. ಇವರು ಬ್ಯಾಟ್ ಕುಟ್ಟುವುದೇನು, ಒಂದು ಅರ್ಧ ಸೆಂಚುರಿ ಹೊಡೆದಾಕ್ಷಣ ಎದುರಾಳಿಯ ಮುಖಕ್ಕೆ ತಿವಿಯುವಂತೆ ಗಾಳಿಯಲ್ಲಿ ಬ್ಯಾಟ್ ಹಾರಿಸಿ ಸಂಜ್ಞೆ ಮಾಡುವುದೇನು, ಯಾವುದೋ ಸಾಮ್ರಾಜ್ಯ ಗೆದ್ದವರಂತೆ ಸಿನಿಮೀಯ ಮಾದರಿಯಲ್ಲಿ ಗೆರೆ ಹಾಕಿ ಬ್ಯಾಟ್ ಕುಟ್ಟಿ ಅಹಂಕಾರದಿಂದ ಸಂಭ್ರಮಿಸುವುದೇನು? ಹಿಂದಿನ ಆಟಗಾರರಲ್ಲಿ ಇದ್ದಂತೆ ಇವರಲ್ಲಿ ಸಂಯಮ, ಸಮಚಿತ್ತತೆ, ಆಟಕ್ಕೆ ಕೊಡಬೇಕಾದ ಗೌರವ, ಸ್ನೇಹ, ಪ್ರೀತಿಯ ಮೌಲ್ಯ, ತನ್ನ ಅಭಿಮಾನಿಗಳಿಗೆ ಅನುಕರಣೀಯ ಮಾದರಿ ಆಗುವ ವರ್ತನೆ ಇದ್ಯಾವುದೂ ಇರುವುದೇ ಇಲ್ಲ. ಇಂಥ ಅನುಚಿತ ನಡತೆ ಆಟಗಾರರಿಗೆ ಶೋಭೆ ತರುವಂಥದಲ್ಲ.

ಇನ್ನು, ಕ್ರಿಕೆಟ್ ಹೊರತಾಗಿಯೂ ಇವರ ವ್ಯಾಪಾರಿ ಮನೋಭಾವನೆ ಯುಕ್ತಾಯುಕ್ತತೆಗಳ ಪರಿಜ್ಞಾನಗಳಾಚೆ ವಿಸ್ತರಿಸಿಕೊಂಡಿದೆ. ಇವರು ಅಂತಾರಾಷ್ಟ್ರೀಯ ಕಂಪನಿಗಳ ಉತ್ಪನ್ನಗಳಿಗೆ ಸ್ಟಾರ್ ಪ್ರಚಾರಕರು, ಬ್ರ್ಯಾಂಡ್ ಅಂಬಾಸಿಡರ್‌ಗಳು. ಪೆಪ್ಸಿ, ಕೋಲಾಗಳನ್ನಷ್ಟೇ ಯುವಕರು ಕುಡಿಯಬೇಕೆಂದು ಕರೆ ಕೊಡುತ್ತಾರೆ. ದುಬಾರಿ ಇಟಾಲಿಯನ್ ಲಕ್ಷುರಿ ಬ್ರ್ಯಾಂಡ್ ಬಟ್ಟೆಗಳನ್ನು ಧರಿಸಬೇಕೆಂದು ಪ್ರಚಾರ ಮಾಡುತ್ತಾರೆ. ವೈಭವೋಪೇತ ವಿದೇಶಿ ಕಾರುಗಳನ್ನೇ ('ಆಡಿ'ಯಂಥವನ್ನು) ಕೊಳ್ಳಲು ಪ್ರೇರೇಪಿಸುತ್ತಾರೆ. ದುಬಾರಿ ಸೆಂಟುಗಳನ್ನು ಪೂಸಿಕೊಂಡು ಸಂಭ್ರಮಿಸುತ್ತಾರೆ. ನಮ್ಮ ಎಳನೀರಿಗೆ, ಸಿರಿಧಾನ್ಯಕ್ಕೆ, ಮಜ್ಜಿಗೆಗೆ, ಖಾದಿ ಬಟ್ಟೆಗೆ, ಸೈಕಲ್ಲಿಗೆ ಕೊನೆಗೆ ನಮ್ಮ ಬೆವರಿಗೆ ಇವರು ಬ್ರ್ಯಾಂಡ್ ಅಂಬಾಸಿಡರ್ ಆಗುವುದೇ ಇಲ್ಲ. ನಮ್ಮ ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುವ ಕೆಲಸವನ್ನು ಇವರು ಮಾಡಲಾರರು. ನಮಗೆಷ್ಟೇ ಅಭಿಮಾನವಿದ್ದರೂ ಅವರು ನಮ್ಮನ್ನು ತಮ್ಮ ವೈಭವೋಪೇತ ಭವ್ಯ ಜೀವನದ ಭ್ರಮೆಯಲ್ಲಷ್ಟೇ ತೇಲಿಸುತ್ತಾರೆ. ಜೂಜು, ಆನ್‌ಲೈನ್ ಆಟಗಳಿಗೂ ಪ್ರಚಾರಕರಾಗಿ 'ಶ್ರಮವಿಲ್ಲದ, ದುಡಿಮೆಯದಲ್ಲದ ದಿಢೀರ್ ಗಂಟು ಮಾಡಿಕೊಳ್ಳಿ' ಎಂಬ ದಿವ್ಯಸಂದೇಶ ನೀಡುತ್ತಾರೆ.

ಕ್ರಿಕೆಟ್ ತಾರೆಯರ ವೈಯಕ್ತಿಕ ಬದುಕೂ ಸರಳ, ನೇರಾನೇರ ಎಂಬಂತಿರುವುದಿಲ್ಲ. ಅವರ ಪ್ರತಿಷ್ಠೆ, ಕೀರ್ತಿ, ಹಣಕ್ಕೆ ತಕ್ಕ ಹಾಗೆ ವೈಭವದ ಜೀವನವನ್ನೇ ರೂಢಿಸಿಕೊಂಡಿರುತ್ತಾರೆ. ಐಷಾರಾಮಿ ಬದುಕಿನ ಎಲ್ಲಾ ಮಜಲುಗಳನ್ನೂ ಅನುಭವಿಸುತ್ತಾರೆ. ದೇಶ ವಿದೇಶಗಳನ್ನು ಸುತ್ತುತ್ತಾರೆ. ಬಹಳಷ್ಟು ಆಟಗಾರರು ತಮ್ಮ ಪ್ರತಿಷ್ಠೆಗೆ ತಕ್ಕಂತೆ ತಮ್ಮಂತೆಯೇ ಖ್ಯಾತಿವೆತ್ತ ತಾರೆಯರನ್ನು, ಮಾಡೆಲ್‌ಗಳನ್ನು ಜೀವನ ಸಂಗಾತಿಯಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಎರಡು ಮೂರು ಸಂಬಂಧಗಳ ಮೂಲಕ ಹಲವು ವಿವಾದಗಳ ಸುಳಿಯಲ್ಲೂ ಸಿಲುಕುತ್ತಾರೆ. ಆಸ್ತಿ, ಹಣ, ವರ್ಚಸ್ಸು, ಖ್ಯಾತಿಯ ಆಕರ್ಷಣೆಗೆ ಒಳಗಾಗಿ ಸಂಗಾತಿಯನ್ನು ಆಯ್ಕೆ ಮಾಡಿಕೊಂಡ ಕಾರಣ ಪರಸ್ಪರ ಹೊಂದಾಣಿಕೆ ಇಲ್ಲದೆ ಇಂಥ ಎಷ್ಟೋ ಮದುವೆಗಳು ಮುರಿದುಬಿದ್ದಿವೆ. ಹಲವು ಆಟಗಾರರು ವಿಶ್ವಾಸದ್ರೋಹ, ಇನ್‌ಕಾಂಪಿಟಬಿಲಿಟಿ, ಮಾನಸಿಕ ಕಿರುಕುಳಗಳ ಕಾರಣಕ್ಕಾಗಿ ಸಂಗಾತಿಗಳಿಂದ ವಿಚ್ಛೇದನ ಪಡೆದಿದ್ದಾರೆ. ವಿಲಾಸಿ ಜೀವನದ ವೈಭೋಗದಲ್ಲಿ ತೇಲುತ್ತಾ ಶಾಂತಿ, ನೆಮ್ಮದಿಗಳಿಂದ ದೂರವಾಗಿ ಬದುಕನ್ನು ನರಕ ಮಾಡಿಕೊಂಡವರಿದ್ದಾರೆ. ಮಾಮೂಲಿ ಜನರಂತೆಯೇ ಗ್ರಹಾಂ ತೋರ್ಪ್, ಡೇವಿಡ್ ಬ್ಯಾರಿಸ್ಟೋ ಮೊದಲಾದ ಹಲವು ಕ್ರಿಕೆಟ್ ಆಟಗಾರರು ಬದುಕಿನ ಒತ್ತಡ ಸಹಿಸಲಾಗದೆ ಮಾನಸಿಕವಾಗಿ ನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಖ್ಯಾತ ಕ್ರಿಕೆಟಿಗ ಶೇನ್ ವಾರ್ನ್ ಥಾಯ್ಲೆಂಡ್‌ನಲ್ಲಿ ಸತ್ತ ಕಾರಣ ಇನ್ನೂ ನಿಗೂಢವಾಗಿದೆ.

ಕ್ರಿಕೆಟ್ ಆಟಗಾರರಿಂದ ಕಲಿಯುವುದೂ ಬೇಕಾದಷ್ಟಿದೆ. ಹಲವು ಸಂದರ್ಭಗಳಲ್ಲಿ ಅವರು ಅನುಕರಣೀಯ ಮಾದರಿಯಾಗಿ ನಿಂತಿರುವುದೂ ನಿಜ. ಅವರ ಆರಂಭಿಕ ಕಷ್ಟ ಕಾರ್ಪಣ್ಯದ ಬದುಕು, ಆಟಕ್ಕೆಂದೇ ಮಾಡಿದ ತ್ಯಾಗ, ಸಮರ್ಪಣಾ ಮನೋಭಾವದಿಂದ ದೇಶಕ್ಕೆ ನೀಡಿದ ಕೊಡುಗೆ ನಿಜಕ್ಕೂ ಅತ್ಯದ್ಭುತವಾದದ್ದು. ಸಚಿನ್ ತೆಂಡೂಲ್ಕರ್ ಅವರ ತಂದೆ ಹಠಾತ್ತನೆ ನಿಧನರಾದಾಗ ಅವರು 1999ರ ವಿಶ್ವಕಪ್ ಆಡುತ್ತಿದ್ದರು. ತಂದೆ ಸತ್ತ ಸುದ್ದಿ ಕೇಳಿ ಮುಂಬೈಗೆ ಧಾವಿಸಿ ಬಂದರು, ತೆಂಡೂಲ್ಕರ್ ಲಭ್ಯತೆ ಇಲ್ಲದೆ ಭಾರತ ಎರಡು ಪಂದ್ಯಗಳಲ್ಲಿ ಸೋತಿತು. ಎರಡೇ ದಿನದಲ್ಲಿ ವಾಪಸ್ ಬಂದ ತೆಂಡೂಲ್ಕರ್ ಕೀನ್ಯಾ ಪಂದ್ಯದಲ್ಲಿ 140 ಅಮೋಘ ರನ್‌ಗಳನ್ನು ಸಿಡಿಸಿ ಭಾರತದ ಗೆಲುವಿಗೆ ಕಾರಣರಾದರು. ತುಷಾರ್ ದೇಶಪಾಂಡೆ ತಮ್ಮ ತಾಯಿ ಕ್ಯಾನ್ಸರ್‌ನಿಂದ ಮರಣ ಹೊಂದಿದ ಸಂದರ್ಭದಲ್ಲಿ ಸಯ್ಯದ್ ಮುಷ್ತಾಕ್ ಅಲಿ ಪಂದ್ಯಾವಳಿಯಲ್ಲಿ ಆಡಿ ಅತಿ ಹೆಚ್ಚು ವಿಕೆಟ್ ಪಡೆದ ಖ್ಯಾತಿಗೆ ಪಾತ್ರರಾದರು. ಆಸಿಫ್ ಅಲಿಯಂತೂ ತಮ್ಮ ಮಗಳು ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಡುತ್ತಿದ್ದಾಗ ಎರಡು ಅರ್ಧಶತಕ ಬಾರಿಸಿದರು, ಮಗಳು ಸತ್ತ ಬೆನ್ನಿಗೇ ವಿಶ್ವಕಪ್ ಆಡಲು ಇಂಗ್ಲೆಂಡ್‌ಗೆ ತೆರಳಿದರು. ವಿರಾಟ್ ಕೊಹ್ಲಿ ಕರ್ನಾಟಕದ ವಿರುದ್ಧವೇ ರಣಜಿ ಆಡುತ್ತಿದ್ದಾಗ ಅವರ ತಂದೆ ಹೃದಯ ಸ್ತಂಭನದಿಂದ ತೀರಿಕೊಂಡರು. ಅಪ್ಪನ ಅಂತ್ಯಕ್ರಿಯೆ ಮುಗಿಸಿ ಎರಡೇ ದಿನದಲ್ಲಿ ಹಿಂದಿರುಗಿ ಮತ್ತೆ ಅಂಗಳಕ್ಕಿಳಿದೇಬಿಟ್ಟರು. ರಿಷಭ್ ಪಂತ್ ಅವರದ್ದೂ ಇದೇ ಮಾದರಿ. 2017ರಲ್ಲಿ ವಿಶ್ವಕಪ್ ಆಡುತ್ತಿದ್ದಾಗ ಅವರ ತಂದೆ ಹೃದಯಾಘಾತಕ್ಕೆ ಒಳಗಾದರು. ಆ ನೋವಿನಲ್ಲೇ ಮೈದಾನಕ್ಕಿಳಿದ ಪಂತ್, ಆರ್‌ಸಿಬಿ ವಿರುದ್ಧ ಅರ್ಧಶತಕ ಸಿಡಿಸಿದರು. ವಿಪರ್ಯಾಸವೆಂದರೆ ಕ್ರಿಕೆಟ್ ಆಟಗಾರರ ಇಂಥ ಮನೋಸ್ಥೈರ್ಯ, ದೃಢತೆ, ಛಲ, ಸಂಕಲ್ಪದ ಗುಣಗಳು ನಮ್ಮ ಯುವಕರಿಗೆ ಮಾದರಿ ಆಗುವುದೇ ಇಲ್ಲ. ಕೇವಲ ಅವರ ಹೇರ್ ಕಟ್, ಅವರ ವೈಭೋಗದ ಜೀವನ ಶೈಲಿ, ಅವರ ಜಾಹೀರಾತುಗಳ ವೈಖರಿ ಇಂಥ ಭೌತಿಕ ಅಂಶಗಳಷ್ಟೇ ಯುವಕರನ್ನು ಸೂಜಿಗಲ್ಲಿನಂತೆ ಸೆಳೆದುಬಿಡುತ್ತವೆ. ಆದಾಗ್ಯೂ ರನ್ ಗಳಿಸುವ ಚಾಕಚಕ್ಯತೆಗೋ, ವಿಕೆಟ್ ಕಬಳಿಸುವ ತಂತ್ರಕ್ಕೋ ಶಹಬ್ಬಾಶ್‌ಗಿರಿ ಕೊಡಲೇಬೇಕು, ಕ್ರೀಡಾಮನೋಭಾವದಿಂದ ಮೆಚ್ಚಲೇಬೇಕು. ಆಟಗಾರರ ಕುರಿತಾಗಿ ಅಭಿಮಾನವನ್ನು ಬೆಳೆಸಿಕೊಳ್ಳುವುದರಲ್ಲಿ ತಪ್ಪಿಲ್ಲ, ಆದರೆ ಅವರನ್ನೇ ದೇವರೆಂದು ತಲೆ ಮೇಲೆ ಹೊತ್ತುಕೊಂಡು ಭಾವೋದ್ವೇಗಕ್ಕೆ ಒಳಗಾಗಿ ಅನರ್ಥಗಳನ್ನು ಮೈಮೇಲೆ ಎಳೆದುಕೊಂಡು ಜೀವಹಾನಿ ಮಾಡಿಕೊಳ್ಳುವ ಹಂತಕ್ಕೆ ಯಾರೂ ಹೋಗಬಾರದು. ಆಟ ನೋಡಲು ಟಿಕೆಟ್ ತೆಗೆದುಕೊಳ್ಳುವಷ್ಟೇ ಅಭಿಮಾನವಿರಬೇಕು; ನಮ್ಮ ಆಟ ಮುಗಿಸಲು ಟಿಕೆಟ್ ತೆಗೆದುಕೊಳ್ಳಬಾರದು.

(ಲೇಖಕರು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:151

ಸಮಾಚಾರ ಸಣ್ಣದಲ್ಲ

200 ಜನರ ಡಿಎನ್‌ಎ ಸ್ಯಾಂಪಲ್ ಸಂಗ್ರಹ

ಅಹಮದಾಬಾದ್: ವಿಮಾನ ದುರಂತದಲ್ಲಿ ಮಡಿದವರ ಸಂಬಂಧಿಕರ ಪೈಕಿ ಈ ತನಕ ಸುಮಾರು 200 ಜನರ ಡಿಎನ್‌ಎ ಸ್ಯಾಂಪಲ್ಸ್ ಸಂಗ್ರಹಿಸಲಾಗಿದ್ದು, ಸುಮಾರು 10 ಮೃತದೇಹಗಳನ್ನು ಗುರುತಿಸಿ ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ. ಘಟನೆಯ ಕುರಿತು ಅಹಮದಾಬಾದ್ ನಗರ ಪೊಲೀಸ್ ಆಯುಕ್ತರು ಮಾಹಿತಿ ನೀಡಿದ್ದು, ಗುರುವಾರ ರಾತ್ರಿ ಸುಮಾರು 265 ಮೃತದೇಹಗಳನ್ನು ಹೊರತೆಗೆದು ಆಸ್ಪತ್ರೆಗೆ ಒಯ್ಯಲಾಗಿದೆ. ಈ ಪೈಕಿ ವಿಮಾನದಲ್ಲಿದ್ದ 241 ಮಂದಿ ಅಲ್ಲದೆ ವಿಮಾನ ಬಿದ್ದ ಕಟ್ಟಡದಲ್ಲಿದ್ದ ವೈದ್ಯ ವಿದ್ಯಾರ್ಥಿಗಳೂ ಸೇರಿದ್ದಾರೆ. ಬೆಂಕಿಯಲ್ಲಿ ಸುಟ್ಟು ಮುದ್ದೆಯಾಗಿರುವ ಮೃತ ದೇಹಗಳನ್ನು ಕುಟುಂಬಕ್ಕೆ ಹಸ್ತಾಂತರಿಸುವುದು ರಕ್ಷಣಾ ಸಿಬ್ಬಂದಿಗೆ ಅತ್ಯಂತ ಸವಾಲಿನ ಕೆಲಸವಾಗಿದೆ. ಸಿವಿಲ್ ಆಸ್ಪತ್ರೆಯಲ್ಲಿ ಈಗಾಗಲೇ 200 ಡಿಎನ್‌ಎ ಸ್ಯಾಂಪಲ್ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗಿದೆ. ಡಿಎನ್‌ಎ ತುಲನೆ ಪ್ರಕ್ರಿಯೆ ಮುಗಿದ ಬಳಿಕವೇ ಅಧಿಕಾರಿಗಳು ಎಲ್ಲಾ ಮೃತ ಪ್ರಯಾಣಿಕರನ್ನು ಗುರುತಿಸಲು ಸಾಧ್ಯವಾಗುತ್ತದೆ ಎನ್ನಲಾಗಿದೆ.

ವಿಮೆ ಇತ್ಯರ್ಥಕ್ಕೆ ಆದ್ಯತೆ: ಎಲ್ಐಸಿ

ಅಹಮದಾಬಾದ್: ವಿಮಾನ ದುರಂತ ಸಂತ್ರಸ್ತರಿಗೆ ನೆರವಾಗುವ ದೃಷ್ಟಿಯಿಂದ ಭಾರತೀಯ ಜೀವ ವಿಮಾ ನಿಗಮ ಕ್ಲೈಮ್ ಸೆಟಲ್‌ಮೆಂಟ್ ಪ್ರಕ್ರಿಯೆಯನ್ನು ಸಡಿಲಗೊಳಿಸಿದೆ. ವಿಮಾನ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳನ್ನು ಬೆಂಬಲಿಸಲು ನಿಗಮವು ಬದ್ಧವಾಗಿದೆ. ಕ್ಲೈಮ್ ಸೆಟಲ್‌ಮೆಂಟ್ ಪ್ರಕ್ರಿಯೆ ತ್ವರಿತಗೊಳಿಸುವುದಾಗಿ ಎಲ್‌ಐಸಿ ಹೇಳಿದೆ.

ಪಾಲಿಸಿಗಳ ಹಕ್ಕುದಾರರ ಕಷ್ಟಗಳನ್ನು ತಗ್ಗಿಸಲು ಎಲ್‌ಐಸಿ ಅನೇಕ ರಿಯಾಯಿತಿಗಳನ್ನು ಘೋಷಿಸಿದೆ. ಮರಣ ಪ್ರಮಾಣಪತ್ರಗಳಿಗೆ ಬದಲಾಗಿ, ವಿಮಾನ ಅಪಘಾತದಲ್ಲಿ ಮೃತಪಟ್ಟ ಬಗ್ಗೆ ಯಾವುದೇ ಸರಕಾರಿ ದಾಖಲೆಗಳಲ್ಲಿರುವ ಪುರಾವೆಗಳು ಅಥವಾ ಕೇಂದ್ರ/ರಾಜ್ಯ ಸರ್ಕಾರ/ವಿಮಾನಯಾನ ಅಧಿಕಾರಿಗಳು ಪಾವತಿಸಿದ ಯಾವುದೇ ಪರಿಹಾರವನ್ನು ಸಾವಿನ ಪುರಾವೆಯಾಗಿ ಸ್ವೀಕರಿಸಲಾಗುತ್ತದೆ ಎಂದು ವಿಮಾ ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ. ಇದಕ್ಕಾಗಿ ಎಲ್ಲೈಸಿ ಪ್ರತ್ಯೇಕ ಕಾಲ್‌ಸೆಂಟರ್ ತೆರೆದಿದೆ. ಬಜಾಜ್ ಅಲಯನ್ಸ್ ಲೈಫ್ ಇನ್ಸುರೆನ್ಸ್ ಕೂಡ ವಿಮಾ ಇತ್ಯರ್ಥಕ್ಕೆ ಪ್ರತ್ಯೇಕ ಡೆಸ್ಕ್ ತೆರೆದಿದೆ.

ವಿಮಾನದಲ್ಲಿ 1.25 ಲಕ್ಷ ಲೀಟರ್ ಇಂಧನ

ಅಹಮದಾಬಾದ್: ಪತನಗೊಂಡ ಏರ್ ಇಂಡಿಯಾ ವಿಮಾನದಲ್ಲಿ ಸುಮಾರು 1.25 ಲಕ್ಷ ಲೀಟರ್ ಇಂಧನವಿತ್ತು. ಮಧ್ಯಾಹ್ನ ಹೆಚ್ಚಿನ ತಾಪಮಾನದಿಂದಾಗಿ ಪ್ರಯಾಣಿಕರನ್ನು ರಕ್ಷಿಸುವ ಅವಕಾಶವಿರಲಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಸಂಜೆ ಏರ್ ಇಂಡಿಯಾ ವಿಮಾನ ಪತನವಾದ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ವಿಮಾನ ದುರಂತದಲ್ಲಿ ಬದುಕುಳಿದ ಏಕೈಕ ವ್ಯಕ್ತಿ ಮತ್ತು ಗಾಯಾಳುಗಳನ್ನು ಆಸ್ಪತ್ರೆಯಲ್ಲಿ ಭೇಟಿಯಾದ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಅಪಘಾತದ ನಡೆದ 10 ನಿಮಿಷಗಳಲ್ಲಿ ಕೇಂದ್ರ ಸರಕಾರಕ್ಕೆ ಮಾಹಿತಿ ಸಿಕ್ಕಿತು ಎಂದು ತಿಳಿಸಿದರು. 'ನಾನು ಗುಜರಾತ್ ಮುಖ್ಯಮಂತ್ರಿ ಮತ್ತು ನಾಗರಿಕ ವಿಮಾನಯಾನ ಸಚಿವರನ್ನು ಸಂಪರ್ಕಿಸಿದೆ. ಪ್ರಧಾನಿ ನರೇಂದ್ರ ಮೋದಿ ಕೂಡ ಸ್ವಲ್ಪ ಸಮಯದಲ್ಲೇ ಕರೆ ಮಾಡಿದರು. ಎಲ್ಲಾ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಇಲಾಖೆಗಳು ರಕ್ಷಣಾ ಕಾರ್ಯಾಚರಣೆಯನ್ನು ನಡೆಸುತ್ತಿವೆ ಎಂದು ಹೇಳಿದರು.

ಕರಿಷ್ಮಾ ಕಪೂರ್ ಮಾಜಿ ಪತಿ ನಿಧನ

ದೆಹಲಿ: ಬಾಲಿವುಡ್‌ನ ಖ್ಯಾತ ಚಿತ್ರ ನಟಿ ಕರಿಷ್ಮಾ ಕಪೂರ್ ಅವರ ಮಾಜಿ ಪತಿ ಸಂಜಯ್ ಕಪೂರ್ ಇಂಗ್ಲೆಂಡ್‌ನಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ. 53 ನೇ ವಯಸ್ಸಿನ ಸಂಜಯ್ ಅವರು

ಪೋಲೋ ಆಡುವಾಗ ಅವರಿಗೆ ಹೃದಯಾಘಾತ ವಾಗಿದೆ ಎಂದು ಮೂಲಗಳು ತಿಳಿಸಿವೆ. ಸಂಜಯ್ ಕಪೂರ್ ಜನಪ್ರಿಯ ಕೈಗಾರಿಕೋದ್ಯಮಿ ಮತ್ತು ಸೋನಾ ಕಾಮ್‌ಸ್ಟಾರ್‌ನ ಅಧ್ಯಕ್ಷರಾಗಿದ್ದರು. ಕರಿಷ್ಮಾ ಅವರಿಂದ ವಿಚ್ಛೇದನ ಪಡೆದ ನಂತರ, ಅವರು ಮಾಡೆಲ್ ಪ್ರಿಯಾ ಸಚ್‌ದೇವ್ ಅವರನ್ನು ವಿವಾಹವಾದರು. ಅವರಿಗೆ ಒಬ್ಬ ಮಗನಿದ್ದಾನೆ. ಸಂಜಯ್ ಕಪೂರ್ ಅವರ ನಿಧನದ ಸುದ್ದಿ ಕೇಳಿದ ನಂತರ, ಕರೀನಾ ಕಪೂರ್ ಮತ್ತು ಸೈಫ್ ಅಲಿ ಖಾನ್ ಕರಿಷ್ಮಾ ಕಪೂರ್ ಅವರ ನಿವಾಸಕ್ಕೆ ಧಾವಿಸಿ ದರು. ಮಲ್ಲೈಕಾ ಅರೋರಾ, ಅಮೃತಾ ಅರೋರಾ ಮತ್ತು ಅವರ ಕುಟುಂಬವು ಅವರ ಮನೆಗೆ ಆಗಮಿಸಿ ಸಾಂತ್ವನ ಹೇಳಿದರು.

ಫ್ರಾನ್ಸ್‌ಗೆ ಭಾರತ ಧನ್ಯವಾದ

ಪ್ಯಾರಿಸ್: ವಿದೇಶಾಂಗ ಸಚಿವ ಎಸ್. ಜೈಶಂಕರ್ ಶುಕ್ರವಾರ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರನ್ನು ಭೇಟಿ ಮಾಡಿ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಬೆಂಬಲ ನೀಡಿದ್ದಕ್ಕಾಗಿ ಧನ್ಯವಾದ ಅರ್ಪಿಸಿದರು. ಏಪ್ರಿಲ್ 22 ರ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ದ್ವಿಪಕ್ಷೀಯ ಸಂಬಂಧಗಳನ್ನು ಹೆಚ್ಚಿಸಲು ಮತ್ತು ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಯ ಭಾರತದ ನೀತಿಯನ್ನು ಪುನರುಚ್ಚರಿಸಲು ಜೈಶಂಕರ್ ಯುರೋಪ್ ಭೇಟಿಯಲ್ಲಿದ್ದಾರೆ.ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರನ್ನು ಭೇಟಿ ಮಾಡಲು ಗೌರವ. ಪ್ರಧಾನಿ ಅವರ ಶುಭಾಶಯಗಳನ್ನು ಸಲ್ಲಿಸಲಾಯಿತು. ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಬೆಂಬಲದ ಬಲವಾದ ಸಂದೇಶಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸಲಾಯಿತು ಎಂದು ಜೈಶಂಕರ್ ಸಭೆಯ ನಂತರ ಎಕ್ಸ್ ಪೋಸ್ಟ್ ಮಾಡಿದ್ದಾರೆ.

ಭವಿಷ್ಯದ ಹೊಂಗನಸು ಹೊತ್ತು ಲಂಡನ್‌ಗೆ ಹೊರಟವರು ಬಾರದ ಲೋಕಕ್ಕೆ ಪಯಣ

ಇವರಾರೂ ಮತ್ತೆ ಕರೆ ಮಾಡಲೇ ಇಲ್ಲ...

ಅಹಮದಾಬಾದ್: ಏರ್ ಇಂಡಿಯಾ ವಿಮಾನ ದುರಂತದಲ್ಲಿ ಮೃತಪಟ್ಟ ಪ್ರತಿಯೊಬ್ಬರದೂ ಒಂದೊಂದು ಕಥೆ. ಭಾರತ ಬಿಟ್ಟು ಲಂಡನ್‌ನಲ್ಲಿ ಹೊಸ ವೃತ್ತಿ ಅರಸಿ ಹೊರಟವರು. ಅಲ್ಲಿಂದ ಬಂದು ಇಲ್ಲಿ ವೃತ್ತಿ ಬದುಕು ಕಟ್ಟಲು ಹೊರಟವರು, ಬಂಧುಗಳ ಸಮ್ಮುಖ ನಿಶ್ಚಿತಾರ್ಥ ಮುಗಿಸಿಕೊಂಡು ಲಂಡನ್‌ಗೆ ತೆರಳುತ್ತಿದ್ದ ಜೋಡಿ, ನಿಧನಳಾದ ಪ್ರೀತಿಯ ಪತ್ನಿಯ ಅಸ್ತಿ ವಿಸರ್ಜನೆಗೆಂದು ಭಾರತಕ್ಕೆ ಬಂದು ಮರಳುತ್ತಿದ್ದ ಕುಟುಂಬ,ಆಂಗ್ಲರ ನಾಡಿಗೆ ಪ್ರವಾಸಕ್ಕೆಂದು ಹೊರಟ ಅಕ್ಕ-ತಂಗಿಯರು, ಸ್ನೇಹಿತರು, ಭಾರತಕ್ಕೆ ಭೇಟಿ ಮರಳುತ್ತಿದ್ದ ಬ್ರಿಟಿಷ್ ಪ್ರವಾಸಿಗರು..ಹೀಗೆ ನೂರಾರು ಕನಸುಗಳನ್ನು, ಧ್ಯೇಯಗಳನ್ನು ಹೊತ್ತವರು ಮರಳಿ ಬಾರದ ಲೋಕಕ್ಕೆ ತೆರಳಿದ್ದಾರೆ.

ಅಸ್ಥಿ ವಿಸರ್ಜನೆ ಬಂದ ತಂದೆ ಮಕ್ಕಳು

ಅಮ್ರೇಲಿ ಜಿಲ್ಲೆಯ ಅರ್ಜುನ್‌ಭಾಯ್ ಮನುಭಾಯ್ ಪಟೋಲಿಯಾ ಎಂಬುವವರು ತನ್ನ ಪತ್ನಿ ಮತ್ತು ಇಬ್ಬರು ಮಕ್ಕಳೊಂದಿಗೆ ಲಂಡನ್‌ನಲ್ಲಿ ಸಂತೋಷದ ಜೀವನ ನಡೆಸುತ್ತಿದ್ದರು. ಆದರೆ ವಿಧಿಯಾಟ ಬೇರೆಯೇ ಆಗಿತ್ತು. ಇತ್ತೀಚೆಗೆ ಅರ್ಜುನ್ ಅವರ ಪತ್ನಿ ಲಂಡನ್‌ನಲ್ಲಿ ನಿಧನರಾದರು. ಪತ್ನಿಯ ಕೊನೆಯ ಆಸೆಯಂತೆ ಅವರ ಚಿತಾಭಸ್ಮವನ್ನು ವಿಸರ್ಜಿಸಲು ತಮ್ಮ ಇಬ್ಬರು ಮಕ್ಕಳನ್ನು ಲಂಡನ್‌ನಲ್ಲಿ ಬಿಟ್ಟು ಭಾರತಕ್ಕೆ ಬಂದಿದ್ದರು.

ತವರೂರಿನಲ್ಲಿ ಸಂಬಂಧಿಕರ ಸಮ್ಮುಖದಲ್ಲಿ ಪತ್ನಿಯ ಅಸ್ಥಿ ವಿಸರ್ಜಿಸಿ ಲಂಡನ್‌ಗೆ ಮರಳಲು ಏರ್ ಇಂಡಿಯಾ ವಿಮಾನ ಏರಿದ್ದ ಅರ್ಜುನ್ ಈಗ ಮಕ್ಕಳನ್ನು ಬಿಟ್ಟು ಅಗಲಿದ ಪತ್ನಿಯ ಹಿಂದೆ ಹೊರಟಿದ್ದಾರೆ. ತಾಯಿಯ ಸಾವಿನಿಂದ ದುಃಖಿತರಾಗಿದ್ದ ಮಕ್ಕಳು ಈಗ ತಂದೆಯನ್ನು ಕಳೆದುಕೊಂಡು ಅನಾಥರಾಗಿದ್ದಾರೆ. ಮಕ್ಕಳ ಭವಿಷ್ಯದ ಬಗ್ಗೆ ಕುಟುಂಬ ಸದಸ್ಯರು ಕಳವಳ ವ್ಯಕ್ತಪಡಿಸುತ್ತಿದ್ದಾರೆ.



ಪೈಲಟ್ ಸುಮಿತ್ ಅಂತಿಮ ಕರೆ

ಲಂಡನ್‌ಗೆ ಹಾರುವ ಮೊದಲು ಪೈಲಟ್ ಸುಮಿತ್ ಸಬರ್‌ವಾಲ್ ತನ್ನ ವೃದ್ಧ ತಂದೆಗೆ ಫೋನ್ ಮಾಡಿ, 'ನಾನು ಲಂಡನ್ ತಲುಪಿದ ನಂತರ ನಾನು ನಿಮಗೆ ಕರೆ ಮಾಡುತ್ತೇನೆ' ಎಂದು ಹೇಳಿ ವಿಮಾನ ಹತ್ತಿದ್ದರು. ಆದರೆ ಕೆಲವೇ ನಿಮಿಷಗಳಲ್ಲಿ ಸುಟ್ಟು ಕರಕಲಾಗಿ ಹೋದರು.

ಮೂರು ದಿನಗಳ ಹಿಂದೆ, ಸುಮಿತ್ ಸಬರ್‌ವಾಲ್ ತಂದೆಯೊಂದಿಗೆ ಬಹಳ ಪ್ರೀತಿಯಿಂದ ಮಾತುಕತೆ ನಡೆಸಿದ್ದರು. ಒಂದೆರಡು ವರ್ಷಗಳ ಹಿಂದೆ ಸುಮಿತ್ ಅವರ ತಾಯಿ ನಿಧನರಾದ ನಂತರ ತಂದೆ ಒಂಟಿಯಾಗಿ ವಾಸಿಸುತ್ತಿದ್ದಾರೆ. ಮಗ ಸುಮಿತ್ ಮದುವೆಯಾಗಿರಲಿಲ್ಲ. ಒಂಟಿ ತಂದೆಯನ್ನು ನೋಡಿಕೊಳ್ಳುವ ಸಲುವಾಗಿ ಸುಮಿತ್ ಇನ್ನು ಕೆಲವೇ ತಿಂಗಳಲ್ಲಿ ಪೈಲಟ್ ಹುದ್ದೆ ತೊರೆಯಲು ನಿರ್ಧರಿಸಿದ್ದರು. ಆದರೆ ವಿಧಿಯಾಟ ಬೇರೆಯೇ ಇತ್ತು.

ಅಪಘಾತದಲ್ಲಿ ಮೃತಪಟ್ಟ ಸಹ ಪೈಲಟ್ ಕ್ಲೈವ್ ಕುಂದರ್ 1,000 ಗಂಟೆಗಳಿಗೂ ಹೆಚ್ಚು ಹಾರಾಟದ ಅನುಭವವನ್ನು ಹೊಂದಿದ್ದರು. ಇವರ ತಾಯಿ ರೇಖಾ ಮತ್ತು ತಂಗಿ ಆಸ್ಟ್ರೇಲಿಯಾದಲ್ಲಿ ವಾಸವಾಗಿದ್ದಾರೆ. ಕ್ಲೈವ್ ಇನ್ನಿಲ್ಲ ಎಂಬ ಸುದ್ದಿ ನಂಬಲು ಇವರು ಸಿದ್ಧರಿಲ್ಲ. ಆದರೆ ವಿಧಿಯಾಟವನ್ನು ಸಹಿಸಲೇಬೇಕಾಗಿದೆ.

ನವ ಜೋಡಿ ಸಾವು!

ಲಂಡನ್‌ನಲ್ಲಿ ವಾಸಿಸುವ ಮತ್ತು ಮೂಲತಃ ಬೋಟಾಡ್ ಜಿಲ್ಲೆಯ ಗಢಾಡಾ ತಾಲ್ಲೂಕಿನ ಅಡ್ತಾಲಾ ಗ್ರಾಮದ 27 ವರ್ಷದ ಹಾರ್ದಿಕ್ ದೇವರಾಜ್‌ಭಾಯ್ ಅವಯ್ಯಾ ಒಂದು ತಿಂಗಳ ಹಿಂದಷ್ಟೇ ವಧು ವಿಭೂತಿಬೆನ್ ಪಟೇಲ್ ಜತೆ ನಿಶ್ಚಿತಾರ್ಥ ಮಾಡಿಕೊಂಡಿದ್ದರು. ಇವರಿಬ್ಬರು ಲಂಡನ್‌ನಲ್ಲಿ ವಾಸವಾಗಿದ್ದವರು. ಮದುವೆಯ ಹೊಂಗನಸುಗಳೊಂದಿಗೆ ಲಂಡನ್‌ಗೆ ಮರಳುತ್ತಿದ್ದ ಈ ಜೋಡಿ ತಮ್ಮ ಕುಟುಂಬವನ್ನು ಮತ್ತೆ ಎಂದಿಗೂ ಭೇಟಿಯಾಗುವುದಿಲ್ಲ ಎನ್ನುವುದು ಯಾರಿಗೂ ತಿಳಿದಿರಲಿಲ್ಲ. ಸೂರತ್‌ನ ಕಮ್ರೆಜ್ ತಾಲ್ಲೂಕಿನ ಉಂಭೇಲ್ ಗ್ರಾಮದ ವಿಭೂತಿ ಪಟೇಲ್ (27), ಲೀಸೆಸ್ಟರ್ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿ. ಇಬ್ಬರೂ ಪ್ರೀತಿಯಲ್ಲಿ ಬಿದ್ದ ಬಳಿಕ ನಿಶ್ಚಿತಾರ್ಥ ಮಾಡಿಕೊಂಡು ಜೀವನವನ್ನು ಒಟ್ಟಿಗೆ ಕಳೆಯಲು ನಿರ್ಧರಿಸಿದ್ದರು.

ಹಾರ್ದಿಕ್ ವಿಮಾನ ಏರಿದ ಬಳಿಕವೂ ತಂದೆ ದೇವರಾಜ್‌ಭಾಯ್‌ಗೆ ಫೋನ್ ಮಾಡಿ ಲಂಡನ್ ತಲುಪಿದ ಬಳಿಕ ಕರೆ ಮಾಡುವುದಾಗಿ ತಿಳಿಸಿದ್ದರು. ವಿಮಾನ ದುರಂತಕ್ಕೆ ಈಡಾದ ಸುದ್ದಿ ತಿಳಿಯುತ್ತಲೇ ದೇವರಾಜ್‌ಭಾಯ್ ಮಗನಿಗೆ ಕರೆ ಮಾಡಲು ಪ್ರಯತ್ನಿಸಿದರಾದರೂ, ಆ ಕಡೆಯಿಂದ ಯಾವ ಪ್ರತಿಕ್ರಿಯೆಯೂ ಬಂದಿರಲಿಲ್ಲ.

ವಿದ್ಯಾರ್ಥಿಗಳ ಬಾಳು ಭಗ್ನ

ದುರಂತ ಸ್ಥಳಕ್ಕೆ ಪ್ರಧಾನಿ ಮೋದಿ ಭೇಟಿ: ಗಾಯಾಳುಗಳಿಗೆ ಸಾಂತ್ವನ

ಅಹಮದಾಬಾದ್: ಇಲ್ಲಿನ ಸರ್ದಾರ್ ವಲ್ಲಭಬಾಯ್ ವಿಮಾನ ನಿಲ್ದಾಣದಿಂದ ಲಂಡನ್‌ಗೆ ಹೊರಟ ಏರ್ ಇಂಡಿಯಾ ವಿಮಾನ ಪತನಗೊಂಡು ಸಂಭವಿಸಿದ ದುರ್ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ ಏರುತ್ತಲೇ ಇದ್ದು, ದೇಶದ ಇತಿಹಾಸದಲ್ಲೇ ಎರಡನೇ ಅತಿ ದೊಡ್ಡ ವಿಮಾನ ದುರಂತವಾಗಿ ದಾಖಲಾಗಿದೆ. ಈ ತನಕ ವಿಮಾನದಲ್ಲಿದ್ದ ಪ್ರಯಾಣಿಕರು ಮತ್ತು ಸಿಬ್ಬಂದಿ ಸೇರಿ 242 ಮಂದಿ ಪೈಕಿ ಒಬ್ಬ ಪ್ರಯಾಣಿಕ ಮಾತ್ರ ಬದುಕುಳಿದಿದ್ದಾರೆ. ವಿಮಾನ ಪತನಗೊಂಡ ಬಿಜೆ ಮೆಡಿಕಲ್ ಹಾಸ್ಟೆಲ್‌ನ ಕನಿಷ್ಠ 20 ವಿದ್ಯಾರ್ಥಿಗಳು ಮತ್ತು ಇಲ್ಲಿನ

ಜನ ವಸತಿ ಪ್ರದೇಶದಲ್ಲಿದ್ದ ಹಲವರು ದುರ್ಮರಣಕ್ಕೀಡಾಗಿದ್ದು, ಸಾವಿ ಸಂಖ್ಯೆಯನ್ನು ಇನ್ನೂ ನಿಖರವಾಗಿ ಅಂದಾಜಿಸಿಲ್ಲ.

ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ದುರಂತ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಉನ್ನತ ಮಟ್ಟದ ಸಭೆ ನಡೆಸಿ ಮಾಹಿತಿ ಪಡೆದರು. ಸಭೆಯಲ್ಲಿ ಅಹಮದಾಬಾದ್ ಏರ್‌ಪೋರ್ಟ್‌ನ ಅಧಿಕಾರಿಗಳೂ ಭಾಗವಹಿಸಿದ್ದರು. ಆಸ್ಪತ್ರೆಗೆ ಭೇಟಿ ನೀಡಿ ಬದುಕುಳಿದ ಏಕೈಕ ಪ್ರಯಾಣಿಕ ರಮೇಶ್ ವಿಶ್ವಕುಮಾರ್ ಮತ್ತು ಗಾಯಾಳುಗಳಾಗಿ ಚಿಕಿತ್ಸೆ ಪಡೆಯುತ್ತಿರುವ ವೈದ್ಯ ವಿದ್ಯಾರ್ಥಿಗಳಿಗೆ ಸಾಂತ್ವನ ಹೇಳಿದರು. ವಿಮಾನ ಅಪಘಾತದಲ್ಲಿ ಮೃತಪಟ್ಟ ಗುಜರಾತ್‌ನ ಮಾಜಿ ಮುಖ್ಯಮಂತ್ರಿ, ಬಿಜೆಪಿ ನಾಯಕ ವಿಜಯ್ ರೂಪಾನಿ ಅವರ ಕುಟುಂಬ ಸದಸ್ಯರನ್ನೂ ಭೇಟಿ ಮಾಡಿ ಸಾಂತ್ವನ ಹೇಳಿದರು.

ಕಟ್ಟಡಗಳು ಛಿದ್ರ ಛಿದ್ರ

ಜನ ವಸತಿ ಪ್ರದೇಶದ ಮೇಲೆ ವಿಮಾನ ಪತನವಾಗಿದ್ದು, ಬಿಜೆ ಹಾಸ್ಟೆಲ್ ಸೇರಿ ಹಲವು ಕಟ್ಟಡಗಳಿಗೆ ಹಾನಿಯಾಗಿದೆ. ವಿಮಾನ ಸುಮಾರು 800 ಅಡಿಯಿಂದ ಪತನವಾಗಿ, ಕಟ್ಟಡದ ಮೇಲೆ ಬಿದ್ದು, ಬೆಂಕಿ ಉಂಡೆಯಂತೆ ನೆಲಕ್ಕೆ ಅಪ್ಪಳಿಸಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ''ವಿಮಾನ ಪತನವಾದ ಅಹಮದಾಬಾದ್‌ಗೆ ಭೇಟಿ ನೀಡಿದೆ. ವಿನಾಶದ ದೃಶ್ಯವು ಹೃದಯ ವಿದ್ರಾವಕವಾಗಿದೆ. ನಿರಂತರವಾಗಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಮತ್ತು ರಕ್ಷಣಾ ತಂಡದ ಸದಸ್ಯರನ್ನು ಭೇಟಿ ಮಾಡಿದೆ'' ಎಂದು ಪ್ರಧಾನಿ ಮೋದಿ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಜತೆಗೆ ದುರಂತ ಸ್ಥಳದ ಭೀಕರ ಫೋಟೊಗಳನ್ನು ಹಂಚಿಕೊಂಡಿದ್ದಾರೆ.

ವಿಜಯ್ ಸಾವಿನಲ್ಲೂ ಜತೆಯಾದ ಲಕ್ಕಿ ನಂಬರ್ !

ಅಹಮದಾಬಾದ್: ಏರ್ ಇಂಡಿಯಾ ವಿಮಾನ ದುರಂತದಲ್ಲಿ ಜೀವಕಳೆದುಕೊಂಡ ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ ಅವರಿಗೆ 1206

ಯಾವಾಗಲೂ ಲಕ್ಕಿ ನಂಬರ್ ಆಗಿತ್ತು. ಅವರು ಖರೀದಿಸಿದ್ದ ಮೊದಲ ಬೈಕ್, ಕಾರು ಎಲ್ಲದಕ್ಕೂ ಅವರು ಇದೇ ನಂಬರ್ ಪ್ಲೇಟ್ ಪಡೆದುಕೊಂಡಿದ್ದರು. ಆದರೆ, ಈ ನಂಬರ್ ಅವರ ಸಾವಿನಲ್ಲೂ ಜತೆಯಾಗಿದೆ. ಅದು ಅದೃಷ್ಟಕ್ಕಲ್ಲ, ದುರದೃಷ್ಟಕ್ಕೆ!

ವಿಜಯ್ ರೂಪಾನಿ ಕಾರ್ ನಂಬರ್ - ಎಒ 03 ಏಓ 1206, ಬೈಕ್ ನಂಬರ್ - ಎಒ 03 ಈಉ 1206. ದುರಂತ ನಡೆದ ದಿನ 12 ತಾರೀಕು, ಜೂನ್ ತಿಂಗಳು. ಇದನ್ನು ಸಂಖ್ಯೆ ರೂಪದಲ್ಲಿ ಒಟ್ಟಿಗೆ ಬರೆದರೆ 1206 ಆಗುತ್ತದೆ. ಲಕ್ಕಿ ನಂಬರ್ ಅವರ ಸಾವಿನ ದಿನಾಂಕವಾಗಿ ಮಾರ್ಪಟ್ಟಿದ್ದು ವಿಪರ್ಯಾಸ. ಸದ್ಯ ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್‌ಗಳು ವೈರಲ್ ಆಗಿವೆ. ವಿಜಯ್ ರೂಪಾನಿ ಅವರು ಪತ್ನಿ ಅಂಜಲಿಯನ್ನು ಕರೆತರಲೆಂದು ಲಂಡನ್‌ಗೆ ಹೊರಟಿದ್ದರು. ಪುತ್ರ ಖುಷಬ್ ಮತ್ತು ಪುತ್ರಿ ರಾಧಿಕಾ ಜತೆ ಪತ್ನಿ ಅಂಜಲಿ 6 ತಿಂಗಳಿನಿಂದ ವಿದೇಶದಲ್ಲಿದ್ದರು.

ಸುಪ್ರೀಂ ಮುಂದೆ ಕನ್ನಡಿಗರ ಮೇಲೆ ಆರೋಪಗಳ ಸುರಿಮಳೆ

ಉಗ್ರಶಕ್ತಿಗಳಿಗೆ ರಾಜ್ಯ ಸರಕಾರ ಶರಣು

ದೆಹಲಿ: ಹಿರಿಯ ಚಲನಚಿತ್ರ ನಿರ್ದೇಶಕ, ನಿರ್ಮಾಪಕ ಮಣಿರತ್ನಂ ಮತ್ತು ಸೂಪರ್‌ಸ್ಟಾರ್ ಕಮಲ್ ಹಾಸನ್ ಅವರ 'ಥಗ್ ಲೈಫ್' ಚಿತ್ರ ಪ್ರದರ್ಶನದ ಮೇಲೆ ವಿಧಿಸಿರುವ ನಿರ್ಬಂಧವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಶುಕ್ರವಾರ ಕರ್ನಾಟಕ ಸರಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

'ನ್ಯಾಯಾಂಗೇತರ ನಿಷೇಧ'ವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಮನಮೋಹನ್ ಅವರಿದ್ದ ಪೀಠವು, ಕರ್ನಾಟಕದ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ (ಗೃಹ) ಮತ್ತು ಪೊಲೀಸ್ ಮಹಾನಿರ್ದೇಶಕರ ಪ್ರತಿಕ್ರಿಯೆಗಳನ್ನು ಕೋರಿದೆ. ಮುಂದಿನ ವಿಚಾರಣೆಯನ್ನು ಜೂನ್ 17ಕ್ಕೆ ಮುಂದೂಡಿದೆ. ಚಿತ್ರದ ಆಡಿಯೋ ಬಿಡುಗಡೆ ಸಮಾರಂಭದಲ್ಲಿ, ಕಮಲ್ ಹಾಸನ್ 'ಕನ್ನಡ ತಮಿಳಿನಿಂದ ಹುಟ್ಟಿದೆ' ಎಂದು ಹೇಳಿಕೊಂಡಿದ್ದು, ಕರ್ನಾಟಕದಲ್ಲಿ ತೀವ್ರ ವಿರೋಧಕ್ಕೆ ಕಾರಣವಾಗಿದೆ.



ಬೆಂಗಳೂರಿನ ಎಂ ಮಹೇಶ್ ರೆಡ್ಡಿ ಸಲ್ಲಿಸಿದ ರಿಟ್ ಅರ್ಜಿಯಲ್ಲಿ, ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ ಪ್ರಮಾಣೀಕರಣದ ಹೊರತಾಗಿಯೂ, ಕರ್ನಾಟಕ ಸರ್ಕಾರ ಮೌಖಿಕ ಸೂಚನೆಗಳು ಮತ್ತು ಪೊಲೀಸ್ ಹಸ್ತಕ್ಷೇಪದ ಮೂಲಕ ಥಗ್ ಲೈಫ್ ಚಿತ್ರ ಬಿಡುಗಡೆಯನ್ನು ತಡೆದಿದೆ ಎಂದು ದೂರಲಾಗಿದೆ.

ಅರ್ಜಿದಾರರ ಪರವಾಗಿ ವಾದ ಮಂಡಿಸಿದ ವಕೀಲ ಎ ವೇಲನ್, ಇಂತಹ ಕ್ರಮಗಳು ಸಂವಿಧಾನದ 19(1)(ಚ) ವಿಧಿಯ ಅಡಿಯಲ್ಲಿ ಖಾತರಿಪಡಿಸಲಾದ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಅಸಂವಿಧಾನಿಕ ನಿರ್ಬಂಧಕ್ಕೆ ಸಮ. ಭಾಷಾ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುತ್ತಿದ್ದ ಮತ್ತು ಚಿತ್ರಮಂದಿರಗಳನ್ನು ಸುಟ್ಟುಹಾಕುವಂತೆ ಕರೆ ನೀಡುತ್ತಿದ್ದ ಉಗ್ರಗಾಮಿ ಅಂಶಗಳಿಗೆ ಕರ್ನಾಟಕ ಸರ್ಕಾರ ಸಂಪೂರ್ಣವಾಗಿ 'ಶರಣಾಗಿದೆ' ಎಂದು ವೇಲನ್ ವಾದಿಸಿದರು.

ಅರ್ಜಿಯಲ್ಲಿ ಚಿತ್ರ ಪ್ರದರ್ಶನದ ಮೇಲೆ ಹೇರಿರುವ ನಿಷೇಧವು ಕೇವಲ ಮುನ್ನೆಚ್ಚರಿಕೆಯಾಗಿರದೆ, ಚಿತ್ರ ಮಂದಿರಗಳನ್ನು ಸುಡುವುದು, ಭಾಷಾ ಅಲ್ಪಸಂಖ್ಯಾತರನ್ನು ಗುರಿಯಾಗಿಟ್ಟುಕೊಂಡು ಕೋಮು ಹಿಂಸೆಗೆ ಪ್ರೋತ್ಸಾಹಿಸುವುದು, ಹಿಂದಿನ ಹಿಂಸಾತ್ಮಕ ಘಟನೆಗಳನ್ನು, ನಿರ್ದಿಷ್ಟವಾಗಿ ತಮಿಳು ವಿರೋಧಿ ಗಲಭೆಗಳನ್ನು ಪುನರಾವರ್ತಿಸಲು ಅಪಾಯಕಾರಿ ಕರೆ ನೀಡುವುದು ಮತ್ತು ಭಯವನ್ನು ಹರಡುವ ಉದ್ದೇಶದಿಂದ ನಡೆಸಲಾದ ಸಂಘಟಿತ ಮತ್ತು ಉದ್ದೇಶಪೂರ್ವಕ ಅಭಿಯಾನಕ್ಕೆ ಪ್ರತಿಕ್ರಿಯೆಯಾಗಿತ್ತು ಎಂದು ದೂರಲಾಗಿದೆ.

ಬಾಂಬ್ ಬೆದರಿಕೆ, ಹಾರಾಟ ನಿರ್ಬಂಧದಿಂದ ಯಾನ ವ್ಯತ್ಯಯ

ಏರ್ ಇಂಡಿಯಾಗೆ ಸರಣಿ ಸಂಕಷ್ಟ

ದೆಹಲಿ: ಏರ್ ಇಂಡಿಯಾ ವಿಮಾನ ಪತನಕ್ಕೀಡಾದ ಪ್ರಕರಣ ಹಸಿರಾಗಿರುವಂತೆಯೇ ವಿಮಾನ ಯಾನ ಸಂಸ್ಥೆಯ ಸಂಕಷ್ಟಗಳು ಮುಂದುವರಿದಿವೆ. ಶುಕ್ರವಾರ ಬಾಂಬ್ ಬೆದರಿಕೆ ಹಿನ್ನೆಲೆಯಲ್ಲಿ ಥಾಯ್ಲೆಂಡ್‌ನಿಂದ ದೆಹಲಿಗೆ ಬರಬೇಕಿದ್ದ ವಿಮಾನವನ್ನು ಬಾಂಬ್ ಬೆದರಿಕೆ ಹಿನ್ನಲೆಯಲ್ಲಿ ಥಾಯ್‌ನ ಫುಕೆಟ್ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಲಾಯಿತು.

ಇದೇ ವೇಳೆ, ಮುಂಬೈ ನಿಂದ ಲಂಡನ್ ನ ಹೀತ್ರೂ ವಿಮಾನ ನಿಲ್ದಾಣಕ್ಕೆ ಪ್ರಯಾಣ ಬೆಳೆಸಿದ್ದ ಏರ್ ಇಂಡಿಯಾದ ಎಐ129 ವಿಮಾನ, ಇರಾನ್ ವಾಯುಮಾರ್ಗ ನಿರ್ಬಂಧ ದಿಂದಾಗಿ ಲಂಡನ್ ಗೆ ತೆರಳುವ ಬದಲು ಮೂರು ಗಂಟೆಗಳ ಕಾಲ ಆಕಾಶದಲ್ಲಿ ಸುತ್ತಾಡಿ ಮುಂಬೈಗೆ ಮರಳಿದೆ. ಬಾಂಬ್ ಬೆದರಿಕೆ ಭೀತಿ ಹಿನ್ನಲೆಯಲ್ಲಿ ವಿಮಾನ ಎಐ 379 ಲ್ಯಾಂಡ್ ಆಗಿದ್ದು, ಹಾರಾಟ ಮಾಡುತ್ತಿದ್ದ ವೇಳೆ ಈ ಬೆದರಿಕೆ ಬಂದಿದೆ. ಈ ಕಾರಣದಿಂದ ತಕ್ಷಣ ಭೂಸ್ಪರ್ಶಕ್ಕೆ ಮನವಿ ಮಾಡಲಾಗಿದೆ ಎಂದು ಥಾಯ್ ವಿಮಾನ ನಿಲ್ದಾಣದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದರೆ ಥಾಯ್ ದ್ವೀಪದಲ್ಲಿ ವಿಮಾನ ಇಳಿದ ಬಳಿಕ ಪರಿಶೀಲಿಸಿದಾಗ ಇದು ಹುಸಿ ಕರೆ ಎಂದು ತಿಳಿದು ಬಂದಿದೆ.

ಮುಂಬೈಗೆ ವಾಪಸ್

ಮುಂಬೈನಿಂದ ಶುಕ್ರವಾರ ಲಂಡನ್‌ನ ಹೀತ್ರೂ ವಿಮಾನ ನಿಲ್ದಾಣಕ್ಕೆ ಪ್ರಯಾಣ ಬೆಳೆಸಿದ್ದ ಏರ್ ಇಂಡಿಯಾದ ಎಐ129 ವಿಮಾನ, ಇರಾನ್ ವಾಯುಮಾರ್ಗ ನಿರ್ಬಂಧದಿಂದಾಗಿ ಲಂಡನ್ ಗೆ ತೆರಳುವ ಬದಲು ಮೂರು ಗಂಟೆಗಳ ಕಾಲ ಆಕಾಶದಲ್ಲಿ ಸುತ್ತಾಡಿ ಮುಂಬೈಗೆ ಮರಳಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ಯುದ್ಧದ ಸಂದರ್ಭ ಎದುರಾಗಿರುವ ಹಿನ್ನೆಲೆಯಲ್ಲಿ ಇರಾನ್ ಈ ನಿರ್ಬಂಧ ಹೇರಿದೆ. ಮುಂಬೈ ವಿಮಾನ ನಿಲ್ದಾಣದಿಂದ ಸೂಕ್ತ ಮಾರ್ಗದರ್ಶನ ಸಿಗದ ಕಾರಣ ವಿಮಾನವು ವಾಪಸ್ಸಾಗಿದೆ.

ದೀರ್ಘಾವಧಿ ಸಂಘರ್ಷ ಸಂಭವ | ಭಾರತೀಯರಿಗೆ ಎಚ್ಚರಿಕೆ ವಹಿಸಲು ರಾಯಭಾರ ಕಚೇರಿ ಸೂಚನೆ

ಇರಾನ್ ಮೇಲೆ ಇಸ್ರೇಲ್ ದಾಳಿ: ಕಚ್ಚಾತೈಲ ಬೆಲೆ ಶೇ.11.38 ಹೆಚ್ಚಳ

ದೆಹಲಿ: ಇರಾನ್ ದೇಶದ ಮೇಲೆ ಇಸ್ರೇಲ್ ದಾಳಿಯ ಬೆನ್ನಿಗೇ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯ ಸಾಧ್ಯತೆ ಕಂಡು ಬಂದಿದೆ.

ಇಸ್ರೇಲ್ ದಾಳಿಯ ಬಳಿಕ ತೈಲಧಾರಣೆ ಶೇ.13ರಷ್ಟು ಏರಿಕೆ ಕಂಡಿದೆ. ಒಂದು ಬ್ಯಾರಲ್ ಕಚ್ಚಾ ತೈಲದ ಬೆಲೆ 76 ಡಾಲರ್ ಆಸುಪಾಸಿನಷ್ಟಿದೆ. ದಾಳಿ ಪರಿಣಾಮವಾಗಿ ಮಧ್ಯಪ್ರಾಚ್ಯ ದೇಶಗಳಿಂದ ತೈಲಸರಬರಾಜು ಕಡಿಮೆಗೊಳ್ಳುವ ಸಾಧ್ಯತೆ ಮನಗಂಡು ತೈಲ ಬೆಲೆ ಹೆಚ್ಚಳ ಆಗಿದೆ.

ಇದರಿಂದ ಭಾರತವೂ ಸೇರಿದಂತೆ ಜಾಗತಿಕವಾಗಿ ಪೆಟ್ರೋಲ್ ಬೆಲೆ ಏರಿಕೆ ಆಗುವ ಸಾಧ್ಯತೆ ಇದೆ. ಅಮೆರಿಕಕದಲ್ಲಿ ಕಚ್ಚಾ ತೈಲದ ಬೆಲೆ ಒಂದು ಬ್ಯಾರಲ್‌ಗೆ ಶೇ. 11.38ರಷ್ಟು ಏರಿ 75.82 ಡಾಲರ್ ಮುಟ್ಟಿದೆ. ಇಸ್ರೇಲ್ ದಾಳಿಗೆ ಪ್ರತಿಯಾಗಿ ಇರಾನ್ ತನ್ನ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಮಾರ್ಗವನ್ನು ಬಂದ್ ಮಾಡಬಹುದು. ವಿಶ್ವದ ಶೇ. 25ರಷ್ಟು ತೈಲ ಸರಬರಾಜು ಇಲ್ಲಿಂದ ಸಾಗಿ ಹೋಗುತ್ತದೆ. ಪರ್ಯಾಯ ಮಾರ್ಗದಲ್ಲಿ ತೈಲ ಸಾಗಿಸಲು ಹೆಚ್ಚು ವೆಚ್ಚವಾಗಬಹುದು. ಇದೇ ರೀತಿ ಬಿಕ್ಕಟ್ಟು ಮುಂದುವರಿದರೆ ತೈಲ ಬೆಲೆ ಬ್ಯಾರಲ್‌ಗೆ 120 ರೂ ಮುಟ್ಟಿದರೂ ಅಚ್ಚರಿ ಇಲ್ಲ ಎನ್ನಲಾಗಿದೆ. ಅಂದರೆ ಬಿಕ್ಕಟ್ಟು ಮುಂದುವರಿದರೆ ಈಗಿರುವ ಬೆಲೆಗಿಂತ ಶೇ.85ರಷ್ಟು ಏರಿಕೆ ಆಗುವ ಸಂಭವ ಇದೆ ಎನ್ನಲಾಗಿದೆ.

ಎಚ್ಚರಿಕೆ ವಹಿಸಲು ರಾಯಭಾರ ಕಚೇರಿ ಸೂಚನೆ: ಇರಾನ್‌ನಲ್ಲಿರುವ ಭಾರತೀಯರು ಜಾಗರೂಕರಾಗಿರಿ, ಅನಗತ್ಯ ಚಲನವಲನಗಳನ್ನು ತಪ್ಪಿಸಿ ಮತ್ತು ಸುರಕ್ಷತಾ ಶಿಷ್ಟಾಚಾರಗಳನ್ನು ಪಾಲಿಸುವಂತೆ ಇಲ್ಲಿನ ಭಾರತೀಯ ರಾಯಭಾರ ಕಚೇರಿ ಸೂಚಿಸಿದೆ. ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ಗುರಿಯಾಗಿಸಿಕೊಂಡು ಶುಕ್ರವಾರ ಮುಂಜಾನೆ ಇಸ್ರೇಲ್ ದಾಳಿ ನಡೆಸಿದೆ. ಟೆಹರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಎಕ್ಸ್ ಪೋಸ್ಟ್ ಮೂಲಕ, ಇರಾನ್‌ನಲ್ಲಿನ ಪ್ರಸ್ತುತ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾರತೀಯ ಪ್ರಜೆಗಳು ಮತ್ತು ಭಾರತೀಯ ಮೂಲದ ವ್ಯಕ್ತಿಗಳು ಜಾಗರೂಕರಾಗಿರುವಂತೆ ಸೂಚಿಸಿದೆ.

ಏನಿದು ಆಪರೇಷನ್ ರೈಸಿಂಗ್ ಲಯನ್?

ಜೆರುಸಲೆಂ: ಇರಾನ್‌ನ ಪರಮಾಣು ಬಾಂಬ್ ಮಹತ್ವಾಕಾಂಕ್ಷೆಗಳನ್ನು ವಿಫಲಗೊಳಿಸುವ ಗುರಿಯನ್ನು ಹೊಂದಿರುವ ಆಪರೇಷನ್ ರೈಸಿಂಗ್ ಲಯನ್ ಅನ್ನು ಪ್ರಾರಂಭಿಸಲಾಗಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಘೋಷಿಸಿದ್ದಾರೆ. ನಟಾಂಜ್‌ನಲ್ಲಿರುವ ಅದರ ಮುಖ್ಯ ಪರಮಾಣು ಸ್ಥಾವರ ಸೇರಿದಂತೆ ಇಸ್ಲಾಮಿಕ್ ಆಡಳಿತದ ಪರಮಾಣು ಕಾರ್ಯಕ್ರಮದ ಹೃದಯಭಾಗದ ಮೇಲೆ ತಮ್ಮ ದೇಶ ದಾಳಿ ಮಾಡಿದೆ ಎಂದು ನೆತನ್ಯಾಹು ಹೇಳಿದ್ದಾರೆ.

ಇರಾನಿನ ಬೆದರಿಕೆಯನ್ನು ಹಿಮ್ಮೆಟ್ಟಿಸಲು ಇಸ್ರೇಲ್ 'ಆಪರೇಷನ್ ರೈಸಿಂಗ್ ಲಯನ್' ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಿದೆ. ಈ ಬೆದರಿಕೆಯನ್ನು ತೆಗೆದುಹಾಕಲು ಈ ಕಾರ್ಯಾಚರಣೆಯು ಎಷ್ಟು ದಿನಗಳವರೆಗೆ ಬೇಕಾದರೂ ಮುಂದುವರಿಯುತ್ತದೆ ಎಂದು ನೆತನ್ಯಾಹು ತಿಳಿಸಿದ್ದು, ಎರಡೂ ದೇಶಗಳ ನಡುವಣ ಸಂಘರ್ಷ ದೀರ್ಘ ಕಾಲ ಮುಂದುವರಿಯುವ ಸಾಧ್ಯತೆಗಳಿವೆ. ಇತ್ತೀಚಿನ ವರ್ಷಗಳಲ್ಲಿ, ಇರಾನ್ ಒಂಬತ್ತು ಪರಮಾಣು ಬಾಂಬ್‌ಗಳಿಗೆ ಸಾಕಗುವಷ್ಟು ಪುಷ್ಟೀಕರಿಸಿದ ಯುರೇನಿಯಂ ಅನ್ನು ಉತ್ಪಾದಿಸಿದೆ. ಇದನ್ನು ನಿಲ್ಲಿಸದಿದ್ದಲ್ಲಿ ಬಹಳ ಕಡಿಮೆ ಸಮಯದಲ್ಲಿ ಇರಾನ್ ಪರಮಾಣು ಶಸ್ತ್ರಾಸ್ತ್ರವನ್ನು ಉತ್ಪಾದಿಸಬಹುದು. ಇದು ಇಸ್ರೇಲ್‌ನ ಉಳಿವಿಗೆ ಸ್ಪಷ್ಟ ಮತ್ತು ನೇರ ಅಪಾಯವಾಗಿದೆ ಎಂದು ಬೆಂಜಮಿನ್ ಹೇಳಿದ್ದಾರೆ. ಇರಾನ್‌ನ ಪ್ರಮುಖ ಪರಮಾಣು ವಿಜ್ಞಾನಿಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ದಾಳಿ ಮಾಡಿದ್ದು, ಹಲವು ವಿಜ್ಞಾನಿಗಳು ಮತ್ತು ಸೇನಾ ಮುಖ್ಯಸ್ಥ ವೈಮಾನಿಕ ದಾಳಿಯಲ್ಲಿ ಮೃತಪಟ್ಟಿದ್ದಾರೆ.

ಸಮಾಚಾರ ಸಣ್ಣದಲ್ಲ

ಕಾಡಾನೆ ದಾಳಿಯಿಂದ ಪಾರಾದ ಮಹಿಳೆ

ಮಡಿಕೇರಿ: ಕಾಡಾನೆ ಕಾಡಿಗಟ್ಟುವ ಕಾರ್ಯಾಚರಣೆ ಸಂದರ್ಭ ಕಾಫಿ ತೋಟದಲ್ಲಿ ಬೀಡು ಬಿಟ್ಟಿದ್ದ ಕಾಡಾನೆಯೊಂದು ಮಹಿಳೆಯ ಮೇಲೆ ದಾಳಿಗೆ ಯತ್ನಿಸಿದ ಘಟನೆ ಸಮೀಪದ ಸಿದ್ದಾಪುರ ನಲ್ವತ್ತೆಕರೆ ಗ್ರಾಮದಲ್ಲಿ ಇಂದು ನಡೆದಿದೆ.ತಪ್ಪಿಸಿಕೊಳ್ಳಲು ಯತ್ನಿಸಿದ ಸಂದರ್ಭ ಬಿದ್ದು ಗಾಯಗೊಂಡ ಮಹಿಳೆ ಕವಿತಾ (40) ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ನೆಲ್ಯಹುದಿಕೇರಿ, ಅತ್ತಿಮಂಗಲ, ನಲ್ವತ್ತೆಕರೆ ಮತ್ತಿತರ ಗ್ರಾಮಗಳಲ್ಲಿ ಬೀಡು ಬಿಟ್ಟಿದ್ದ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಚರಣೆಯಲ್ಲಿ ಬೆಳಗ್ಗಿನಿಂದ ಹುಡುಕಾಟ ನಡೆಸಿದರೂ ಪತ್ತೆಯಾಗಿರಲಿಲ್ಲ. ತೋಟದಲ್ಲಿ ಮಧ್ಯಾಹ್ನ ಒಂಟಿ ಸಲಗವೊಂದು ಕಾಣಿಸಿಕೊಂಡಿತ್ತು. ತೋಟದಲ್ಲಿ ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದ ಕವಿತಾರ ಮೇಲೆ ದಾಳಿಗೆ ಯತ್ನಿಸಿದೆ. ನಂತರ ಕಾಡಾನೆಯನ್ನ ಕಾಡಿಗೆ ಓಡಿಸುವಲ್ಲಿ ಸಿಬ್ಬಂದಿ ಯಶಸ್ವಿಯಾದರು.

ಆರೋಗ್ಯ ಶಿಬಿರ ಇಂದು

ಹುಣಸೂರು: ಹುಣಸೂರಿನ ಅಪೋಲೋ ಆಸ್ಪತ್ರೆಯ ಮೂಳೆ ತಜ್ಞರಾದ ಡಾ.ಸಿಂಧು.ಬಿ ಇವರಿಂದ ಶನಿವಾರ ಬೆಳಿಗ್ಗೆ 10.30 ಗಂಟೆಗೆ ತಾಲೂಕು ಪತ್ರಕರ್ತರ ಸಂಘದ ಸದಸ್ಯರಿಗೆ ಉಚಿತವಾಗಿ ಮೂಳೆ ದಟ್ಟಣೆ ಹಾಗೂ ಬಲ ಬಗ್ಗೆ ತಪಾಸಣೆ, ಆರೋಗ್ಯ ಶಿಬಿರವನ್ನು ಸಂಘದ ಕಚೇರಿಯಲ್ಲಿ ಆಯೋಜಿಸಿದ್ದು, ಸಂಘದ ಎಲ್ಲಾ ಪತ್ರಕರ್ತ ಮಿತ್ರರು ಈ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕಾಗಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಎಚ್.ಆರ್.ಕೃಷ್ಣ ಕುಮಾರ್ ತಿಳಿಸಿದ್ದಾರೆ.

ತಾಯಿ ಮಡಿಲಲ್ಲಿ ಕಲಿತ ಶಿಕ್ಷಣ ಶ್ರೇಷ್ಠ

ಕೆ ಆರ್ ನಗರ: ತಾಯಿ ಮಡಿಲಲ್ಲಿ ಕಲಿತ ಶಿಕ್ಷಣ ಮಕ್ಕಳ ಬದುಕಿನಲ್ಲಿ ದೀರ್ಘಕಾಲ ಉಳಿಯುತ್ತದೆ ಎಂದು ಭೇರ್ಯ ಗ್ರಾಮದ ಪಿಯು ಕಾಲೇಜಿನ ಉಪ ಪ್ರಾಂಶುಪಾಲ ಡಾ.ಪ್ರಸಾದ್ ತಿಳಿಸಿದರು. ಭಾರತಿ ವಿದ್ಯಾ ಮಂದಿರ ಪ್ರೌಢಶಾಲೆಯಲ್ಲಿ ವಿವಿಧ ಸಂಘಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು. ಶಿಕ್ಷಕರು ಮಕ್ಕಳಿಗೆ ಓದಿನ ಜತೆ ನಾಯಕತ್ವ ನಿರ್ವಹಣೆ ಕೂಡ ಕಲಿಸಬೇಕು. ಮಕ್ಕಳು ಕೂಡ ಉತ್ತಮ ಅಂಕ ಗಳಿಸಲು ಶಿಕ್ಷಕರ ಮತ್ತು ಪೋಷಕರ ಮಾತು ಕೇಳಬೇಕು ಎಂದರು. ಡಾ.ಜಗನ್ನಾಥ್, ಸಂಸ್ಥೆಯ ಉಪಾಧ್ಯಕ್ಷ ಡಾ. ಜನಾರ್ಧನ್ ಭಟ್, ಕಾರ್ಯದರ್ಶಿ ಡಾ. ಪಿ. ಮೋಹನ್ ದಾಸ್ ಭಟ್, ಮುಖ್ಯ ಶಿಕ್ಷಕ ಅಶೋಕ್, ಕಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಸಿದ್ಧವೀರಪ್ಪ, ಹರೀಶ್. ಶಿಕ್ಷಕಿಯರಾದ ಪುಷ್ಪಲತಾ, ಗೀತಾ, ದೀಪ, ಸುಧೀರ್ ಆರಾಧ್ಯ, ಬಸವರಾಜು,ಜ್ಯೋತಿ ಕುಮಾರ್,ದೈಹಿಕ ಶಿಕ್ಷಕ ಪ್ರಮೋದ್, ರೋಜ್ ನಾಯಕ್ ಇದ್ದರು.

ಕಾವೇರಮ್ಮನ ಪ್ರತಿಮೆಗೆ ವಿಶೇಷ ಪೂಜೆ

ಪಿರಿಯಾಪಟ್ಟಣ: ಕಾರ ಹುಣ್ಣಿಮೆಯ ಪ್ರಯುಕ್ತ ತಾಲೂಕಿನ ಕೊಪ್ಪ ಬಿ.ಎಂ.ರಸ್ತೆ ಕಾವೇರಿ ನದಿ ದಡದಲ್ಲಿರುವ ಕಾವೇರಿಮ್ಮ ನವರ ಪ್ರತಿಮೆಗೆ ಬಾರವಿ ಕಾವೇರಿ ಕನ್ನಡ ಸಂಘದ ವತಿಯಿಂದ ನಿರ್ಮಿಸಲಿರುವ ಕಾವೇರಮ್ಮನ ಪ್ರತಿಮೆಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಕಾರ್ಯಕ್ರಮದ ಸೇವಾರ್ಥದಾರ ರಾದ ಕುಶಲನಗರದ ರೇಖಾ ನಟೇಶ್ ಕುಟುಂಬ ವರ್ಗದವರು ಹಾಗೂ ಸಂಘದ ಅಧ್ಯಕ್ಷ ಬಬೀಂದ್ರ ಪ್ರಸಾದ್ ನೇತೃತ್ವದಲ್ಲಿ ಅರ್ಚಕ ಪುರುಷೋತ್ತಮ ಭಟ್ ಪ್ರತಿಮೆಗೆ ಹಾಲು, ಎಳನೀರು, ಜೇನುತುಪ್ಪ ದಿಂದ ನೈವೇದ್ಯ ನೆರವೇರಿಸಿದರು. ಸುನಂದಾ ಕೌಶಿಕ್ ರವರು ಕಾವೇರಮ್ಮನಿಗೆ ಕೊಡುಗೆಯಾಗಿ ನೀಡಿದ್ದ ಹೊಸ ಸೀರೆ ಕುಪ್ಪಸವಿಟ್ಟು ಒಡವೆ, ವಿವಿಧ ಹೂವುಗಳಿಂದ ಅಲಂಕರಿಸಿ ಎಡೆ, ನೈವದ್ಯ ಅಭಿಷೇಕ ಮಾಡಿ ಮಹಾಮಂಗಳಾರತಿ ನೆರವೇರಿಸಿದರು. ನಂತರ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯಿತು. ಸಂಘದ ಪದಾಧಿಕಾರಿಗಳಾದ ರವೀಂದ್ರ ಪ್ರಸಾದ್, ವಿಜೇಂದ್ರ ಪ್ರಸಾದ್, ಚಂದ್ರು, ಭಕ್ತಾದಿಗಳಾದ,ಮಂಜು. ರುದ್ರೇಶ್, ತಿಲಕ್, ಸುನಂದ, ಕೌಶಿಕ್, ಚಂದ್ರಣ್ಣ, ರಾಜೇಶ್ವರಿ, ಮಣಿ ಇದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಡಾ.ಮಂಜುನಾಥ್} ಸಂಸದರು

ಬಿಡದಿ ಟೌನ್ ಶಿಪ್ ಯೋಜನೆಗೆ ಭೂ ಸ್ವಾಧೀನ ಮಾಡಿಕೊಳ್ಳಲು ರೈತರಿಗೆ ನೋಟಿಸ್ ಕೊಡುತ್ತಿರುವುದು ಗಮನಕ್ಕೆ ಬಂದಿದೆ. ನಾನು ಮತ್ತು ಮಾಜಿ ಪ್ರಧಾನಿ ದೇವೇಗೌಡರು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಟೌನ್ ಶಿಪ್ ಯೋಜನೆ ಕೈಬಿಡುವಂತೆ ಮನವಿ ಮಾಡಿದ್ದೇವೆ. ಇದರಿಂದ ರೈತರಿಗೆ ಅನುಕೂಲವಾಗಲಿದೆ.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ | ಜಿಲ್ಲಾಧಿಕಾರಿ ಡಾ.ಕುಮಾರ ಚಾಲನೆ

ಬಾಲ ಕಾರ್ಮಿಕತೆ ಸಾಮಾಜಿಕ ಕಳಂಕ

ಮಂಡ್ಯ: ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ, ಹೆಣ್ಣು ಭ್ರೂಣ ಹತ್ಯೆಗಳಂತಹ ಪ್ರಕರಣಗಳನ್ನು ಕೇವಲ ಸರಕಾರ ಪತ್ತೆ ಹಚ್ಚಿದರೆ ಸಾಲದು, ಸಾರ್ವಜನಿಕರು ಜಿಲ್ಲಾಡಳಿತದೊಂದಿಗೆ ಸಹಕರಿಸಿದಾಗ ಮಾತ್ರ ತಡೆಗಟ್ಟಲು ಸಾಧ್ಯ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಜಿಲ್ಲಾಡಳಿತ,ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ (ರಿ), ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಾಲಕಾರ್ಮಿಕ ಪದ್ಧತಿ ಸಾಮಾಜಿಕ ಕಳಂಕವಾಗಿದೆ ಇದು ನಾವೆಲ್ಲರೂ ಗಂಭೀರವಾಗಿ ಪರಿಗಣಿಸಬೇಕಾದ ಪ್ರಮುಖ ವಿಷಯ. ಬಾಲಕಾರ್ಮಿಕ ಪದ್ಧತಿಯನ್ನು ಹೋಗಲಾಡಿಸುವ ಹೊಣೆಗಾರಿಕೆ ನಮ್ಮೆಲ್ಲರದ್ದು ಎಂದರು.

ಸಾರ್ವಜನಿಕರು ಪ್ರಜ್ಞಾವಂತರಾಗಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದರೆ ಇಂತಹ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಬಹುದಾಗಿದೆ. ಶಿಕ್ಷಣ ಹಕ್ಕು ಕಾಯ್ದೆಯಲ್ಲಿ 6-14 ವರ್ಷದ ಮಕ್ಕಳಿಗೆ ಉಚಿತ ಕಡ್ಡಾಯ ಎಂದು ಕಾನೂನು ಇದ್ದರೂ ಸಹ ಆಧುನಿಕ ಯುಗದಲ್ಲೂ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ವಿಷಾದಿಸಿದರು.

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕುಮಾರ ಉದ್ಘಾಟಿಸಿದರು.

ಮಕ್ಕಳಿಗೆ ಸರಿಯಾದ ಶಿಕ್ಷಣ ಹಾಗೂ ನೌತಿಕ ಮೌಲ್ಯಗಳನ್ನು ತಿಳಿಸದೆ ಇದ್ದರೆ ಮಕ್ಕಳ ಸಮಾಜಕ್ಕೆ ಮಾರಕರಾಗುತ್ತರೆ. ದುಡಿಯಲು ಹೋದ ಬಾಲಕಾರ್ಮಿಕರು ಕೆಲಸದ ಸ್ಥಳಗಳಲ್ಲಿ ಅನೈತಿಕ ಚಟುವಟಿಕೆಗಳ ದಾರಿ ಹಿಡಿಯುವ ಸಾಧ್ಯತೆ ಹೆಚ್ಚು ಇರುತ್ತದೆ. ಬಾಲ ಕಾರ್ಮಿಕರನ್ನು ರಕ್ಷಿಸಲು ಅನೇಕ ಕಾಯ್ದೆಗಳಿವೆ. ಕಾಯ್ದೆಗಳಿಗಿಂತ ಮುಖ್ಯವಾದದ್ದು ಮಾನವೀಯತೆ ಮತ್ತು ಹೃದಯವಂತಿಕೆ, ಸಮಾಜದಲ್ಲಿ ನಡೆಯುತ್ತಿರುವ ತಪ್ಪುಗಳನ್ನು ಸಾಮಾಜಿಕ ಹೊಣೆಗಾರಿಕೆಯಿಂದ ಪ್ರಶ್ನೆ ಮಾಡಬೇಕು ಎಂದು ತಿಳಿ ಹೇಳಿದರು.

ಸ್ನೇಹಿತರು ದೀರ್ಘ ರಜೆಯಲ್ಲಿದ್ದರೆ ಶಿಕ್ಷಕರ ಗಮನಕ್ಕೆ ತನ್ನಿ

ಶಾಲೆಯಲ್ಲಿ ನಿಮ್ಮ ಸ್ನೇಹಿತರು ದೀರ್ಘಕಾಲ ರಜೆಯಲ್ಲಿದ್ದರೆ ನಿಮ್ಮ ಶಾಲೆಯ ಮುಖ್ಯ ಶಿಕ್ಷಕರ ಗಮನಕ್ಕೆ ತನ್ನಿ. ದೀರ್ಘಾವಧಿ ಕಾಲ ರಜೆ ಹೋದರೆ ಮಕ್ಕಳ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವುದು. ಶಾಲೆಯ ಮುಖ್ಯಸ್ಥರ ಜವಾಬ್ದಾರಿ. ಒಂದು ಊರಿನಲ್ಲಿ ಬಾಲ್ಯ ವಿವಾಹ ನಡೆಯುತ್ತಿದ್ದರೆ ಇಂತಹ ಪ್ರಕರಣ ತಡೆಯುವುದು. ಆ ಊರಿನ ಗ್ರಾಮಸ್ಥರು ಹಾಗೂ ಅಧಿಕಾರಿಗಳ ಜವಾಬ್ದಾರಿ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನಂದ್ ಎಂ. ಮಾತನಾಡಿ, ಕಾರ್ಮಿಕ ಸಂಸ್ಥೆ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು ಆಚರಿಸಿಕೊಂಡು ಬರುತ್ತಿದೆ. ಇದರ ಪ್ರಮುಖ ಉದ್ದೇಶ 14 ವರ್ಷಗಳ ಒಳಗಿನ ಮಕ್ಕಳನ್ನು ದುಡಿಯಲು ಕಳಿಸಬಾರದು. 14 ವರ್ಷದೊಳಗಿನ ಮಕ್ಕಳು ಕೆಲಸ ಮಾಡುವುದು ಕಾನೂನು ಬಾಹಿರ ಎಂದು ಹೇಳಿದರು.

ಜಿಲ್ಲಾ ಮಕ್ಕಳ ಸಮಿತಿಯ ಅಧ್ಯಕ್ಷೆ ಸುಮಿತ್ರ ಅವರು ಮಾತನಾಡಿ, ಸಮಾಜದಲ್ಲಿ ಬಾಲ್ಯ ವಿವಾಹ ಹಾಗೂ ಬಾಲಕಾರ್ಮಿಕ ಪದ್ಧತಿಗಳನ್ನು ರದ್ದುಗೊಳಿಸಬೇಕೆಂದರೆ ಸಾರ್ವಜನಿಕರು ಪ್ರಶ್ನಿಸುವುದನ್ನು ಕಲಿಯಬೇಕು. ಮಕ್ಕಳು ತಮ್ಮ ರಕ್ಷಣೆಗೆ ಇರುವ ಸಹಾಯವಾಣಿ 1098 ಅಥವಾ 112ಗೆ ಕರೆ ಮಾಡಬಹುದು ಎಂದರು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ.ಟಿ ರಾಜೇಂದ್ರ, ನಗರಸಭೆ ಪೌರಾಯುಕ್ತೆ ಪಂಪಶ್ರೀ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಶ್ಮಿ, ಯೋಜನಾ ನಿರ್ದೇಶಕ ಎಚ್.ಟಿ ಪ್ರಭಾಕರ್ ಉಪಸ್ಥಿತರಿದ್ದರು.

'ದುಡಿಮೆ ಬೇಡ ಶಿಕ್ಷಣ ಬೇಕು ಮುಗ್ಧತೆ ರಕ್ಷಿಸಿ ಬಾಲಕಾರ್ಮಿಕತೆ ಶಿಕ್ಷಿಸಿ' ಎಂಬ ನಾಮಫಲಕಗಳ ಹಿಡಿದು ಜಾಗೃತಿ ಜಾಥಾ ನಡೆಸಲಾಯಿತು. ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಸುಬ್ರಹ್ಮಣ್ಯ ಜಾಥಾಗೆ ಚಾಲನೆ ನೀಡಿ ಮಾತನಾಡಿದರು.

ಕಾನೂನು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಆನಂದ್, ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಮೂರ್ತಿ,ಜಿಲ್ಲಾ ಕಾರ್ಮಿಕ ಇಲಾಖೆಯ ಯೋಜನಾ ನಿರ್ದೇಶಕ ಪ್ರಭಾಕರ್, ನಿರೀಕ್ಷಕರಾದ ಸ್ವಾಮಿ, ಗಂಗಾಧರ್, ನಾಗರತ್ನ, ಮಕ್ಕಳ ರಕ್ಷಣಾ ಘಟಕದ ಸದಸ್ಯ ಮಿಕ್ಕೆರೆ ವೆಂಕಟೇಶ್, ಡಿಡಿಪಿಐ ಶಿವರಾಮೇಗೌಡ ಇದ್ದರು.

ಬಾಲಕಾರ್ಮಿಕತೆಗೆ ಜಾಗೃತಿ ಮೂಡಿಸಿ:ಡಿಸಿ

ಮಡಿಕೇರಿ: ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರ ಪಾತ್ರ ಅತೀ ಮುಖ್ಯ. ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಕ್ರೀಡೆ, ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ತಿಳಿಸಿದ್ದಾರೆ.

ನಗರದ ಜಿಪಂ ಸಭಾಂಗಣದಲ್ಲಿ ನಡೆದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡುವ ಬಗ್ಗೆ 1098ಗೆ ಮಾಹಿತಿ ನೀಡುವಂತಾಗಬೇಕು. ಬಾಲ ಕಾರ್ಮಿಕ ಪದ್ಧತಿ ಬಗ್ಗೆ ಗ್ರಾಮ ಹಾಗೂ ಹಾಡಿಗಳಲ್ಲಿ ಪ್ರತಿ ನಿತ್ಯ ಜಾಗೃತಿ ಕಾರ್ಯಕ್ರಮಗಳು ಆಯೋಜಿಸಬೇಕು ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಶುಭ ಅವರು ಪ್ರತಿಜ್ಞಾ ವಿಧಿ ಬೋಧಿಸಿ ಮಾತನಾಡಿ, ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ಕಲಿಸುವಂತಾಗಬೇಕು. ಇದರಿಂದ ಅಪರಾಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳದಂತೆ ನೋಡಿಕೊಳ್ಳಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಕ್ಕಳು ಉತ್ತಮ ಹಾದಿಯಲ್ಲಿ ಸಾಗುವಂತಾಗಲು ನೈತಿಕ ಹಾಗೂ ಮೌಲ್ಯಯುತ ಶಿಕ್ಷಣ ಹಿಂದಿಗಿಂತ ಇಂದು ಹೆಚ್ಚು ಅತ್ಯಗತ್ಯ. ಪೋಷಕರು ಗಮನಹರಿಸಬೇಕು. ಆಧುನಿಕ ಜಗತ್ತಿನಲ್ಲಿ ಮಕ್ಕಳಿಗೆ ನೈತಿಕ ಮತ್ತು ಮೌಲ್ಯಯುತ ಶಿಕ್ಷಣದ ಜೊತೆಗೆ ಸಮಾಜದ ಆಗುಹೋಗುಗಳ ಬಗ್ಗೆ ತಿಳಿಯಬೇಕು. ಇದರಿಂದ ಉತ್ತಮ ಪ್ರಜೆಯಾಗಿ ಬದುಕಲು ಸಾಧ್ಯ ಎಂದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ನಗರದ ಜಿಪಂ ಸಭಾಂಗಣದಲ್ಲಿ ನಡೆದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮ ಉದ್ಘಾಟಿಸಿದರು.

ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ ಮಾತನಾಡಿ, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡುವಲ್ಲಿ ಎಲ್ಲರ್ರೂ ಜೋಡಿಸಬೇಕು ಎಂದರು.

ಎಎಸ್‌ಪಿ ದಿನೇಶ್ ಕುಮಾರ್ ಅವರು ಮಾತನಾಡಿ, ಸೌಲಭ್ಯ ವಂಚಿತ ಮಕ್ಕಳಿಗೆ ಸವಲತ್ತುಗಳು ತಲುಪಿದಾಗ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡಬಹುದು ಎಂದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಟಿ.ಕಾವೇರಿ, ಹಿರಿಯ ಕಾರ್ಮಿಕ ನಿರೀಕ್ಷಕರಾದ ಎಂ.ಎಂ.ಯತ್ನಟ್ಟಿ ಮಾತನಾಡಿದರು. ಹಿಂದೆ ಬಾಲ ಕಾರ್ಮಿಕರಾಗಿ ನಂತರ ಶಾಲೆಗೆ ಸೇರಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಶೇ.75 ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.ಜೊತೆಗೆ ರೂ.2 ಸಾವಿರ ಪ್ರೋತ್ಸಾಹಧನ ನೀಡಲಾಯಿತು. ಉಪ ವಿಭಾಗಾಧಿಕಾರಿ ವಿನಾಯಕ ನರ್ವಡೆ, ಡಿಡಿಪಿಐ ಸಿ.ರಂಗಧಾಮಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ತಿಪ್ಪಣ್ಣ ಪಿ.ಸಿರಸಗಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಬಿ.ಈರಸ್ವಾಮಿ, ಹಿರಿಯ ಕಾರ್ಮಿಕ ನಿರೀಕ್ಷಕರಾದ ಎಸ್.ಶಶಿಧರ್, ನಿಖಿಲ್ ಚಂದ್ರ, ಇತರರು ಇದ್ದರು.

ಪೌರ ಕಾರ್ಮಿಕರಿಗೆ ಸ್ವೆಟರ್ ವಿತರಣೆ

ಮಡಿಕೇರಿ: ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದಲ್ಲಿ ನೀಡಿರುವ ಹಕ್ಕು ಮತ್ತು ಜವಾಬ್ದಾರಿಗಳನ್ನು ನಾವು ಸಮರ್ಥವಾಗಿ ನಿಭಾಯಿಸಿದರೆ ರಾಷ್ಟ್ರದ ಬೆಳವಣಿಗೆ ಸಾಧ್ಯವೆಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯರಾದ ಸಂಕೇತ್ ಪೂವಯ್ಯ ಅಭಿಪ್ರಾಯಪಟ್ಟಿದ್ದಾರೆ.

ಡಾ.ಅಂಬೇಡ್ಕರ್ ಅವರ 134ನೇ ಜನ್ಮದಿನಾಚರಣೆಯ ಪ್ರಯುಕ್ತ ದಲಿತ ಸಂಘರ್ಷ ಸಮಿತಿಯ ಕೊಡಗು ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ನಗರಸಭಾ ಪೌರಕಾರ್ಮಿಕರಿಗೆ ಸ್ವೆಟರ್ ವಿತರಿಸುವ ಕಾರ್ಯಕ್ರಮ ನಡೆಯಿತು.

ಸಂವಿಧಾನದಲ್ಲಿ ನೀಡಲಾಗಿರುವ ಹಕ್ಕು, ಸಮಾನತೆಯ ಅವಕಾಶಗಳಿಂದ ಜನರ ಬದುಕಿನಲ್ಲಿ ಸುಧಾರಣೆ ಕಾಣಲು ಸಾಧ್ಯವಾಗಿದೆ. ಮಕ್ಕಳಲ್ಲಿ ಸಂವಿಧಾನದ ಅರಿವನ್ನು ಮೂಡಿಸುವ ಪ್ರಯತ್ನ ನಡೆಯಬೇಕು ಎಂದರು.

ಜಿಲ್ಲಾ ದಲಿತ ಸಂಘರ್ಷ ಸಮಿತಿ ಕಳೆದ ಹಲವು ವರ್ಷಗಳಿಂದ ಸಂಪನ್ಮೂಲದ ಕೊರತೆ ನಡುವೆಯೂ ನೊಂದವರ, ಶೋಷಿತರ ಕಣ್ಣೀರು ಒರೆಸುವ ನಿಸ್ವಾರ್ಥ ಸೇವೆ ಮಾಡುತ್ತಾ ಬಂದಿರುವುದು ಶ್ಲಾಘನೀಯವೆಂದರು.

ಸಮಾಜ ಸೇವಕ ಡಾ.ಬಿ.ಸಿ.ನವೀನ್ ಕುಮಾರ್ ಮಾತನಾಡಿ, ಡಾ.ಅಂಬೇಡ್ಕರ್ ಅವರು ಸೇರಿದಂತೆ ಯಾವುದೇ ಆದರ್ಶವಾದಿಗಳ ಜಯಂತಿಗಳು ಇಂದು ಕೇವಲ ಮೆರವಣಿಗೆ ಆಡಂಬರಕ್ಕಷ್ಟೇ ಸೀಮಿತವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಡಾ.ಅಂಬೇಡ್ಕರ್ ತಮ್ಮ ಬಾಲ್ಯದಲ್ಲಿ ಸಾಕಷ್ಟು ಅವಮಾನಗಳನ್ನು ಎದುರಿಸಿದ್ದಾರೆ. ಅವಮಾನವನ್ನೇ ಸಾಧನೆಗೆ ಪ್ರೇರಣೆಯಾಗಿಸಿಕೊಂಡು 28 ಪದವಿಗಳನ್ನು ಪಡೆದುಕೊಂಡರು. ಅದೇ ಸಮಾಜದಿಂದ ಬಂದವರೂ ಕೂಡ ಅವಮಾನ ಎದುರಿಸಿಕೊಂಡೇ ಬಂದಿರುತ್ತೀರ. ಅವುಗಳನ್ನೆಲ್ಲ ಕೆಚ್ಚೆದೆಯಿಂದ ಎದುರಿಸಿ, ಶಿಕ್ಷಣಕ್ಕೆ ಮಹತ್ವವನ್ನಿತ್ತು ಮುನ್ನಡೆಯುವಂತಾಗಬೇಕು ಎಂದರು.

ದಸಂಸ ಜಿಲ್ಲಾ ಸಂಚಾಲಕ ದಿವಾಕರ್ ಮಾತನಾಡಿ, ನೆಲೆ ಇಲ್ಲದವರಿಗೆ ನಿವೇಶನ, ಮನೆಗಳನ್ನು ಒದಗಿಸುವ ಕಾರ್ಯಗಳನ್ನು ಸಂಘಟನೆ ನಡೆಸಿದೆ. ಆದರೆ, ಸೌಲಭ್ಯ ಪಡೆದವರು ಸಂಘಟನೆಯತ್ತ ಮತ್ತೆ ತಿರುಗಿ ನೋಡುತ್ತಿಲ್ಲ ಎಂದರು.

ಸರ್ವೋದಯ ಸಮಿತಿಯ ಅಧ್ಯಕ್ಷ ಅಂಬೆಕಲ್ ಕುಶಾಲಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಮಡಿಕೇರಿ ನಗರಸಭಾ ಪೌರಕಾರ್ಮಿಕರಿಗೆ ಸ್ವೆಟರ್‌ಗಳನ್ನು ಅತಿಥಿ ಗಣ್ಯರು ವಿತರಿಸಿದರು.ಇತ್ತೀಚೆಗೆ ನಿಧನರಾದ ದಸಂಸ ಸಂಚಾಲಕ ಸಣ್ಣಯ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಣ್ಣಯ್ಯ ಅವರ ಮಕ್ಕಳಾದ ಗೋಪಾಲ್, ವನಿತ, ಸಂಚಾಲಕ ಎನ್. ವೀರಭದ್ರಯ್ಯ, ಪ್ರಮುಖರಾದ ಗಣೇಶ್ ಉಪಸ್ಥಿತರಿದ್ದರು.

ಚಾಮರಾಜೇಶ್ವರ ರಥೋತ್ಸವ ಜು.10ರಂದು

ಚಾಮರಾಜನಗರ: ನಾಳೆಯಿಂದ ನಡೆಯುವ ಚಾಮರಾಜೇಶ್ವರಸ್ವಾಮಿ ಗಿರಿಜಾ ಕಲ್ಯಾಣ ಮಹೋತ್ಸವ ಹಾಗೂ ಜು. 10 ರಂದು ಆಷಾಢ ಮಾಸದಲ್ಲಿ ನಡೆಯುವ ಚಾಮರಾಜೇಶ್ವರಸ್ವಾಮಿ ರಥೋತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡಲು ಕೋಮುವಾರು ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ಚಾಮರಾಜೇಶ್ವರಸ್ವಾಮಿ ದೇವಾಲಯದಲ್ಲಿ ರಥೋತ್ಸವ ಸಂಬಂಧ ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಯಿತು. ತಹಸೀಲ್ದಾರ್ ಗಿರಿಜಾ ಮಾತನಾಡಿ,ಸಭೆಯಲ್ಲಿ ನಿಮ್ಮ ಅಹವಾಲು ಹೇಳಿದ್ದೀರಿ. ಒಂದು ನೆಲ ಮಳಿಗೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡಿದ್ದೀರಿ. ಅದನ್ನು ವ್ಯವಸ್ಥೆ ಮಾಡೋಣ. ಪೂಜಾ ರಸೀದಿ ಕೊಡಿಸುವಂತೆ ಕೇಳಿದ್ದೀರಿ ಅದನ್ನು ದೇವಸ್ಥಾನದ ವತಿಯಿಂದ ಮಾಡಿಸೋಣ, ಚಿನ್ನ ವಿಚಾರ ಪ್ರಸ್ತಾಪ ಮಾಡಿದ್ದೀರಿ. ಕಚೇರಿಯಲ್ಲಿ ಕಡತ ತೆಗಿಸಿ ನೋಡುವೆ. ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಚರ್ಚಿಸಿ ದೇವರಿಗೆ ಒಡವೆ ಹಾಕಲು ಪ್ರಸ್ತಾಪ ಮಾಡುತ್ತೇವೆ ಎಂದರು.

ಸಭೆ ಅಧ್ಯಕ್ಷತೆ ವಹಿಸಿದ್ದ ನಾಡದೇಶಶೆಟ್ಟರಾದ ವೈ.ವಿ.ಲೋಕನಾಥ್ ಮಾತನಾಡಿ, ಅದ್ದೂರಿಯಾಗಿ ರಥೋತ್ಸವ ಆಚರಣೆ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ ಎಂದರು. ಸಭೆಯಲ್ಲಿ ಕಾರ್ಯನಿರ್ವಹಣಾಧಿಕಾರಿ ರಾಜಶೇಖರಮೂರ್ತಿ, ಪ್ರಧಾನ ಅರ್ಚಕ, ಆಗಮಿಕರಾದ ದರ್ಶನ್, ಆಗಮಿಕ ರಾಮಕೃಷ್ಣ ಭಾರದ್ವಜ್, ನಗರಸಭಾ ಪೌರಾಯುಕ್ತ ಎಸ್.ವಿ.ರಾಮದಾಸ್, ಮುಖಂಡ ಶ್ರೀನಿವಾಸಗೌಡ, ಕೋಮುವಾರು ಯಜಮಾನರಾದ ಸಿ.ಕೆ.ಮಹದೇವಶೆಟ್ಟಿ, ಸುರೇಶ್ ನಾಯಕ, ಮಾಧು ವೆಂಕಟರಮಣಸ್ವಾಮಿ , ಪಾಪು, ರಾಮಸಮುದ್ರ ನಾಗರಾಜು, ಮಂಜು ಕುದರ್, ಗಾಯಕ ಸಿಎಂ.ನರಸಿಂಹಮೂರ್ತಿ, ನಗರಸಭಾ ಮಾಜಿ ಸದಸ್ಯ ಗಣೇಶದೀಕ್ಷಿತ್, ರವಿಚಂದ್ರಪ್ರಸಾದ್ ಇದ್ದರು.

ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಗಿರಿಜಾ ಮಾತನಾಡಿದರು.

ಬೆಳೆ ವಿಮೆಯಿಂದ ಪರಿಹಾರ

ನಾಗಮಂಗಲ: ರೈತರು ತಾವು ಬೆಳೆಯುವ ಬೆಳೆಯನ್ನು ಸ್ವಲ್ಪ ತಾಳ್ಮೆ ವಹಿಸಿ ಮೌಲ್ಯವರ್ಧನೆ ಮಾಡಿದರೆ ಹೆಚ್ಚು ಲಾಭ ಗಳಿಸಲು ಸಾಧ್ಯ ಎಂದು ಕೃಷಿ ಸಚಿವ ಎನ್ .ಚೆಲುವರಾಯಸ್ವಾಮಿ ತಿಳಿಸಿದರು. ದೇವಲಾಪುರದಲ್ಲಿ ರೈತ ಉತ್ಪಾದಕ ಕಂಪನಿ ಕಟ್ಟಡದ ಭೂಮಿ ಪೂಜೆ, ಜೋಡಿಅಲ್ಪಹಳ್ಳಿ ಗ್ರಾಮದಲ್ಲಿ ಸಮುದಾಯ ಭವನ ಕಟ್ಟಡ ಕಾಮಗಾರಿಗೆ ಭೂಮಿಪೂಜೆ, ದೇವಲಾಪುರ ಹ್ಯಾಂಡ್ ಪೋಸ್ಟ್‌ನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆ, ಕರಡಹಳ್ಳಿ ಗ್ರಾಮದಲ್ಲಿ ನೂತನ ಪಶು ಚಿಕಿತ್ಸಾಲಯ ಮತ್ತು ಅರೆಅಲ್ಪಹಳ್ಳಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದರು. ರೈತರು ಉತ್ತಮ ಬೆಳೆ ಬೆಳೆದ ಸಂದರ್ಭ ಹೆಚ್ಚಿನ ಮಳೆಯಿಂದ ಹಾನಿಯಾಗುವುದನ್ನು ತಡೆಯಲು ಸಾಧ್ಯವಿಲ್ಲ. ಆದರೆ ನೀವು ಬೆಳೆದ ಬೆಳೆಗೆ ವಿಮೆ ಮಾಡಿಸುವ ಮೂಲಕ ಪರಿಹಾರ ಪಡೆಯಲು ಸಾಧ್ಯ. ಬೆಳೆ ವಿಮೆಯನ್ನು ಶೇ.98ರಷ್ಟು ರೈತರ ಪರವಾಗಿ ಪಾವತಿಸುತ್ತದೆ. ಉಳಿದ ಶೇ.2ರಷ್ಟನ್ನು ಮಾತ್ರ ರೈತರು ಪಾವತಿಸಬೇಕಾಗುತ್ತದೆ ಎಂದರು. ಈ ವೇಳೆ ಜಂಟಿ ಕೃಷಿ ನಿರ್ದೇಶಕ ಅಶೋಕ್, ಉಪವಿಭಾಗಾಧಿಕಾರಿ ಶ್ರೀನಿವಾಸ್, ತಹಶಿಲ್ದಾರ್ ಆದರ್ಶ್, ಮನ್ಮುಲ್ ನಿರ್ದೇಶಕ ಅಪ್ಪಾಜಿಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್, ಉದಯ್ ಕಿರಣ್, ಮಾವಿನಕೆರೆ ಸುರೇಶ್, ಕಾರಸವಾಡಿ ಮಹದೇವ್, ಶಿವಣ್ಣ, ಹೊನ್ನೇನಹಳ್ಳಿ ಕೃಷ್ಣೇಗೌಡ ಇದ್ದರು.

ವಕೀಲರ ಒಕ್ಕೂಟದಿಂದ ಸಿಎಂಗೆ ಮನವಿ

ಚಾಮರಾಜನಗರ: ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಖಿಲ ಭಾರತ ವಕೀಲರ ಒಕ್ಕೂಟ ಜಿಲ್ಲಾ ಘಟಕದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು. ಪೊಲೀಸರ ಏಕಪಕ್ಷೀಯ ವರ್ತನೆಗಳಿಂದ ವಕೀಲರಿಗೆ ರಕ್ಷಣೆ ನೀಡಬೇಕು ಮತ್ತು ವಕೀಲರ ಸಂರಕ್ಷಣೆ ಕಾಯ್ದೆ-2024ಕ್ಕೆ ಸೂಕ್ತ ತಿದ್ದುಪಡಿಯಾಗಬೇಕು. ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ಮಾರ್ಗಸೂಚಿಯನ್ನು ಪಾಲಿಸಬೇಕು. ವಕೀಲರಿಗೆ ಕಡ್ಡಾಯವಾಗಿ ಜೀವ ವಿಮಾ ಸೌಲಭ್ಯವನ್ನು ಒದಗಿಸಬೇಕು, ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣಗಳಲ್ಲಿ ವಕೀಲರ ಅಕಾಡೆಮಿಗಳನ್ನು ಸ್ಥಾಪಿಸಬೇಕು. ವಕೀಲರಿಗೆ ಚೇಂಬರ್‌ಗಳನ್ನು ಸ್ಥಾಪಿಸಬೇಕು. ಈ ಎಲ್ಲ ಬೇಡಿಕೆ ಒಂದು ತಿಂಗಳೊಳಗಾಗಿ ಈಡೇರಿಸದಿದ್ದಲ್ಲಿ ಹೋರಾಟ ತೀವ್ರಗೊಳಿಸಿ ನಮ್ಮ ನಡೆಯನ್ನು ವಿಧಾನಸೌಧ, ವಕೀಲರ ಪರಿಷತ್‌ಗಳ ಕಡೆ ನಡೆಸಬೇಕಾಗುತ್ತದೆ ಎಂದು ಮನವಿಯಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ರಾಮಸಮುದ್ರ ಪುಟ್ಟಸ್ವಾಮಿ ಎಚ್ಚರಿಸಿದ್ದಾರೆ.

ವಕೀಲರಾದ ಪ್ರಸನ್ನಕುಮಾರ್ ಬಿ, ಮಾತನಾಡಿದರು. ವಕೀಲರಾದ ದೇವರಾಜು, ಶಶಿಕಲಾ, ಕಾವ್ಯ, ಎಂ.ಆರ್.ಸವಿತಾ, ಅಭಿಷೇಕ್, ಶಶಿಕುಮಾರ್, ಹಿರಿಯ ವಕೀಲರಾದ ಸಿ.ಎನ್. ರವಿಕುಮಾರ್, ಗುಲ್ಜಾರ್, ಮಲ್ಲು, ಆರ್. ಅಭಿಷೇಕ್ ಇದ್ದರು.

ರಾಜ್ಯ ಮಟ್ಟದ ಚಕ್ಕಡಿ ಓಟದ ಸ್ಪರ್ಧೆ ಇಂದು

ಮದ್ದೂರು: ತಾಲೂಕಿನ ಬೆಸಗರಹಳ್ಳಿ ಗೌಡ್ರು ಬಾಯ್ಸ್ ವತಿಯಿಂದ ರಾಜ್ಯ ಮಟ್ಟದ ದ್ವಿತೀಯ ವರ್ಷದ ಚಕ್ಕಡಿ ಗಾಡಿ ಓಟದ ಸ್ಪರ್ಧೆಯನ್ನು ಆಯೋಜಿಸಿರುವುದಾಗಿ ಕಾರ್ಯಕ್ರಮದ ಆಯೋಜಕ ಪ್ರೇಮ್ ತಿಳಿಸಿದ್ದಾರೆ.

ಗ್ರಾಮದಲ್ಲಿ ನಡೆದ ಪತ್ರಿಕಾಗೋಷ್ಠಿ ವೇಳೆ ಚಕ್ಕಡಿ ಗಾಡಿ ಓಟದ ಸ್ಪರ್ಧೆಯ ಕರಪತ್ರವನ್ನು ಬಿಡುಗಡೆಗೊಳಿಸಿ ಮಾತನಾಡಿ, ಜೂನ್ 14ರ ಶನಿವಾರ ಬೆಸಗರಹಳ್ಳಿ ಗ್ರಾಮದಲ್ಲಿ ಕರುಗಳ ಚಕ್ಕಡಿ ಗಾಡಿ ಓಟದ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಭಾಗವಹಿಸುವವರು ಶನಿವಾರ ಪ್ರವೇಶ ಶುಲ್ಕವನ್ನು ಪಾವತಿಸುವಂತೆ ಜತೆಗೆ ಒಂದು ಗಾಡಿ ಸ್ಪರ್ಧೆಯಲ್ಲಿ ಭಾಗವಹಿಸಲು 6 ರಿಂದ 8 ಜನರಿಗೆ ಮಾತ್ರ ಅವಕಾಶವಿರುವುದಾಗಿ ತಿಳಿಸಿದರು.

ವಿಜೇತರಾದವರಿಗೆ 40 ಸಾವಿರ ನಗದು, ಟ್ರೋಫಿ(ಪ್ರಥಮ), ಮೂವತ್ತು ಸಾವಿರ ನಗದು ಮತ್ತು ಟ್ರೋಫಿ(ದ್ವಿತೀಯ), 20 ಸಾವಿರ ನಗದು ಮತ್ತು ಟ್ರೋಫಿ(ತೃತೀಯ), 10 ಸಾವಿರ ನಗದು ಮತ್ತು ಟ್ರೋಫಿ(ಚತುರ್ಥಿ) ಹಾಗೂ 5 ಸಾವಿರ ನಗದು ಮತ್ತು ಟ್ರೋಫಿ(ಪಂಚಮಿ) ಬಹುಮಾನವನ್ನು ವಿತರಿಸುವುದಾಗಿ ಹೇಳಿದರು.

ಕಾರ್ಯಕ್ರಮಕ್ಕೆ ಶಾಸಕ ಕೆ.ಎಂ. ಉದಯ ಚಾಲನೆ ನೀಡಲಿದ್ದು ಮುಖ್ಯ ಅತಿಥಿಗಳಾಗಿ ನಿರ್ಮಾಪಕ, ನಿರ್ದೇಶಕ ಜೋಗಿ ಪ್ರೇಮ್, ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಮನ್‌ಮುಲ್ ನಿರ್ದೇಶಕ ಎಂ.ಕೆ.ಹರೀಶ್‌ಬಾಬು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಲುವರಾಜು ಭಾಗವಹಿಸಲಿದ್ದಾರೆ.ಎರಡು ಹಲ್ಲು ಕರುಗಳಿಗೆ ಅವಕಾಶವಿರುವುದಾಗಿ ವಿವರಿಸಿದರು. ಗೋಷ್ಠಿ ವೇಳೆ ಸ್ಥಳೀಯ ಮುಖಂಡರಾದ ಬಿ.ಎನ್.ಮಧು, ಅಕ್ಷಯ್, ಸುಮಂತ್, ಸುನೀಲ್, ಹರ್ಷ, ಮಧು, ಮಂಜು, ಬಾಬು, ಕಾಳೇಗೌಡ, ಗೋಪಿ ಇತರರಿದ್ದರು.

ಬೆಸಗರಹಳ್ಳಿ ಗ್ರಾಮದಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಚಕ್ಕಡಿ ಗಾಡಿ ಓಟದ ಸ್ಪರ್ಧೆಯ ಕರಪತ್ರವನ್ನು ಆಯೋಜಕ ಪ್ರೇಮ್ ಬಿಡುಗಡೆಗೊಳಿಸಿದರು.

ಹೈನುಗಾರಿಕೆಯಿಂದ ಆರ್ಥಿಕ ಸಬಲತೆ ಸಾಧ್ಯ

ತಿ.ನರಸೀಪುರ: ಹೈನುಗಾರಿಕೆ ಲಾಭ ದಾಯಕ ಉದ್ಯಮವಾಗಿ ಬೆಳೆದಿದ್ದು, ಇದರಿಂದ ಗ್ರಾಮೀಣ ಜನರ ಆರ್ಥಿಕ ಸಬಲೀಕರಣವಾಗುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ವರುಣಾ ಕ್ಷೇತ್ರ ವ್ಯಾಪ್ತಿಯ ಮೂಡಲಹುಂಡಿ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರಿ ಸಂಘದ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿದರು. ಪಶು ಸಂಗೋಪನಾ ಇಲಾಖೆ ಮುಖೇನ ಗ್ರಾಮೀಣ ರೈತರಿಗೆ ಬಹುಪಯೋಗಿ ಯೋಜನೆಗಳನ್ನು ಜಾರಿ ಮಾಡಿದ್ದು,ಇವುಗಳನ್ನು ಬಳಸಿಕೊಂಡು ಆರ್ಥಿಕ ಸಬಲರಾಗಬೇಕು. ಹೈನುಗಾರಿಕೆ ದೊಡ್ಡ ಉದ್ಯಮವಾಗಿ ಬೆಳೆದಿದ್ದು, ಜನರು ಉತ್ತಮ ಗುಣಮಟ್ಟದ ಹಾಲು ಡೇರಿಗೆ ಹಾಕಿ ಹೆಚ್ಚು ಹಣವನ್ನು ಗಳಿಸಬಹುದಾಗಿದೆ. ಬೆಣ್ಣೆ, ತುಪ್ಪ, ಮೊಸರು ತಯಾರಿಸಿ ಹೆಚ್ಚು ಲಾಭ ಗಳಿಸಬಹುದಾಗಿದೆ ಎಂದರು.1

ಮೈಮುಲ್ ಅಧ್ಯಕ್ಷ ಅರ್. ಚೆಲುವ ರಾಜು ಮಾತನಾಡಿ, ಸಿದ್ದರಾಮಯ್ಯ ಅವರು ರಾಜ್ಯದ ಎಲ್ಲ ಹಾಲು ಉತ್ಪಾದಕ ಮಹಾ ಮಂಡಳಿಗಳಿಗೆ ಹೆಚ್ಚು ಅನುದಾನ ನೀಡುವ ಮೂಲಕ ರೈತರ ಹಿತಕಾಯಲು ಬದ್ಧವಾಗಿದ್ದಾರೆ. ಪ್ರೋತ್ಸಾಹ ಧನವನ್ನು 2.5 ರು.ಹೆಚ್ಚಳ ಮಾಡಿದೆ. ಹಾಲಿನ ಕೊಬ್ಬಿನ ಅಂಶದ ಆಧಾರದಲ್ಲಿ ದರ ಏರಿಕೆ ಬಾಬ್ತು ಹಣವನ್ನು ರೈತರಿಗೆ ನೀಡಲಾಗು ತ್ತಿದೆ ಎಂದರು. ಈ ವೇಳೆ ವರಕೋಡು ಗ್ರಾಪಂ ಅಧ್ಯಕ್ಷ ಶಿವಣ್ಣ, ಮೈಮುಲ್ ನಿರ್ದೇಶಕರಾದ ಕೆ.ಉಮಾಶಂಕರ್, ಲೀಲಾ ನಾಗರಾಜ್, ಗುರುಸ್ವಾಮಿ, ವ್ಯವಸ್ಥಾಪಕ ನಿರ್ದೇಶಕ ಸುರೇಶ್ ನಾಯಕ್, ಕರಿಬಸವ ರಾಜ, ಮೂಡ್ನಳ್ಳಿ ರವಿಕುಮಾರ್, ಪಶು ವೈದ್ಯ ಇಲಾಖೆಯ ಉಪ ನಿರ್ದೇಶಕ ನಾಗರಾಜು, ತಹಸೀಲ್ದಾರ್ ಮಹೇಶ್ ಕುಮಾರ್, ತಾ.ಪಂ ಇಒ ಕೃಷ್ಣ, ಡೇರಿ ಅಧ್ಯಕ್ಷ ಎಂ. ಮುದ್ದುಬಸವ ಇದ್ದರು.

ಡಾ. ಯತೀಂದ್ರ ಸಿದ್ದರಾಮಯ್ಯ ಮೂಡಲಹುಂಡಿ ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರಿ ಸಂಘದ ಕಚೇರಿಯನ್ನು ಉದ್ಘಾಟಿಸಿದರು.

787 ಡ್ರೀಮ್ ಏರ್‌ಕ್ರಾಫ್ಟ್ ಪತನಗೊಂಡಿದ್ದು ಹೇಗೆ?

ಅಹಮದಾಬಾದ್‌ನಲ್ಲಿ ನಡೆದ ಭೀಕರ ವಿಮಾನ ಅಪಘಾತವು ವಿಮಾನ ಪ್ರಯಾಣದ ಸುರಕ್ಷತೆಯ ಕುರಿತಾದ ಚರ್ಚೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ವಿಶ್ವದ ವಿವಿಧ ಕಂಪನಿಗಳು ತಯಾರಿಸಿದ ವಿಮಾನಗಳಿಗೆ ಹೋಲಿಸಿದರೆ, ಬೋಯಿಂಗ್ ವಿಮಾನಗಳು ತಂತ್ರಜ್ಞಾನ, ಸುರಕ್ಷತೆ, ವೇಗ ಮತ್ತು ಇಂಧನ ದಕ್ಷತೆಯ ವಿಷಯದಲ್ಲಿ ಶ್ರೇಷ್ಠವೆಂದು ಪರಿಗಣಿಸಲಾಗಿದೆ. ಗುರುವಾರ ನಡೆದ ದುರಂತಕ್ಕೆ ಕಾರಣವಾದ ವಿಮಾನದ ಬಗ್ಗೆ ಕೆಲ ಮಾಹಿತಿಗಳು ಇಲ್ಲಿವೆ.

787 ಡ್ರೀಮ್‌ಲೈನರ್ (ಬೋಯಿಂಗ್) ವಿಮಾನವು ಹೆಚ್ಚಿನ ಸಂಖ್ಯೆಯ ಪ್ರಯಾಣಿಕರನ್ನು ದೂರದ ಸ್ಥಳಗಳಿಗೆ ಸಾಗಿಸಲು ಸೂಕ್ತವೆಂದು ಪರಿಗಣಿಸಲಾಗಿದೆ. ಡ್ರೀಮ್‌ಲೈನರ್ ವಿಮಾನಗಳಲ್ಲಿ ಈಗಾಗಲೇ ಹಲವಾರು ಬಾರಿ ತಾಂತ್ರಿಕ ಸಮಸ್ಯೆಗಳು ಉದ್ಭವಿಸಿದ್ದರೂ,ಇದೀಗ ನಡೆದಿರುವ ದುರಂತದ ನಂತರ, ಬೋಯಿಂಗ್ ವಿಮಾನಗಳ ಸುರಕ್ಷತೆಯ ಬಗ್ಗೆ ಅನುಮಾನಗಳು ವ್ಯಕ್ತವಾಗುತ್ತಿವೆ.

2009 ಮೊದಲ ಡ್ರೀಮ್‌ಲೈನರ್

ಅಮೆರಿಕನ್ ವಿಮಾನ ತಯಾರಕ ಬೋಯಿಂಗ್ 2000ರಲ್ಲಿ '787 ಡ್ರೀಮ್ ಲೈನರ್' ಶ್ರೇಣಿಯ ವಿಮಾನಗಳನ್ನು ತಯಾರಿಸಲು ನಿರ್ಧರಿಸಿತು. ದೀರ್ಘ- ಪ್ರಯಾಣದ ವಿಮಾನಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಲು ಈ ಯೋಜನೆ ಯನ್ನು ಹಾಕಿಕೊಂಡಿತು. ಮೊದಲ ಡ್ರೀಮ್‌ಲೈನರ್ ಡಿಸೆಂಬರ್ 15, 2009ರಂದು ನಿರೀಕ್ಷೆಗಿಂತ ಮೂರು ವರ್ಷಗಳ ನಂತರ ಆಕಾಶಕ್ಕೆ ಹಾರಿತು. ಜಪಾನ್‌ನ ಆಲ್ ನಿಪ್ಪಾನ್ ಏರ್‌ವೇಸ್ ಮೊದಲ ಬಾರಿಗೆ ಸೆಪ್ಟೆಂಬರ್ 8, 2011ರಂದು ವಾಣಿಜ್ಯ ಸೇವೆಗಳಿಗಾಗಿ ಡ್ರೀಮ್‌ಲೈನರ್ ಅನ್ನು ಬಳಸಿತು.

100 ಕೋಟಿ ಪ್ರಯಾಣಿಕರು

ವಿಶ್ವಾದ್ಯಂತ 100 ಕೋಟಿಗೂ ಹೆಚ್ಚು ಜನರು 787 ಡ್ರೀಮ್‌ಲೈನರ್ ವಿಮಾನದಲ್ಲಿ ಇದುವರೆಗೂ ಹಾರಾಟ ನಡೆಸಿದ್ದಾರೆ ಎಂದು ಬೋಯಿಂಗ್ ಇತ್ತೀಚೆಗೆ ಘೋಷಿಸಿತ್ತು. ಈ ಶ್ರೇಣಿಯ ವಿಮಾನಗಳು 1,148ಕ್ಕೂ ಹೆಚ್ಚು ಇವೆ. ಏರ್ ಇಂಡಿಯಾ 34 ಡ್ರೀಮ್‌ಲೈನರ್‌ಗಳ ಮೂಲಕ ಪ್ರಯಾಣಿಕರಿಗೆ ಸೇವೆ ಒದಗಿಸುತ್ತಿದೆ. ಡ್ರೀಮ್‌ಲೈನರ್ ಏರ್ ಕಂಡಿಷನಿಂಗ್ ಮತ್ತು ಫ್ಲೈಟ್ ಕಂಟ್ರೋಲ್ ಸಿಸ್ಟಮ್‌ಗಳನ್ನು ಎಲೆಕ್ಟ್ರಿಕ್ ವ್ಯವಸ್ಥೆಯಿಂದ ಸ್ಥಾಪಿಸಿದ ಮೊದಲ ಪ್ರಯಾಣಿಕ ವಿಮಾನವಾಗಿದೆ. ಈ ಕಾರಣಗಳಿಂದಾಗಿ ಈ ವಿಮಾನ ಮಾರುಕಟ್ಟೆಗೆ ಬಂದ ತಕ್ಷಣವೇ ವಿಮಾನಯಾನ ಸಂಸ್ಥೆಗಳು ಇದನ್ನು ಖರೀದಿಸಲು ಸಾಲುಗಟ್ಟಿ ನಿಂತವು. ಮೊದಲ ದಶಕದಲ್ಲಿ 1006 ಡ್ರೀಮ್‌ಲೈನರ್ ವಿಮಾನಗಳನ್ನು ಮಾರಾಟ ಮಾಡಲಾಯಿತು ಮತ್ತು ಬೋಯಿಂಗ್ ಇನ್ನೂ ಸುಮಾರು 2150 ವಿಮಾನಗಳಿಗೆ ಖರೀದಿ ಬೇಡಿಕೆ ಹೊಂದಿದೆ.

ಒಂದೇ ಹಾರಾಟದಲ್ಲಿ 13 ಸಾವಿರ ಕಿ.ಮೀಗಳು

787-8 ಡ್ರೀಮ್‌ಲೈನರ್ ಬೋಯಿಂಗ್ ವಿನ್ಯಾಸಗೊಳಿಸಿದ ವೈಡ್-ಬಾಡಿ ಮಾದರಿಗಳಲ್ಲಿ ಒಂದಾಗಿದೆ. ಇದು ಏಕಕಾಲದಲ್ಲಿ 242-290 ಜನರನ್ನು ಹೊತ್ತೊಯ್ಯಬಲ್ಲದು. ವಿಮಾನಯಾನ ಸಂಸ್ಥೆಗಳು ಈ ಮಧ್ಯಮ ಗಾತ್ರದ ವಿಮಾನಗಳನ್ನು ಅಂತರಖಂಡ ವಿಮಾನಗಳಿಗಾಗಿ ಬಳಸುತ್ತವೆ. ಡ್ರೀಮ್ ಲೈನರ್ ವಿಮಾನವು ಒಂದೇ ಹಾರಾಟದಲ್ಲಿ 13,530 ಕಿಲೋಮೀಟರ್ ದೂರ ಹಾರಬಲ್ಲದು.

ವೈಶಿಷ್ಟ್ಯತೆ

ಜಗತ್ತಿನ ಅತ್ಯಾಧುನಿಕ ಪ್ರಯಾಣಿಕ ವಿಮಾನವೆಂದೇ ಪರಿಗಣಿಸಲ್ಪಟ್ಟಿರುವ ಅಮೆರಿಕದ ಬೋಯಿಂಗ್ ಕಂಪನಿಯ 787 ಡ್ರೀಮ್‌ಲೈನರ್ ಅಪಘಾತಕ್ಕೆ ತುತ್ತಾಗಿದ್ದು ಇದೇ ಮೊದಲು. ಈ ಹಿಂದೆ ಅನೇಕ ಬಾರಿ ತಾಂತ್ರಿಕ ಸಮಸ್ಯೆಗಳಿಂದ ಸುದ್ದಿ ಮಾಡಿತ್ತಾದರೂ ಈ ಸಲ ಭಾರೀ ದುರಂತಕ್ಕೆ ಸಾಕ್ಷಿಯಾಗಿದೆ. ಆ ಕಾರಣಕ್ಕೆ ಅಹಮದಾಬಾದ್ ನಡೆದ ಇಂಡಿಯನ್ ಏರ್‌ಲೈನ್ಸ್ ದುರಂತ ಬೋಯಿಂಗ್ ಡ್ರೀಮ್‌ಲೈನರ್ ವಿಮಾನದ ಪಾಲಿಗೆ ಕಪ್ಪು ಚುಕ್ಕೆಯಾಗಿ ಉಳಿದುಹೋಗಲಿದೆ. ಹೆಚ್ಚಿನ ಇಂಧನ ಕ್ಷಮತೆಗಾಗಿ ಹೆಸರು ವಾಸಿಯಾಗಿರುವ ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನ 13,500 ಕಿ.ಮೀ. ದೂರ ನಿರಂತರವಾಗಿ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿದೆ. ಅದೇ ಕಾರಣಕ್ಕೆ ದೂರದ ಪ್ರಯಾಣಕ್ಕಾಗಿ ಹೆಚ್ಚಾಗಿ ಈ ವಿಮಾನವನ್ನು ಬಳಸಲಾಗುತ್ತದೆ. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೊಂದಿರುವ ಈ ವಿಮಾನವು ಪ್ರಯಾಣಿಕ ಸ್ನೇಹಿಯಾಗಿಯೂ ಗುರುತಿಸಿಕೊಂಡಿದೆ.

ಬೋಯಿಂಗ್ 787-8 ಸಾಮರ್ಥ್ಯ ಮತ್ತು ತೂಕ



ವಿಮಾನದ ನಿರ್ಮಾಣ

ಡ್ರೀಮ್‌ಲೈನರ್ 787-8 ವಿಮಾನವು ಶೇ. 50ರಷ್ಟು ಹೆಚ್ಚು ಕಾರ್ಬನ್ ಫೈಬರ್ ಸಂಯುಕ್ತಗಳಿಂದ ನಿರ್ಮಿಸಲ್ಪಟ್ಟಿದೆ. ಹಾಗಾಗಿ ಅದು ಉಕ್ಕಿಗಿಂತ ಬಲಶಾಲಿಯಾಗಿದೆ. ವಿಮಾನವು ಅಲ್ಯೂಮಿನಿಯಂಗಿಂತ ಹಗುರವಾಗಿದ್ದು, ಇಂಧನ ದಕ್ಷತೆ ಯನ್ನು ನೀಡುತ್ತದೆ. ಹಾಗಾಗಿ ಪರಿಸರಸ್ನೇಹಿ ಎಂದೂ ಹೆಸರು ವಾಸಿಯಾಗಿದೆ. ಅಷ್ಟೇ ಅಲ್ಲ, ಅತ್ಯಾಧುನಿಕ ಸಂಚರಣೆ ವ್ಯವಸ್ಥೆಗಳನ್ನು ಸಹ ಈ ವಿಮಾನ ಹೊಂದಿದೆ.

ಕಾಡುತ್ತಿವೆ ಕಹಿ ಘಟನೆಗಳು

ಆರು ವರ್ಷಗಳ ಹಿಂದೆ ಇಂಡೋನೇಷ್ಯಾ ಮತ್ತು ಇಥಿಯೋಪಿಯಾದಲ್ಲಿ ಬೋಯಿಂಗ್‌ನ 737 ಮ್ಯಾಕ್ಸ್ 8 ವಿಮಾನಗಳ ಅಪಘಾತ ಮರೆಯಲಸಾಧ್ಯ. ಅಕ್ಟೋಬರ್ 9, 2018ರಂದು ಜಕಾರ್ತಾದಿಂದ 181 ಪ್ರಯಾಣಿಕರು ಮತ್ತು ಎಂಟು ಸಿಬ್ಬಂದಿಯನ್ನು ಹೊತ್ತ ಲಯನ್ ಏರ್ ವಿಮಾನವು ಜಾವಾ ಸಮುದ್ರಕ್ಕೆ ಅಪ್ಪಳಿಸಿತು. ಆ ಘಟನೆ ಸಂಭವಿಸಿ ಐದು ತಿಂಗಳ ನಂತರ, ಮಾರ್ಚ್ 2019ರಲ್ಲಿ ಇಥಿಯೋಪಿಯನ್ ಏರ್‌ಲೈನ್ಸ್ ವಿಮಾನವು ಅಡಿಸ್ ಅಬಾಬಾದಿಂದ ಹಾರಿದ ಸ್ವಲ್ಪ ಸಮಯದ ನಂತರ ಅಪಘಾತಕ್ಕೀಡಾಯಿತು, ಆ ಘಟನೆಯಲ್ಲಿ 157 ಜನರು ಸಾವನ್ನಪ್ಪಿದ್ದರು. ಬೋಯಿಂಗ್ 787-8 ಡ್ರೀಮ್‌ಲೈನರ್ ಶ್ರೇಣಿಯ ವಿಮಾನಗಳು ಹೈಡ್ರಾಲಿಕ್ ಸೋರಿಕೆ ಮತ್ತು ಬ್ಯಾಟರಿ ಸಮಸ್ಯೆಗಳಿಂದಾಗಿ ಹಲವಾರು ಬಾರಿ ತುರ್ತು ಭೂಸ್ಪರ್ಶ ಮಾಡಿವೆ. ಈ ವರ್ಷದ ಜನವರಿ 24ರಂದು ಎರಡು ಅಮೆರಿಕನ್ ಏರ್‌ಲೈನ್ಸ್ ವಿಮಾನಗಳಲ್ಲಿ ಸಮಸ್ಯೆಗಳು ಉದ್ಭವಿಸಿದವು. ತಾಂತ್ರಿಕ ವೈಫಲ್ಯಗಳು ಆ ಘಟನೆಗಳಿಗೆ ಕಾರಣ ಎಂದು ತಜ್ಞರ ತನಿಖೆಯಿಂದ ವ್ಯಕ್ತವಾಯಿತು. 2013ರಲ್ಲಿ ವಿವಿಧ ದೇಶಗಳಲ್ಲಿ 8 ಬಾರಿ ವಿವಿಧ ರೀತಿಯ ಸಮಸ್ಯೆಗಳು ಉದ್ಭವಿಸಿದ್ದವು.

ಯಾವುದೇ ವಿಮಾನ ಪತನವಾದರೂ ಅದರ ತನಿಖೆಯಲ್ಲಿ ಬ್ಲ್ಯಾಕ್‌ಬಾಕ್ಸ್ ಪ್ರಮುಖ ಪಾತ್ರ ವಹಿಸುತ್ತದೆ. ಅದು ವಿಮಾನ ಹಾರಾಟದ ಸಮಯದಲ್ಲಿನ ವಿಮಾನದ ಎಲ್ಲಾ ಚಟುವಟಿಕೆಗಳನ್ನು ದಾಖಲಿಸುತ್ತದೆ. ಅಹಮದಾಬಾದ್‌ನಲ್ಲಿ ಗುರುವಾರ ಪತನಗೊಂಡ ಏರ್ ಇಂಡಿಯಾ ವಿಮಾನದ ಬ್ಲ್ಯಾಕ್ ಬಾಕ್ಸ್ ಶುಕ್ರವಾರದಂದು ಪತ್ತೆಯಾಗಿದ್ದು, ಅದನ್ನು ತನಿಖೆಗಾಗಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹಾಗಾಗಿ ಈ ಬ್ಲ್ಯಾಕ್ ಬಾಕ್ಸ್‌ನ ದತ್ತಾಂಶಗಳ ನೆರವಿನಿಂದ ಈ ವಿಮಾನ ಅಪಘಾತಕ್ಕೆ ನಿಖರ ಕಾರಣ ಏನೆಂದು ಪತ್ತೆಹಚ್ಚಲು ಸಾಧ್ಯವಾಗಬಹುದು. ಹಾಗಾದರೆ ಬ್ಲ್ಯಾಕ್‌ಬಾಕ್ಸ್ ಎಂದರೇನು, ಅದು ಹೇಗೆ ಕಾರ್ಯನಿರ್ವಹಿಸುತ್ತದೆ ಇತ್ಯಾದಿ ವಿಚಾರಗಳನ್ನು ತಿಳಿದುಕೊಳ್ಳೋಣ.

ಬ್ಲ್ಯಾಕ್ ಬಾಕ್ಸ್ ಪಾತ್ರ

ಅಹಮದಾಬಾದ್: ವಿಮಾನವಾಗಲೀ, ಹೆಲಿಕಾಪ್ಟರ್ ಆಗಲೀ ಅವಘಡಕ್ಕೀಡಾದಾಗ ಅದಕ್ಕೆ ಕಾರಣವೇನು ಎಂಬುದನ್ನು ತಿಳಿಯುವುದಕ್ಕೆ ಮೊದಲು ಬ್ಲ್ಯಾಕ್‌ಬಾಕ್ಸ್‌ಗಾಗಿ ಹುಡುಕಾಟ ನಡೆಯುತ್ತದೆ. ಬ್ಯಾಕ್ಲ್‌ಬಾಕ್ಸ್ ಸಿಕ್ಕಿದರೆ, ಅದರಲ್ಲಿರುವ ಧ್ವನಿಮುದ್ರಿಕೆಯನ್ನು ಆಲಿಸಿದರೆ ವಿಮಾನ ದುರಂತಕ್ಕೆ ಅಥವಾ ಅವಘಡಕ್ಕೆ ಕಾರಣ ಏನಾಗಿರಬಹುದು ಎಂಬುದು ತಿಳಿದು ಬರುತ್ತದೆ.

ವಿಮಾನ ಅಥವಾ ಹೆಲಿಕಾಪ್ಟರ್‌ನ ಅವಘಡಕ್ಕೆ ಕಾರಣ ಕಂಡುಕೊಳ್ಳುವ ತನಿಖಾ ಪ್ರಕ್ರಿಯೆಯಲ್ಲಿ ಆ ವಿಮಾನ ಅಥವಾ ಹೆಲಿಕಾಪ್ಟರ್‌ನಲ್ಲಿನ ಬ್ಲಾಕ್ ಬಾಕ್ಸ್(ಫ್ಲೈಟ್ ರೆಕಾರ್ಡರ್ ಮತ್ತು ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್) ಪ್ರಮುಖ ಪಾತ್ರ ವಹಿಸುತ್ತವೆ. ವಿಮಾನ ಹಾರಾಟದ ಸಮಯದಲ್ಲಿನ ಎಲ್ಲಾ ಶಬ್ಧಗಳನ್ನೂ ಬ್ಲ್ಯಾಕ್ ಬಾಕ್ಸ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಳ್ಳುತ್ತಾ ಹೋಗುತ್ತದೆ. ವಿಮಾನ ನೀರಿಗೆ ಬಿದ್ದರೂ, ಸ್ಫೋಟಗೊಂಡರೂ, ಬೆಂಕಿಯಲ್ಲಿ ಸುಟ್ಟು ಭಸ್ಮವಾದರೂ ಈ ಬ್ಲ್ಯಾಕ್ ಬಾಕ್ಸ್ ಮಾತ್ರ ಸುರಕ್ಷಿತವಾಗಿರುತ್ತದೆ. ಹಾಗಾಗಿಯೇ ಎಲ್ಲಾ ರೀತಿಯ ವಿಮಾನ, ಹೆಲಿಕಾಪ್ಟರ್‌ಗಳಲ್ಲಿ ಬ್ಲ್ಯಾಕ್ ಬಾಕ್ಸ್ ಕಡ್ಡಾಯವಾಗಿ ಅಳವಡಿಸಲಾಗುತ್ತದೆ.

'ಫ್ಲೈಟ್ ಡಾಟಾ ರೆಕಾರ್ಡರ್' ವಿಮಾನ ಹಾರಾಟದ ಸಮಯದಲ್ಲಿ ವಿಮಾನದೊಳಗೆ ನಡೆಯುವ ಚಟುವಟಿಕೆಗಳನ್ನು ದಾಖಲಿಸಿಕೊಳ್ಳುತ್ತದೆ. ವಿಮಾನ ಅಪಘಾತವಾದಾಗ ಅದಕ್ಕೆ ಕಾರಣ ಪತ್ತೆ ಹಚ್ಚಲು ನೆರವಾಗಲೆಂದೇ 5 ಕೆಜಿ ತೂಕದ ರೆಕಾರ್ಡಿಂಗ್ ಸಾಧನವನ್ನು ಅಳವಡಿಸಲಾಗುತ್ತದೆ. ಸಾಧನಕ್ಕೆ ಹೆಚ್ಚಿನ ಹಾನಿಯಾಗದಿರಲಿ ಎಂಬ ಕಾರಣಕ್ಕೆ 'ಬ್ಲ್ಯಾಕ್ ಬಾಕ್ಸ್'(ಕಪ್ಪು ಪೆಟ್ಟಿಗೆ) ಅನ್ನು ಸಾಮಾನ್ಯವಾಗಿ ವಿಮಾನದ ಹಿಂಭಾಗದಲ್ಲಿಯೇ ಜೋಡಿಸಲಾಗುತ್ತದೆ. ಈ ಬ್ಲ್ಯಾಕ್ ಬಾಕ್ಸ್ ಅನ್ನು ಟೈಟಾನಿಯಂ ಲೋಹದಿಂದ ತಯಾರಿಸಲಾಗುತ್ತದೆ. ಟೈಟಾನಿಯಂ ಲೋಹ ಅದೆಷ್ಟು ಬಲಿಷ್ಠ ಎಂದರೆ ಸಮುದ್ರದಲ್ಲಿ ಬಿದ್ದರೂ, ಸಾವಿರಾರು ಅಡಿಗಳಷ್ಟು ಎತ್ತರದಿಂದ ನೆಲಕ್ಕೆ ಅಪ್ಪಳಿಸಿದರೂ ಜಖಂಗೊಳ್ಳುವುದಿಲ್ಲ. ಘರ್ಷಣೆ ತಡೆದುಕೊಳ್ಳುವ ಶಕ್ತಿ ಅದಕ್ಕಿದೆ.

ವಿಮಾನ ಅಪಘಾತಕ್ಕೀಡಾದಾಗ ವಿಮಾನದ ಹಿಂಬದಿಗೆ (ಬಾಲದ ಕಡೆ) ಪೆಟ್ಟು ಬೀಳುವುದು ಕಡಿಮೆ. ಏಕೆಂದರೆ ಬಾಲ ವಿಮಾನದ ಉಳಿದ ಭಾಗಗಳಿಗಿಂತ ಎತ್ತರದಲ್ಲಿ ಇರುತ್ತದೆ. ಆ ಕಾರಣಕ್ಕಾಗಿಯೇ ಬ್ಲ್ಯಾಕ್ ಬಾಕ್ಸ್ ಅನ್ನು ವಿಮಾನದ ಬಾಲದ ಭಾಗದಲ್ಲಿಯೇ ಜೋಡಿಸಲಾಗುತ್ತದೆ. ವಿಮಾನದ ಎಂಜಿನ್‌ಗೆ ಜೋಡಿಸಿದ ಜನರೇಟರ್‌ನಿಂದ ಬ್ಲ್ಯಾಕ್ ಬಾಕ್ಸ್‌ನ ಬ್ಯಾಟರಿ ಚಾರ್ಜ್ ಆಗುತ್ತದೆ.

ಪತ್ತೆ ಸುಲಭ: ಕಾಡಿನಲ್ಲೋ, ಸಮುದ್ರದಲ್ಲೋ ವಿಮಾನ ಪತನವಾದರೂ ಈ ಬ್ಲ್ಯಾಕ್ ಬಾಕ್ಸ್‌ನ ಎರಡು ಅಂಶಗಳೂ ದುರಂತ ನಂತರದ 30 ದಿನಗಳವರೆಗೂ ಸಿಗ್ನಲ್ ಹೊರಸೂಸುತ್ತಿರುತ್ತವೆ. ಇದರ ಸಿಗ್ನಲ್ 2-3 ಕಿ.ಮೀ.ವರೆಗೂ ರವಾನೆಯಾಗುತ್ತದೆ. 14 ಸಾವಿರ ಅಡಿ ಆಳದ ಸಮುದ್ರದಲ್ಲಿದ್ದರೂ ಸಿಗ್ನಲ್ ಹೊರಸೂಸುತ್ತಿರುತ್ತದೆ. ಹಾಗಾಗಿ ಅವಘಡ ಸ್ಥಳದ ಆಸುಪಾಸಿನಲ್ಲಿ ಬ್ಲ್ಯಾಕ್ ಬಾಕ್ಸ್ ಪತ್ತೆಗೆ ಈ ಸಂಕೇತಗಳು ನೆರವಾಗುತ್ತವೆ.

ಬ್ಲ್ಯಾಕ್‌ಬಾಕ್ಸ್ ಬಣ್ಣ ಬೇರೆ!

ಫ್ಲೈಟ್ ಡೇಟಾ ರೆಕಾರ್ಡರ್‌ನಲ್ಲಿ ವಿಮಾನದ ನಿರ್ದೇಶನ, ಎತ್ತರ, ಇಂಧನ, ವೇಗ, ಕ್ಯಾಬಿನ್ ತಾಪಮಾನ ಇತ್ಯಾದಿ ಮಾಹಿತಿಗಳಿರುತ್ತವೆ. ವಿಮಾನ ಯಾನದ ಕೊನೆಯ 25 ಗಂಟೆಗಳ ಅವಧಿಯ 88 ಮಾಹಿತಿಗಳ ದತ್ತಾಂಶ ಈ ಪೆಟ್ಟಿಗೆಯಲ್ಲಿ ಸಂಗ್ರಹ ವಾಗುತ್ತದೆ. 1,100 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ 1 ಗಂಟೆ ಹಾಗೂ 260 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ 10 ಗಂಟೆಗಳವರೆಗೂ ಡೇಟಾವನ್ನು ಸುರಕ್ಷಿತವಾಗಿ ಹಿಡಿದಿಟ್ಟುಕೊಳ್ಳಬಲ್ಲದಾಗಿದೆ. ಹೆಸರು ಬ್ಲ್ಯಾಕ್ ಬಾಕ್ಸ್ ಎಂದಿದ್ದರೂ ತನಿಖಾ ಅಧಿಕಾರಿಗಳಿಗೆ ಗುರುತಿಸಲು ಸುಲಭವಾಗಲಿ ಎಂದೇ ಬ್ಲ್ಯಾಕ್ ಬಾಕ್ಸ್ ಅನ್ನು ಕೆಂಪು ಅಥವಾ ಗುಲಾಬಿ ಬಣ್ಣ ಬಳಿಯಲಾಗಿರುತ್ತದೆ.

» ದೇಸೀ ಸೊಗಡಿನ ಸಂಸ್ಕೃತಿಯ ಕಾಪು ಸಮಾಜ **»** ಸರಕಾರದ ಧನ ಸಹಾಯವಿಲ್ಲದೆ ರೈತರ ಹಬ್ಬ

ಮುನ್ನುರು ಕಾಪು ಸಮಾಜದ ವೈಭವ ಮಂಗಾರು ಸಾಂಸ್ಕೃತಿಕ ಹಬ್ಬದ ಉತ್ಸವ

ಜಿಲ್ಲಾ ನೋಟ

ಬಸವರಾಜ ನಾಗಡದಿನ್ನಿ, ರಾಯಚೂರು

ಮೈಸೂರೆಂದರೆ ವೈಭವದ ದಸರಾ ನೆನಪಾಗುತ್ತದೆ. ಸರಕಾರದ ಸಹಾಯವಿಲ್ಲದೆ ಒಂದು ಸಮಾಜ ಮೈಸೂರು ದಸರಾ ಹಬ್ಬದ ಮಾದರಿಯಲ್ಲೆ 'ಮುಂಗಾರು ಸಾಂಸ್ಕೃತಿಕ ರಾಯಚೂರು ಹಬ್ಬ' ಆಚರಿಸುವ ಮೂಲಕ ರಾಯಚೂರಿನಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆಗೆ ಬರ ಇಲ್ಲ ಎನ್ನುವುದನ್ನು ಮುನ್ನುರು ಕಾಪು ಸಮಾಜ ನಾಡಿಗೆ ತೋರಿಸಿಕೊಟ್ಟಿದೆ.

ಎಂಟು ದಿನ ಬೆಳ್ಳಿ ಹಬ್ಬ

ಪ್ರತಿ ವರ್ಷ ಮುಂಗಾರು ಹಬ್ಬವನ್ನ ಮೂರು ದಿನಗಳ ಕಾಲ ಆಚರಿಸಿದರೆ, ಈ ವರ್ಷ ಬೆಳ್ಳಿ ಹಬ್ಬದ ವರ್ಷವಾಗಿರುವುದರಿಂದ ಎಂಟು ದಿನಗಳ ಕಾಲ ನೃತ್ಯ, ಗೀತ ಗಾಯನ, ಚಿತ್ರಕಲಾ ಸ್ಪರ್ಧೆ, ಎತ್ತುಗಳಿಂದ ಭಾರವಾದ ಕಲ್ಲು ಎಳೆಯುವ ಸ್ಪರ್ಧೆ, ಕುಸ್ತಿ ಕಾಳಗ ಮತ್ತು ಕೈ ಕಲ್ಲು ಎತ್ತುವ ಸ್ಪರ್ಧೆ ಆಯೋಜಿಸಿ ರಾಯಚೂರು ಜಿಲ್ಲೆ ಮತ್ತು ಪಕ್ಕದ ಆಂಧ್ರ ಮತ್ತು ತೆಲಂಗಾಣದ ಜನತೆಗೆ ಮನರಂಜನೆಯ ರಸದೌತಣ ಉಣಬಡಿಸಿದ್ದಾರೆ.

ನಗದು ಬಹುಮಾನಗಳು

ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ವಿಶೇಷವಾಗಿ ಭಾರದ ಕಲ್ಲು ಎಳೆಯುವ ಸ್ಪರ್ಧೆ ಜನ ಮೆಚ್ಚುಗೆಗೆ ಪಾತ್ರವಾಗಿದೆ. ನಗರದ ರಾಜೇಂದ್ರ ಗಂಜ್ ಆವರಣದಲ್ಲಿ ಎತ್ತುಗಳಿಂದ ಒಂದು ಟನ್, ಎರಡು ಟನ್ ಮತ್ತು ಎರಡುವರೆ ಟನ್ ಭಾರದ ಕಲ್ಲು ಎಳೆದು ಮೊದಲನೇ ಸ್ಥಾನ ಪಡೆದ ಎತ್ತಿನ ಮಾಲೀಕರಿಗೆ ಒಂದು ಲಕ್ಷ, ಎರಡನೇ ಸ್ಥಾನಕ್ಕೆ 75 ಸಾವಿರ, ಮೂರನೇ ಸ್ಥಾನಕ್ಕೆ 65 ಸಾವಿರ, ನಾಲ್ಕನೇ ಸ್ಥಾನಕ್ಕೆ 55 ಸಾವಿರ ಹೀಗೆ ಆರನೇ ಸ್ಥಾನ ಪಡೆದ ಎತ್ತುಗಳ ಮಾಲೀಕರಿಗೆ 35 ಸಾವಿರ ರೂಪಾಯಿ ನಗದು ಮತ್ತು ನೆನಪಿನ ಕಾಣಿಕೆ ನೀಡಿ ಗೌರವಿಸಲಾಗಿದೆ.



25 ವರ್ಷದಿಂದ ಹಬ್ಬ

ಮೂಲತ: ಕೃಷಿಕರಾಗಿದ್ದ ಮುನ್ನುರು ಕಾಪು ಸಮಾಜದ ಬಂಧುಗಳು, ಸಮಾಜದ ಮುಖಂಡ, ಮಾಜಿ ಶಾಸಕ ಪಾಪಾರಡ್ಡಿ ಅವರ ದೂರಾಲೋಚನೆ, ತಮ್ಮ ಸಮುದಾಯದ ಬಗ್ಗೆ ಅವರಿಗಿದ್ದ ಅತೀವ ಕಾಳಜಿ, ಪ್ರೋತ್ಸಾಹದಿಂದಾಗಿ ಇಂದು ವ್ಯಾಪಾರ ವಹಿವಾಟಿನಲ್ಲಿ ಎಲ್ಲರಿಗಿಂತ ಮುನ್ನುರು ಕಾಪು ಸಮುದಾಯ ಒಂದು ಹೆಜ್ಜೆ ಮುಂದಿದೆ. ಪಾಪಾರಡ್ಡಿ ಅವರಿಗೆ ಮುನ್ನರು ಕಾಪು ಸಮಾಜದ ಅಧ್ಯಕ್ಷ ಬೆಲ್ಲಂ ನರಸರಡ್ಡಿ ಬೆನ್ನೆಲುಬಾಗಿ ನಿಲ್ಲುವ ಮೂಲಕ ಕಳೆದ ಇಪ್ಪತ್ತೈದು ವರ್ಷಗಳಿಂದ ನಿರಂತರವಾಗಿ ಮುಂಗಾರು ಹಬ್ಬ ಆಚರಣೆ ಮಾಡಿಕೊಂಡು ಬಂದು ಅನ್ನದಾತನಿಗೆ ಗೌರವ ಸಲ್ಲಿಸುತ್ತಾ ಬಂದಿದೆ.



ಒಕ್ಕಲುತನ ಆಶ್ರಯಿಸಿದ್ದ ಮುನ್ನರುಮ ಕಾಪು ಸಮಾಜ ದವರು ಕ್ರಮೇಣ ಅಕ್ಷರಸ್ಥರಾಗಿ ಗಂಜ್‌ನ ಅಂಗಡಿಗಳಲ್ಲಿ ಗುಮಾಸ್ತರಾಗಿ ಕೆಲಸ ಮಾಡುತ್ತಾ, ಆರ್ಥಿಕವಾಗಿ ಸಬಲರಾಗಿ ತಾವು ಕೆಲಸ ಮಾಡುತಿದ್ದ ಅಂಗಡಿಗಳ ಮಾಲೀಕರಾಗಿದ್ದಾರೆ. ಕಳೆದ 25 ವರ್ಷಗಳ ಹಿಂದೆ ಕೇವಲ ಕಾರ ಹುಣ್ಣಿಮೆಗೆ ಸೀಮಿತವಾಗಿದ್ದ ಮುಂಗಾರು ಹಬ್ಬವನ್ನ ನಾಡಿನ ಜನತೆ ಮೆಚ್ಚುವ ಉತ್ಸವವಾಗಿ ಮಾಡಿದ್ದಾರೆ. ಸಾಹಿತ್ಯ, ಸಂಗೀತ, ಕ್ರೀಡೆ, ಕಲೆಗೆ ಪ್ರೋತ್ಸಾಹಿಸಿ ಸಾಂಸ್ಕೃತಿಕ ರೂವಾರಿಗಳಾಗಲು ಸಮಾಜದ ಮುಖಂಡ ಎ.ಪಾಪಾರಡ್ಡಿ ಕಾರಣರಾಗಿದ್ದಾರೆ.

-ಬಿ.ವೆಂಕಟಸಿಂಗ್, ಹಿರಿಯ ಪತ್ರಕರ್ತರು

- » ದೇಸೀ ಸೊಗಡಿನ ಸಂಸ್ಕೃತಿಯ ಕಾಪು ಸಮಾಜ
- » ಸರಕಾರದ ಧನ ಸಹಾಯವಿಲ್ಲದೆ ರೈತರ ಹಬ್ಬ
- » ಇಪ್ಪತ್ತೈದು ವರ್ಷಗಳಿಂದ ವೈಭವದ ಆಚರಣೆ

ತಮ್ಮ ಸಮಾಜಕ್ಕಾಗಿ ಶೈಕ್ಷಣಿಕ ಸಂಸ್ಥೆ ಸ್ಥಾಪಿಸಲಾಗಿದ್ದು, ಇದೀಗ ರಾಯಚೂರಿನಲ್ಲಿ ಒಂದು ಸುಸಜ್ಜಿತ ಬೃಹತ್ ಆಸ್ಪತ್ರೆ ನಿರ್ಮಾಣಕ್ಕೆ ಮುನ್ನುರು ಕಾಪು ಸಮಾಜ ಮುಂದಾ ಗಿದೆ. ಇಷ್ಟೆಲ್ಲಾ ಮಹತ್ಕಾರ್ಯಗಳನ್ನ ಮಾಡುತ್ತಿದ್ದೇವೆ ನಿಜ. ಆದರೆ ತಾವು ನೆಪ ಮಾತ್ರ ಅಷ್ಟೇ. ಇಲ್ಲಿ ಸಮಾಜಕ್ಕಿಂತ ತಾವು ಯಾರೂ ದೊಡ್ಡವರಲ್ಲ.

-ಪಾಪಾರಡ್ಡಿ, ಮಾಜಿ ಶಾಸಕ

ಸರಕಾರದ ನೆರವಿಲ್ಲ

ಮೈಸೂರು ದಸರಾ ಹಬ್ಬದಲ್ಲಿ ಜಟ್ಟಿಗಳ ಕಾಳಗ ನಡೆದರೆ, ಇಲ್ಲಿ ಕುಸ್ತಿ ಪಂದ್ಯ ಆಯೋಜಿಸಿ ವಿಜೇತರಾದವರಿಗೆ ಬಹುಮಾನ ನೀಡಿ ಸತ್ಕರಿಸಲಾಯಿತು. ದೇಶಿಯ ಸೊಗಡಿನ ಕಲೆ ನಶಿಸಿ ಹೋಗದಂತೆ ಮುಂದಿನ ಪೀಳಿಗೆಗೂ ಕಾಯ್ದಿಟ್ಟುಕೊಂಡು ಹೋಗುವ ಸದುದ್ದೇಶದಿಂದ ಸರಕಾರದಿಂದ ಧನ ಸಹಾಯ ಪಡೆಯದೆ ಮುಂಗಾರು ಸಾಂಸ್ಕೃತಿಕ ಹಬ್ಬ ಆಚರಿಸುತ್ತಾ ಬರಲಾಗುತ್ತಿದೆ. ತಮಗೆ ತಮ್ಮ ಸಮಾಜದ ಸೇವೆಯೇ ಮುಖ್ಯ ಎನ್ನುವ ಮೂಲಕ ಮುನ್ನುರು ಕಾಪು ಸಮಾಜದ ಮುಖಂಡರಾದ ಪಾಪಾರಡ್ಡಿ ಅವರು ಇತರರಿಗೆ ಮಾದರಿಯಾಗಿ ನಿಲ್ಲುವ ಕೆಲಸ ಮಾಡುತ್ತಿದ್ದಾರೆ.

ನಂದಿ ಬೆಟ್ಟದ ಸಚಿವ ಸಂಪುಟ ಸಭೆ ನಾಂದಿ ಹಾಡಲಿದೆ ಜಿಲ್ಲೆ ಅಭಿವೃದ್ಧಿಗೆ

ಜಿಲ್ಲಾ ನೋಟ

ಮುನಿರಾಜು ಎಂ.ಅರಿಕೆರೆ, ಚಿಕ್ಕಬಳ್ಳಾಪುರ

ಪ್ರಸಿದ್ಧ ಗಿರಿಧಾಮ ನಂದಿಬೆಟ್ಟದಲ್ಲಿ ಜೂನ್ 19 ರಂದು ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ. ಇದರಿಂದ ಜಿಲ್ಲೆಯ ಜನತೆಯಲ್ಲಿ ತೀವ್ರ ಕುತೂಹಲ ಮೂಡಿಸಿರುವುದಷ್ಟೇ ಅಲ್ಲದೆ ಜಿಲ್ಲೆಯ ಕೆಲವು ಸಮಸ್ಯೆ ಪರಿಹಾರ ಕಾಣಬಹುದೇ ? ಎಂಬ ನಿರೀಕ್ಷೆಗಳು ಗರಿಗದರಿವೆ.

ಹೌದು. ಸಚಿವ ಸಂಪುಟ ಸಭೆಯೆಂಬುದು ವಿಧಾನೌಧಕ್ಕೆ ಸೀಮಿತವಾದ ಕಾಲವೊಂದಿತ್ತು. ಆದರೆ ಸಾಮಾಜಿಕ ಅಸಮತೋಲನೆ ನಿವಾರಿಸುವಲ್ಲಿ ಜಿಲ್ಲಾ ಮಟ್ಟದ ವಿಶೇಷ ಸಂಪುಟ ಸಭೆ, ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನಗಳು ಸರಕಾರದ ನಡೆಯ ಸ್ವರೂಪವನ್ನೇ ಬಲಾಯಿಸಿದಂತಿವೆ. ಇದು ಆಡಳಿತಾತ್ಮಕ ವಿಕೇಂದ್ರೀಕರಣದ ಮತ್ತೊಂದು ಮುಖ ಕೂಡ. ಇದು ರಾಜಕೀಯವಾಗಿಯೂ ಒಳ್ಳೆಯ ಬೆಳವಣಿಗೆಯೂ ಹೌದು.

4 ಜಿಲ್ಲೆಗೆ ಬಂಪರ್

ಚಿಕ್ಕಬಳ್ಳಾಪುರ, ಕೋಲಾರ ಬೆಂಗಳೂರು ವಿಭಾಗದ ಜಿಲ್ಲಾ ಉಸ್ತುವಾರಿ ಸಚಿವರ ಮುತುವರ್ಜಿಯ ಕಾರಣವಾಗಿ ಜಿಲ್ಲೆಯ ನಂದಿಬೆಟ್ಟದಲ್ಲಿ ಸಚಿವ ಸಂಪುಟ ಸಭೆ ಏರ್ಪಡಿಸಲಾಗಿದೆ. ಸಂಪುಟ ಸಭೆಗೂ ಮುನ್ನವೇ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ ಸುಧಾಕರ್, ಕೋಲಾರದ ಉಸ್ತುವಾರಿ ಸಚಿವ ಬೈರತಿ ಸುರೇಶ್, ಬೆಂಗಳೂರು ಗ್ರಾಮಾಂತರದ ಕೆ.ಹೆಚ್.ಮುನಿಯಪ್ಪ, ಕೃಷ್ಣಭೈರೇಗೌಡ, ಸ್ಥಳೀಯ ಶಾಸಕ ಪ್ರದೀಪ್ ಈಶ್ವರ್ ಸೇರಿ ಈ ಭಾಗದ ಜನಪ್ರತಿನಿಧಿಗಳು ತಮ್ಮ ತಮ್ಮ ಕ್ಷೇತ್ರಗಳ ಬೇಡಿಕೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುವಲ್ಲಿ ಯಶಸ್ವಿಯಾಗಿರುವಂತಿದೆ.

ಪ್ರಸಿದ್ಧ ಪ್ರವಾಸಿ ತಾಣ

ಚಿಕ್ಕಬಳ್ಳಾಪುರ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನಂದಿಬೆಟ್ಟದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳುವ ತೀರ್ಮಾನ ಬರಪೀಡಿತ ಕೋಲಾರ, ಚಿಕ್ಕಬಳ್ಳಾಪುರ ಉಭಯ ಜಿಲ್ಲೆಗಳ ಪಾಲಿಗೆ ಅದೃಷ್ಟದ ಮಳೆಯನ್ನೇ ತರಲೂಬಹುದು. ದಕ್ಷಿಣ ಭಾರತದ ಪ್ರವಾಸ ಕೈಗೊಂಡಿದ್ದ ವೇಳೆ ಮಹಾತ್ಮಾಗಾಂಧಿ ಯವರ ಆರೋಗ್ಯ ಕೈ ಕೊಟ್ಟಿತ್ತು. ಆಗ 1927 ಮತ್ತು 1934 ಈ ಎರಡು ಅವಧಿಯಲ್ಲಿ ನಂದಿ ಬೆಟ್ಟದಲ್ಲಿ ಅವರು 60ಕ್ಕೂ ಹೆಚ್ಚು ದಿನ ಬಿಡು ಬಿಟ್ಟು ಆರೋಗ್ಯ ಸುಧಾರಿಸಿಕೊಂಡಿದ್ದರು. ಗಾಂಧೀಜಿ ಮೆಟ್ಟಿಲುಗಳನ್ನು ಬಳಸಿ ಬೆಟ್ಟವನ್ನು ಹತ್ತಿದ ಕುರುಹಾಗಿ ಬೆಟ್ಟದ ಬುಡದಲ್ಲಿರುವ ಗ್ರಾಮಕ್ಕೆ ನೆನಪಿನಾರ್ಥವಾಗಿ ಗಾಂಧಿಪುರ ಎಂದು ಹೆಸರಿಡಲಾಗಿದೆ. ಇಂತಹ ಐತಿಹಾಸಿಕ ಹಿನ್ನೆಲೆ ಇರುವ ನಂದಿ ಗಿರಿಧಾಮದಲ್ಲಿ ಇದೆ ಮೊದಲ ಬಾರಿಗೆ ವಿಶೇಷ ಸಚಿವ ಸಂಪುಟ ಸಭೆ ನಡೆಯುತ್ತಿರುವುದು ಸಂತೋಷದ ಜತೆ ಕುತೂಹಲ ತಂದಿದೆ.

ಅಂತರ್ಜಲವೇ ಪಾತಾಳಕ್ಕೆ

ನದಿ ನಾಲೆಗಳ ಆಶ್ರಯವಿಲ್ಲದ ಜಿಲ್ಲೆಗೆ ಅಂತರ್ಜಲವೇ ಆಧಾರವಾಗಿದ್ದು, ಇದರ ಆಧಾರದಲ್ಲಿ ಜನತೆ ಬದುಕು ಕಟ್ಟಿಕೊಂಡಿದ್ದಾರೆ. ಕೊಳವೆ ಬಾವಿಗಳಿಗಾಗಿ ಸಾಲ ಸೋಲ ಮಾಡಿ ಮಾಡಿ ಸರ್ವನಾಶವಾದ ರೈತರ ಸಂಖ್ಯೆ ಲೆಕ್ಕಕ್ಕಿಲ್ಲ. ಸಾವಿರದಿಂದ 1500 ಅಡಿ ಆಳಕ್ಕೆ ಕೊಳವೆ ಬಾವಿ ಕೊರೆದರೂ ಶುದ್ಧವಾದ ನೀರು ದೊರೆಯುತ್ತಿಲ್ಲ. ಇದನ್ನು ಮನಗಂಡು ಶಾಶ್ವತ ನೀರಾವರಿಗಾಗಿ ಯೋಜನೆ ಘೋಷಣೆಗೆ ಒಮ್ಮತದ ತೀರ್ಮಾನಕ್ಕೆ ಬರಬೇಕಿದೆ.

ಕೃಷ್ಣೆ ಹರಿಯುವಳೆ ಇಲ್ಲಿಗೆ ?

ಉತ್ತರ ಕರ್ನಾಟಕ ಭಾಗದ ನೀರಾವರಿ ಯೋಜನೆಗಳಿಗೆ ಲಕ್ಷಾಂತರ ಕೋಟಿ ಅನುದಾನ ನೀಡಿರುವ ಸರ್ಕಾರಗಳು, ಬಯಲು ಸೀಮೆಯ ಜಿಲ್ಲೆಗಳಿಗೆ ಕಡೆಗಣಿಸಿರುವುದು ಎದ್ದು ಕಾಣುತ್ತಿದೆ.ಇದೇ ಕಾರಣವಾಗಿ ಈ ಭಾಗದಲ್ಲಿ ನದಿ ಜೋಡ ಣೆಯ ಕೂಗಿಗೆ ಬಲತುಂಬಿ ಕೃಷ್ಣಾನದಿ ನೀರು ಜಿಲ್ಲೆಗೆ ಹರಿಸಲು ನಿರ್ಧಾರ ಕೈಗೊಳ್ಳಲು ಇದು ಸಕಾಲ.

ಗ್ಯಾರಂಟಿಯಿಲ್ಲ ಎತ್ತಿನಹೊಳೆ

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರದ ಬಯಲು ಸೀಮೆ ಜಿಲ್ಲೆಗಳಲ್ಲಿ ಕುಡಿಯುವ ನೀರನ್ನು ಒದಗಿಸುವ ಯೋಜನೆಯಾಗಿ 2012ರಲ್ಲಿ ಡಾ. ಎಂ.ವೀರಪ್ಪ ಮೊಯ್ಲಿ ಕೇಂದ್ರ ಸಚಿವರಾಗಿದ್ದಾಗ ಶಂಕುಸ್ಥಾಪನೆ ನೆರವೇರಿಸಿದ್ದ ಎತ್ತಿನಹೊಳೆ ಯೋಜನೆ, ಸಕಲೇಶಪುರದಲ್ಲಿಯೇ ಠಿಕಾಣಿ ಹೂಡಿದೆ. 8,000 ಕೋಟಿ ಆರಂಭಿಕ ಅಂದಾಜಿನಲ್ಲಿ ಆರಂಭವಾದ ಈ ಯೋಜನೆ ಪ್ರಸ್ತುತ 25,000 ಕೋಟಿ ರು.ಗಳಿಗೆ ಏರಿಕೆಯಾಗಿದ್ದು ಬಿಟ್ಟರೆ ಜಿಲ್ಲೆಗೆ ನೀರು ಮಾತ್ರ ಹರಿಯಲೇ ಇಲ್ಲ.

ಕೆರೆಗಳ ಪುನರುಜ್ಜೀವನ

ರಾಜ್ಯದಲ್ಲಿ ಅತಿ ಹೆಚ್ಚು ಅಂದರೆ ನಾಲ್ಕು ಸಾವಿರದ ಮುನ್ನೂರಕ್ಕೂ ಹೆಚ್ಚು ಕೆರೆಗಳು ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿವೆ. ಕೃಷಿಯ ಅಕ್ಷಯ ಪಾತ್ರೆಯಾದ ಕೆರೆಗಳ ಪುನರ್ಜೀವನಕ್ಕೆ ವಿಶೇಷ ಯೋಜನೆ ರೂಪಿಸಬೇಕಾಗಿದೆ.

ಪುಷ್ಪ ಕೃಷಿಗೆ ಬೇಕು ಉತ್ತೇಜನ

ಅತಿ ದೊಡ್ಡ ಹೂವಿನ ಮಾರುಕಟ್ಟೆ ಚಿಕ್ಕಬಳ್ಳಾಪುರದಲ್ಲಿದೆ.ಆದರೆ ಸ್ವಂತ ಸೂರಿಲ್ಲದೆ ನರಳುತ್ತಿದೆ. ಇಲ್ಲಿಂದ ದೇಶದ ನಾನಾ ಮೂಲೆ ಜತೆಗೆ ವಿದೇಶಗಳಿಗೂ ಗುಣಮಟ್ಟದ ಹೂವು ರಫ್ತು ಮಾಡುತ್ತಿದೆ. ಇದನ್ನು ಕಂಡ ಸರಕಾರ 150 ಕೋಟಿ ವೆಚ್ಚದಲ್ಲಿ ಹೈಟೆಕ್ ಹೂವಿನ ಮಾರುಕಟ್ಟೆ ಪಿಪಿಪಿ ಮಾದರಿಯಲ್ಲಿ ನಿರ್ಮಿಸಲು ಮುಂದಾಗಿದೆ.ಪಿಪಿಪಿ ಮಾದರಿ ಕೈಬಿಟ್ಟು ಸರಕಾರಿ ಸಹಭಾಗಿತ್ವದಲ್ಲಿಯೇ ಮಾರುಕಟ್ಟೆ ಮಾಡಲು ದಿಟ್ಟಕ್ರಮ ಕೈಗೊಳ್ಳುವುದೇ ಕಾದು ನೋಡಬೇಕಿದೆ.

- » ಜೂ.19ಕ್ಕೆ ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ
- » ಜಿಲ್ಲೆಯ ನಾಗರಿಕರ ನಿರೀಕ್ಷೆ ಈಡೇರಬಹುದೇ ?
- » ಪ್ರವಾಸಿ ತಾಣಗಳ ಅಭಿವೃದ್ಧಿಗೆ ಬೇಕು ಪ್ಯಾಕೇಜ್

ಪ್ರವಾಸೋದ್ಯಮಕ್ಕೆ ಒತ್ತು

ಬೆಂಗಳೂರಿಗೆ ಕೂಗಳತೆ ದೂರದಲ್ಲಿರುವ ಚಿಕ್ಕಬಳ್ಳಾಪುರ ಜಿಲ್ಲೆಯು ಪ್ರವಾಸೋದ್ಯಮ ಬೆಳವಣಿಗೆಗೆ ಹೇಳಿ ಮಾಡಿಸಿದ ತಾಣವಾಗಿದೆ. ವಿಶ್ವವಿಖ್ಯಾತ ನಂದಿ ಗಿರಿಧಾಮ, ಸ್ಕಂದಗಿರಿ, ಚನ್ನಗಿರಿ, ಬ್ರಹ್ಮಗಿರಿ, ದಿಬ್ಬಗಿರಿಗಳು ಚಾರಣ ಸ್ಥಳಗಳಾಗಿವೆ. ಈಶಾಧ್ಯಾನ ಕೇಂದ್ರವೂ ಪ್ರವಾಸಿಗರನ್ನು ಸೆಳೆಯುತ್ತಿದೆ. ಇಲ್ಲೆಲ್ಲಾ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಿದೆ.

3ನೇ ಹಂತದ ಶುದ್ಧೀಕರಣ

ಜಿಲ್ಲೆಯಲ್ಲಿ ಅಂತರ್ಜಲ ವೃದ್ಧಿಗೆ ಕಾರಣವಾಗಿರುವ ಹೆಚ್.ಎನ್.ವ್ಯಾಲಿ ಸಂಸ್ಕರಿತ ನೀರನ್ನು 3ನೇ ಹಂತದ ಶುದ್ಧಿಕರಣ ಮಾಡಲು 1000 ಕೋಟಿ ಅನುದಾನದ ಕೊರತೆಯಿದೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಜಾರಿಗೊಳಿಸಿರುವ ಈ ಯೋಜನೆಯನ್ನು ಜನರ ಆರೋಗ್ಯದ ಹಿತದೃಷ್ಟಿಯಿಂದ 3ನೇ ಹಂತದಲ್ಲಿ ಶುದ್ದೀಕರಿಸಿ ಹರಿಸಿದರೆ ಜನರ ಆಶೀರ್ವಾದ ಸದಾ ಸರಕಾರದ ಮೇಲಿರಲಿದೆ. ಬೆಂಗಳೂರು ವಿಭಾಗದ ಎಲ್ಲಾ ಜನಪ್ರತಿನಿಧಿಗಳು ಈ ವಿಚಾರದಲ್ಲಿ ಒಗ್ಗಟ್ಟು ಪ್ರದರ್ಶಿಸುವರೇ ಕಾದು ನೀಡಬೇಕಿದೆ.

ರೋಪ್‌ವೇ ಆಗುವುದೇ?

ಪರಿಸರವಾದಿಗಳ ಪ್ರತಿರೋಧದ ನಡುವೆಯೂ ನಂದಿ ಬೆಟ್ಟದ ತಪ್ಪಲಿನಲ್ಲಿ ರೋಪವೇ ಕಾಮಗಾರಿ ಚಾಲನೆಯಲ್ಲಿದೆ. ಸುಪ್ರಸಿದ್ಧ ಕನ್ನಡದ ನಟ ದಿವಂಗತ ಶಂಕರ್ ನಾಗ್ ಕನಸಿನ ಯೋಜನೆಯಾದ ರೋಪ್‌ವೇ ಈಡೇರಿದರೆ ನಂದಿಬೆಟ್ಟದ ಅಸ್ಮಿತೆಗೆ ಕಂಟಕ ಖಚಿತ ಎನ್ನುವುದು ಪರಿಸರವಾದಿಗಳ ಆತಂಕ. ಆದರೆ ಸರಕಾರ ಅಪಾಯ ಆಗದ ರೀತಿ ಈ ಯೋಜನೆ ಮಾಡಲಿದ್ದೇವೆ ಎನ್ನುತ್ತದೆ.

ಸಮಾಚಾರ ಸಣ್ಣದಲ್ಲ

ಅಪರಿಚಿತವಾಹನ ಡಿಕ್ಕಿ: ಪಾದಾಚಾರಿ ವ್ಯಕ್ತಿ ಸಾವು

ಚಿಂತಾಮಣಿ : ನಗರದ ಹೊರವಲಯದ ಶಿಡ್ಲಘಟ್ಟ ರಸ್ತೆಯ ತಿಮ್ಮಸಂದ್ರದ ಬಿವಿಎಂ ಕನ್ವೆಷನ್ ಹಾಲ್ ಬಳಿ ಬೆಳಗಿನ ಜಾವ ನಡೆದುಕೊಂಡು ಹೋಗುತ್ತಿದ್ದ ವೇಳೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಗ್ರಾಮಾಂತರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದೆ. ಗಾರೆ ಕೆಲಸಗಾರ ತಿಮ್ಮಸಂದ್ರದ ಆನಂದ್ (26) ಎಂದು ತಿಳಿದು ಬಂದಿದೆ. ಸುದ್ದಿ ತಿಳಿದ ತಕ್ಷಣವೇ112 ಪೋಲೀಸರು ಮತ್ತು ಗ್ರಾಮಾಂತರ ಠಾಣೆಯ ಸಬ್ ಇನ್ಸ್ಪೆಕ್ಟರ್ ನಾಗೇಂದ್ರ ಪ್ರಸಾದ್ ಭೇಟಿ ನೀಡಿಮುಂದಿನ ಕ್ರಮ ಕೈಗೊಂಡಿದ್ದಾರೆ.

ನಾರಾಯಣಗೌಡರದು ಬಹುಮುಖಿ ವ್ಯಕ್ತಿತ್ವ

ಅರಸೀಕೆರೆ: ಈ ನಾಡು ಕಂಡ ಕನ್ನಡಪರ ದಿಟ್ಟ ಹೋರಾಟಗಾರ ಕನ್ನಡ, ಕಲೆ, ಸಾಹಿತ್ಯ ಕ್ಷೇತ್ರದ ಪ್ರೋತ್ಸಾಹಕರಾದ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ನಾರಾಯಣಗೌಡರದು ಬಹುಮುಖಿ ವ್ಯಕ್ತಿತ್ವ ಎಂದು ಖ್ಯಾತ ವಕೀಲ ವಿವೇಕ್ ಬಣ್ಣಿಸಿದರು. ತಾ.ಕರವೇ ಘಟಕದ ವತಿಯಿಂದ ನಗರದ ಪಿಪಿ ವೃತ್ತದಲ್ಲಿ ಆಯೋಜಿಸಿದ್ದ ಕರವೇ ರಾಜ್ಯಾಧ್ಯಕ್ಷ ಟೀ ನಾರಾಯಣಗೌಡರ 58ನೇ ಜನ್ಮ ದಿನಾಚರಣೆಯಲ್ಲಿ ಮಾತನಾಡಿದರು. ಗಡಿ ಭಾಗದ ಕನ್ನಡಿಗರ ಮನೆ ಮನಗಳಲ್ಲಿ ನಾರಾಯಣಗೌಡರ ಪೋಟೋಗಳನ್ನು ಕಾಣಬಹುದು ಇಂಥ ಒಬ್ಬ ಧೀಮಂತ ಹೋರಾಟಗಾರನನ್ನು ಅರಸೀಕೆರೆ ರಾಜ್ಯಕ್ಕೆ ಕೊಡುಗೆಯಾಗಿ ನೀಡಿರುವುದು ತಾಲೂಕಿನ ಹೆಮ್ಮೆ ಎಂದರು. ಈ ವೇಳೆ ಸಾರ್ವಜನಿಕರಿಗೆ ಸಿಹಿ ಹಂಚಿ ನಂತರ ನಗರದ ಸರಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಿಸಲಾಯಿತು. ತಾ.ಕರವೇ ಅಧ್ಯಕ್ಷ ಕಿರಣ್ ಕುಮಾರ, ಜಿಲ್ಲಾ ಉಪಾಧ್ಯಕ್ಷ ಹೇಮಂತ್ ಕುಮಾರ್, ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್, ನಗರಸಭೆ ಸದಸ್ಯ ವೆಂಕಟಮುನಿ, ಬಾಣಾವರ ಲಕ್ಷ್ಮೀಶ್, ಲೋಕೇಶ್, ಸಂತೋಷ್, ರಘು, ಗಂಡಸಿ ಸಂಜೀವ, ಮಲ್ಲಿದೇವರಹಳ್ಳಿ ಮಂಜುನಾಥ್, ಸುನೀಲ್ ನಾಯಕ್, ಮೂರ್ತಿ ಇದ್ದರು.

ಹಂದನಕೆರೆ ಶ್ರೀಮಠದ ರುದ್ರಾರಾಧ್ಯರಿಗೆ ಪ್ರಶಸ್ತಿ

ಚಿಕ್ಕನಾಯಕನಹಳ್ಳಿ: ಪರಿವರ್ತನ ಪ್ರಭ ದಿನಪತ್ರಿಕೆ ನೀಡುತ್ತಿರುವ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಹಂದನಕೆರೆ ಗುರುಗಿರಿಸಿದ್ದೇಶ್ವರ ಸ್ವಾಮಿಯವರ ನಿಜೈಕ್ಯ ಕ್ಷೇತ್ರದ ಶ್ರೀ ವೇದಮೂರ್ತಿ ರುದ್ರಾರಾಧ್ಯರಿಗೆ ನೀಡಲಾಯಿತು.ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಪ್ತ ಸಹಾಯಕ ರಾಜಶೇಖರ್ ಚಿತ್ರ ನಿರ್ದೇಶಕ ಶ್ಯಾಮ್ ಪರಿವರ್ತನಪ್ರಭ ಪತ್ರಿಕೆ ನಿರ್ದೇಶಕ ಪ್ರಶಾಂತ ಗೋಯಾಂಕ, ನಿರ್ದೇಶಕ ಸತ್ಯಕುಮಾರ್, ಸುಪ್ರೀತ್ ಅವರ ಉಪಸ್ಥಿತಿಯಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಲಾಯಿತು. ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಯೋಗೀಶ್, ಈಶ್ವರ್, ಮುರುಗೇಶ್, ಕಾಂತರಾಜು, ನಾಗರಾಜ್, ಜಗ್ಗಾಲ ಕ್ರಾಂತಿ, ರಘು, ರಂಗನಾಥ್, ಹರ್ಷ, ರಾಜಣ್ಣ ಪತ್ರಕರ್ತರುಗಳಾದ ಧನಂಜಯ್, ಮಲ್ಲಿಕಾರ್ಜುನಸ್ವಾಮಿ, ಚೇತನ್ ಜಾನಕಲ್, ಅವರಿಗೆ ಸಿದ್ದಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಲಿಕೆಗೆ ಕಾಲೇಜಿನಲ್ಲಿ ಉತ್ತಮ ವಾತಾವರಣ

ಮಧುಗಿರಿ: ವಿದ್ಯಾರ್ಥಿಗಳಿಗೆ ಉತ್ತಮವಾದ ಕಲಿಕೆಗೆ ಮಧುಗಿರಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅನುಕೂಲಕರ ವಾತಾವರಣ ಇದೆ ಎಂದು ಪ್ರಾಂಶುಪಾಲ ಕೆ.ಎಸ್.ಕುಮಾರ್ ತಿಳಿಸಿದರು. ಪಟ್ಟಣದ ಪ್ರಥಮ ದರ್ಜೆ ಕಾಲೇಜಿನಲ್ಲಿ ದಾಖಲಾತಿ ಪ್ರಕ್ರಿಯೆ ಸಮಯದಲ್ಲಿ ಮಾತನಾಡಿದರು. ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಹಾಗೂ ವಿಧಾನ ಪರಿಷತ್ ಸದಸ್ಯರಾದ ಆರ್. ರಾಜೇಂದ್ರ, ರಾಜಣ್ಣ ರವರು ಶೈಕ್ಷಣಿಕವಾಗಿ ಕಾಲೇಜಿಗೆ ಬೇಕಾಗಿರುವ ಎಲ್ಲ ಸಹಕಾರ ನೀಡುತ್ತಿದ್ದಾರೆ ಎಂದು ಉಪನ್ಯಾಸಕ ಬಿ.ಮಂಜುನಾಥ್ ಸ್ಮರಿಸಿಕೊಂಡರು. ವಿದ್ಯಾರ್ಥಿಗಳಿಗೆ ಆತ್ಮೀಯವಾಗಿ ಬರಮಾಡಿಕೊಂಡು ದಾಖಲಾತಿ ಪ್ರಕ್ರಿಯೆ ಮಾಡುತ್ತಿರುವ ಕಾಲೇಜಿನ ಸಿಬ್ಬಂದಿಗೆ ಶುಭವಾಗಲಿ ಎಂದು ಪತ್ರಕರ್ತ ಜಲಾಲ್ ಬಾಷ ಹೇಳಿದರು. ಕಾಲೇಜು ಉಪನ್ಯಾಸಕರಾದ ಡಾ. ವಿಜಯಲಕ್ಷ್ಮಿ, ಮುಜ್ಹಾಬ್ ಫರೀನ್, ಸಿದ್ದೇಶ್ವರ, ಸಂಜೀವಮೂರ್ತಿ,ಸಿಬ್ಬಂದಿಯಾದ ಎನ್. ಚಂದ್ರಕಲಾ, ಯೋಗೀಶ್ ಕುಮಾರ್,ಪಾವಗಡ ವಿದ್ಯಾರ್ಥಿ ಎನ್. ಕಾರ್ತಿಕ್ ಇತರರು ಇದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಪ್ರದೀಪ್ ಈಶ್ವರ್ } ಶಾಸಕ

ನಂದಿಬೆಟ್ಟದಲ್ಲಿ ನಡೆಯುವ ಸಚಿವ ಸಂಪುಟ ಸಭೆ ಈ ಭಾಗದ ಜಿಲ್ಲೆಗಳ ಅಭಿವೃದ್ಧಿ ಮತ್ತು ಸಮಸ್ಯೆಗಳ ಕುರಿತು ಬೆಳಕು ಚೆಲ್ಲುವ ನಿರೀಕ್ಷೆ ಇದೆ. ಈಗಾಗಲೇ ಹಲವು ವಿಷಯಗಳನ್ನು ಪಟ್ಟಿ ಮಾಡಿ ಮುಖ್ಯಮಂತ್ರಿಗಳಿಗೆ ನೀಡಲಾಗಿದ್ದು, ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳುವ ನಿರೀಕ್ಷೆ ಇದೆ.

ಶಾಸಕ ಪ್ರದೀಪ್ ಈಶ್ವರ್‌ರಿಂದ ಸಚಿವ ಸಂಪುಟ ಸಭೆಯ ಸ್ಥಳದ ಸಿದ್ಧತೆ ಪರಿಶೀಲನೆ

ಜೂ.19ಕ್ಕೆ ಸಂಪುಟ ಸಭೆ ಜಿಲ್ಲೆ ಅಭಿವೃದ್ಧಿಗೆ ಬೆಳಕು

ಚಿಕ್ಕಬಳ್ಳಾಪುರ: ಇದೇ ತಿಂಗಳ 19 ರಂದು ನಂದಿಗಿರಿಧಾಮದಲ್ಲಿ ನಡೆಯಲಿರುವ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಚಿಕ್ಕಬಳ್ಳಾಪುರ,ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಸಮಸ್ಯೆ ಮತ್ತು ಅಭಿವೃದ್ಧಿ ಕುರಿತು ಬೆಳಕು ಚೆಲ್ಲುವ ವಿಶ್ವಾಸವಿದೆ ಎಂದು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಪ್ರದೀಪ್ ಈಶ್ವರ್ ಅವರು ತಿಳಿಸಿದರು.

ಇದೇ 19 ರಂದು ನಂದಿಗಿರಿಧಾಮದಲ್ಲಿ ರಾಜ್ಯ ಸಚಿವ ಸಂಪುಟ ಸಭೆ ನಡೆಯಲಿದ್ದು ಶುಕ್ರವಾರ ಅಧಿಕಾರಿಗಳ ತಂಡದೊಂದಿಗೆ ನಂದಿಗಿರಿಧಾಮಕ್ಕೆ ಭೇಟಿ ನೀಡಿ ಪೂರ್ವ ಸಿದ್ದತೆಗಳ ಕುರಿತು ಪರಿಶೀಲನೆ ನಡೆಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ನಂದಿಗಿರಿಧಾಮದಲ್ಲಿ ನಡೆಯುತ್ತಿರುವ ಸಚಿವ ಸಂಪುಟ ಸಭೆ ಈ ಭಾಗಕ್ಕೆ ಹೆಮ್ಮೆಯ ವಿಷಯವಾಗಿದೆ. ಮಹಾತ್ಮ ಗಾಂಧೀಜಿ ಭೇಟಿ ನೀಡಿರುವ ಜೊತೆಗೆ ಪ್ರತಿಷ್ಠಿತ ಸಾರ್ಕ್ ಸಮ್ಮೇಳನವೂ ನಡೆದಿರುವ ಇತಿಹಾಸವನ್ನು ನಂದಿಗಿರಿಧಾಮ ಹೊಂದಿದೆ.

ಸಚಿವ ಸಂಪುಟ ಸಭೆ ಈ ಭಾಗದ ಜಿಲ್ಲೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಈಗಾಗಲೇ ಹಲವು ವಿಷಯಗಳನ್ನು ಪಟ್ಟಿ ಮಾಡಿ ಮುಖ್ಯಮಂತ್ರಿಗಳಿಗೆ ನೀಡಲಾಗಿದ್ದು, ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳುವ ನಿರೀಕ್ಷೆ ಇದೆ.

ನಂದಿಬೆಟ್ಟದಲ್ಲಿ ಶಾಸಕ ಪ್ರದೀಪ್ ಈಶ್ವರ್ ಸಂಪುಟಸಭೆ ನಡೆಯುವ ಸ್ಥಳದ ಪರಿಶೀಲನೆ ನಡೆಸಿದರು.

150 ಕೋಟಿ ರೂಪಾಯಿ ವೆಚ್ಚದ ಹೂವಿನ ಮಾರುಕಟ್ಟೆ, ರೋಪ್‌ವೇ ಗೆ ಅನುಮೋದನೆ, ಈ ಭಾಗದ ಜಕ್ಕಲಮಡುಗು ಜಲಾಶಯದ ಅಣೆಕಟ್ಟೆಯ ಎತ್ತರವನ್ನು ಏರಿಸಿ ನೀರಿನ ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸುವುದು ಹಾಗೂ ನಂದಿಗಿರಿಧಾಮವನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲು ಶಿಫಾರಸು ಮಾಡುವ ವಿಷಯಗಳನ್ನು ಮುಖ್ಯಮಂತ್ರಿಗಳ ಮುಂದಿಡಲಾಗಿದೆ. ನಂದಿಗಿರಿಧಾಮ ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ಪಡೆದರೆ ವಿದೇಶಿಯರ ಗಮನ ಈ ಕಡೆಗೆ ಸೆಳೆದು ಬಂಡವಾಳ ಹರಿದು ಬಂದು ಅನುಕೂಲವಾಗಲಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ, ಐಜಿಪಿ ಲಾಭೂರಾಮ್, ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಜಿ.ಟಿ. ನಿಟ್ಟಾಲಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಅಪರ ಜಿಲ್ಲಾಧಿಕಾರಿ ಡಾ. ಎನ್. ಭಾಸ್ಕರ್ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ತುಮಕೂರು ವಿವಿಯಲ್ಲಿ ಸುಂದರ ಕ್ಯಾಂಪಸ್ ಅಂಗಳ

ತುಮಕೂರು: ಎಲ್ಲೆಲ್ಲೂ ವಿದ್ಯಾರ್ಥಿಗಳ ದಂಡು... ಸುತ್ತೆಲ್ಲ ಹಸಿರು ಗಿಡಮರ. ಆಗಾಗ ತುಂತುರು ಮಳೆ. ವಿಜ್ಞಾನ ಕೇಂದ್ರದ ಆವರಣದಲ್ಲಿ ಕುತೂಹಲದ ಕಣ್ಣುಗಳು. ತುಂಬಿತುಳುಕಿದ ಶೈಕ್ಷಣಿಕ ಭವನ. ವಿದ್ಯಾರ್ಥಿನಿಲಯ, ಕಲಾಭವನಗಳಲ್ಲಿ ಚುರುಕಿನ ಓಡಾಟ. ವಾವ್, ಎಷ್ಟೊಂದು ಸುಂದರ ವಾತಾವರಣ. ಎಲ್ಲರ ಬಾಯಲ್ಲೂ ಅದೇ ಉದ್ಗಾರ.

ಇದು ಬಿದರಕಟ್ಟೆಯಲ್ಲಿರುವ ತುಮಕೂರು ವಿಶ್ವವಿದ್ಯಾನಿಲಯದ ನೂತನ ಕ್ಯಾಂಪಸ್ ಜ್ಞಾನಸಿರಿಯಲ್ಲಿ ಕಂಡುಬಂದ ದೃಶ್ಯ.

ನೂತನ ಕ್ಯಾಂಪಸ್‌ನ ಪರಿಚಯ ಮಾಡಿಕೊಡುವ ಉದ್ದೇಶದಿಂದ ನಗರ ಕ್ಯಾಂಪಸ್‌ನಲ್ಲಿರುವ ಎಲ್ಲ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಗೆ ಜ್ಞಾನಸಿರಿಗೆ ಭೇಟಿನೀಡುವ ಅವಕಾಶವನ್ನು ಕಲ್ಪಿಸಲಾಗಿತ್ತು.

ಪ್ರಶಾಂತ ಪರಿಸರದಲ್ಲಿ ನೆಲೆಸಿರುವ ಈ ಕ್ಯಾಂಪಸ್‌ನಲ್ಲಿ ವಿದ್ಯಾಭ್ಯಾಸಕ್ಕೆ ಪೂರಕ ವಾತಾವರಣ ಇದೆ. ಎಲ್ಲ ಕಾಮಗಾರಿಗಳು ಬೇಗನೆ ಪೂರ್ಣಗೊಳ್ಳಲಿ. ಜ್ಞಾನಸಿರಿ ಕ್ಯಾಂಪಸ್‌ನಲ್ಲಿ ಹೊಸದಾಗಿ ನೂರಾರು ಗಿಡಗಳನ್ನು ನೆಟ್ಟಿರುವುದು ನೋಡಿ ಸಂತೋಷವಾಯಿತು. ಕಲಿಕೆಗೆ ಇದು ಆದರ್ಶ ಪರಿಸರದಂತಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಏಕಾಗ್ರತೆ ಹಾಗೂ ಧನಾತ್ಮಕ ಮನೋಭಾವ ಇಲ್ಲಿ ಖಂಡಿತ ಮೂಡುತ್ತದೆ ಎಂದು ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದರು.

ಸ್ನಾತಕೋತ್ತರ ವಿಭಾಗಗಳ ನಿರ್ದೇಶಕ ಡಾ. ಸುರೇಶ್ ಮಾತನಾಡಿ, ಹೊಸ ಕ್ಯಾಂಪಸ್ ಹಂತಹಂತವಾಗಿ ಬೆಳೆಯುತ್ತಿದೆ. ಕೆಲವೇ ವರ್ಷಗಳಲ್ಲಿ ಇದೊಂದು ಜಾಗತಿಕ ಗುಣಮಟ್ಟದ ಮಾದರಿ ವಿವಿಯಾಗಿ ಬೆಳೆಯುವುದರಲ್ಲಿ ಸಂಶಯವಿಲ್ಲ. ವಿದ್ಯಾರ್ಥಿನಿಲಯಗಳು, ಸುಸಜ್ಜಿತ ಪ್ರಯೋಗಾಲಯಗಳು ನಿರ್ಮಾಣಗೊಂಡಿವೆ. ಇಪ್ಪತ್ತಕ್ಕೂ ಹೆಚ್ಚು ಕೆಎಸ್‌ಆರ್‌ಟಿಸಿ ಬಸ್‌ಗಳು ಸಂಚರಿಸುತ್ತಿವೆ. ಇದನ್ನೊಂದು ಸುಸಜ್ಜಿತ ಕ್ಯಾಂಪಸ್ ಆಗಿ ಬೆಳೆಸಲು ಕುಲಪತಿಗಳಾದ ಪ್ರೊ. ಎಂ. ವೆಂಕಟೇಶ್ವರಲು ಅವರು ಅಪಾರ ಕಾಳಜಿ ವಹಿಸುತ್ತಿದ್ದಾರೆ ಎಂದರು.

ತುಮಕೂರು ವಿವಿ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಎಚ್. ಕೆ. ಶಿವಲಿಂಗಸ್ವಾಮಿ. ವಿಜ್ಞಾನ ವಿಭಾಗಗಳಿಗೆ ಈ ಹಸಿರು ಕ್ಯಾಂಪಸ್ ಬಹುವಾಗಿ ಒಪ್ಪುತ್ತದೆ. ಆರಂಭಿಕ ಹಂತದಲ್ಲಿ ಒಂದಷ್ಟು ಅಡೆತಡೆಗಳು ಎದುರಾಗುವುದು ಸಹಜ. ಆದರೆ ಮುಂದೆ ಎಲ್ಲವೂ ಸರಿಹೋಗಲಿವೆ ಎಂದರು.

ಶಿಕ್ಷಕರ ಭವನಕ್ಕೆ ಅನುದಾನ ನೀಡಲು ಮನವಿ

ತುಮಕೂರು: ಜಿಲ್ಲಾ ಶಿಕ್ಷಕರ ಭವನ ಕಟ್ಟಡ ನಿರ್ಮಾಣಕ್ಕೆ ಅನುದಾನ ಕೋರಿ ನಗರ ಶಾಸಕರಾದ ಜಿ.ಬಿ. ಜ್ಯೋತಿ ಗಣೇಶ್ ಅವರಿಗೆ ಗುರುಭವನ ಸಮಿತಿ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಮನವಿ ಸಲ್ಲಿಸಲಾಯಿತು.

ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಸಕಲ ಸಿದ್ಧತೆಯನ್ನು ಮಾಡಿಕೊಂಡಿದ್ದು, ಇದರಿಂದ ಜಿಲ್ಲೆಯ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು, ಪದವಿ ಪೂರ್ವ ಕಾಲೇಜು ಉಪನ್ಯಾಸಕರು ಸೇರಿ ಸುಮಾರು 10 ರಿಂದ 15 ಸಾವಿರ ಶಿಕ್ಷಕರು ಈ ಭವನದ ಪ್ರಯೋಜನ ಪಡೆಯಲಿದ್ದಾರೆ. ಸುಮಾರು 9 ಕೋಟಿ ವೆಚ್ಚದಲ್ಲಿ ನವೀನ ಮಾದರಿಯ ಸುಸಜ್ಜಿತ ಕಟ್ಟಡ ನಿರ್ಮಿಸಲು ಅಂದಾಜಿಸಲಾಗಿದೆ. ಈಗಾಗಲೇ ಕಟ್ಟಡದ ನೀಲ ನಕಾಶೆಯನ್ನು ತಯಾರಿಸಿ, ಮಹಾನಗರ ಪಾಲಿಕೆಯಿಂದ ಅನುಮತಿ ಪಡೆಯಲಾಗಿದೆ. ಅನುದಾನ ಕೋರಿ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಜಿಲ್ಲೆಯ ಜನಪ್ರತಿನಿಧಿಗಳಿಗೆ ಮನವಿ ಮಾಡಲಾಗಿದೆ ಎಂದು ಶಿಕ್ಷಕರು ಮನವಿ ಪತ್ರದಲ್ಲಿ ವಿವರಿಸಿದ್ದಾರೆ.

ಜಿಲ್ಲೆಯ ಶಿಕ್ಷಕರು, ಜನಪ್ರತಿನಿಧಿಗಳು, ದಾನಿಗಳು ತನುಮನ ಧನ ಸಹಾಯ ನೀಡುವ ಮೂಲಕ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಗುರುಭವನ ಸಮಿತಿಯ ಉಪಾಧ್ಯಕ್ಷ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಪರಶಿವ ಮೂರ್ತಿ ಮನವಿ ಮಾಡಿದ್ದಾರೆ. ಮನವಿ ಸ್ವೀಕರಿಸಿದ ಶಾಸಕ ಜ್ಯೋತಿ ಗಣೇಶ್ ಅವರು ಜಿಲ್ಲಾ ಶಿಕ್ಷಕರ ಭವನ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿಸುವ ಸಂಬಂಧ ಸಕಾರಾತ್ಮಕವಾಗಿ ಸ್ಪಂದಿಸಿದರು.

ಗುರುಭವನ ಸಮಿತಿಯ ಕಾರ್ಯದರ್ಶಿಗಳಾದ ಜಿ.ಆರ್. ಜಯರಾಮ್, ಉಪಾಧ್ಯಕ್ಷ ಉಮೇಶ್, ಶಿಕ್ಷಕರ ಸಂಘದ ಅಧ್ಯಕ್ಷ ಪಿ.ಜಿ. ತಿಮ್ಮೇಗೌಡ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಡಿ. ಜಯಲಕ್ಷ್ಮಮ್ಮ, ಆರ್. ಮಂಜಣ್ಣ, ಸಹ ಕಾರ್ಯದರ್ಶಿ ಪಿ.ಎನ್. ದಿನೇಶ್, ಡಿ. ಪದ್ಮರಾಜು, ತಾ.ಗೌರವಾಧ್ಯಕ್ಷ ಶಿವಕುಮಾರ್ ಉಪಸ್ಥಿತರಿದ್ದರು.

ಮಾದಿಗರ ಅಭಿವೃದ್ಧಿಗೆ ಒಳ ಮೀಸಲು ಮದ್ದು

ಹಿಂದುಳಿದ ವರ್ಗಗಳ ಹರಿಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ನೀಡುವ ವಿಶ್ವಾಸವಿದೆ ಎಂದು ಮಾಜಿ ಸಚಿವ ಎಚ್.ಆಂಜನೇಯ ಹೇಳಿದರು.

ಚಿಕ್ಕಬಳ್ಳಾಪುರ: ಮಾದಿಗ ಸಮುದಾಯ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯಾಗಲು ಒಳಮೀಸಲಾತಿಯೊಂದೇ ದಾರಿ. ಹಿಂದುಳಿದ ವರ್ಗಗಳ ಹರಿಕಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ನೀಡುವ ವಿಶ್ವಾಸವಿದೆ ಎಂದು ಮಾಜಿ ಸಚಿವ ಎಚ್.ಆಂಜನೇಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾದಿಗ ಸಮುದಾಯ ಅತ್ಯಂತ ಹಿಂದುಳಿದಿದ್ದು, ಎಲ್ಲ ರೀತಿಯಲ್ಲಿಯೂ ಸಂಕಷ್ಟ ಎದುರಿಸಿದೆ. ರಾಜ್ಯದಲ್ಲಿ ಕಳೆದ 35 ವರ್ಷಗಳಿಂದ ಸಮುದಾಯಕ್ಕೆ ನ್ಯಾಯವಾಗಿ ದೊರೆಯಬೇಕಾದ ಮೀಸಲಾತಿ ಸೌಲಭ್ಯ ದೊರೆಯುತ್ತಿಲ್ಲ.

ಹಾಗಾಗಿ ಒಳಮೀಸಲಾತಿ ಕಲ್ಪಿಸಿಕೊಡಲು ಮನವಿ ಮಾಡಲಾಗಿದ್ದು, ಜನಸಂಖ್ಯೆಗೆ ಅನುಗುಣವಾಗಿ ವರ್ಗೀಕರಣಕ್ಕೆ ಸಿಎಂ ಮುಂದಾಗಲಿದ್ದಾರೆ ಎಂದರು.

ಹಲವು ಕಾನೂನು ತೊಡಕುಗಳಿದ್ದ ಕಾರಣ ರಾಜ್ಯದಲ್ಲಿ ಒಳಮೀಸಲಾತಿ ಜಾರಿಯಾಗಲಿಲ್ಲ, ಆಂಧ್ರಪ್ರದೇಶದಲ್ಲಿ ಮಂದಕೃಷ್ಣ ಮಾದಿಗ ಅವರು ಒಳ ಮೀಸಲಾತಿಯ ಜನಕರಾಗಿದ್ದು, ಅವರ ಹೋರಾಟದಿಂದ ಇಂದು ಒಳ ಮೀಸಲಾತಿ ಸಿಗುತ್ತಿದೆ. ಸುಪ್ರೀಂ ಆದೇಶ ಬಂದ ನಂತರ ಸಮೀಕ್ಷೆ ನಡೆಯುತ್ತಿದೆ. ಉದ್ಯೋಗ ಬಡ್ತಿಯಲ್ಲಿ ಮೀಸಲಾತಿ ನೀಡುತ್ತಿಲ್ಲ, ಆದರೂ ತೊಂದರೆಯಿಲ್ಲ, ಆದರೆ ಪ್ರಸ್ತುತ ಉದ್ಯೋಗ ಸಿಗಬೇಕಾದವರಿಗೆ ಒಳ ಮೀಸಲಾತಿ ಜಾರಿಯಾಗಬೇಕು ಎಂದರು.

ಪ್ರಸ್ತುತ ನಡೆಯುತ್ತಿರುವ ಜಾತಿ ಸಮೀಕ್ಷೆಯಲ್ಲಿ ಮಾದಿಗ ಎಂದೇ ನಮೂದಿಸಲು ಸಮುದಾಯಕ್ಕೆ ಅರಿವು ಮೂಡಿಸಲಾಗಿದೆ. ರಾಜ್ಯಾದ್ಯಂತ ಪ್ರವಾಸ ಮಾಡಲಾಗಿದೆ, ಒಬ್ಬ ಸದಸ್ಯನೂ ಸಮೀಕ್ಷೆಯಿಂದ ಹೊರಗುಳಿಯಬಾರದು ಎಂದರು.

ಮಾಜಿ ಶಾಸಕರಾದ ಎಸ್.ಎಂ.ಮುನಿಯಪ್ಪ, ಕೆ.ವಿ.ಅನಸೂಯಮ್ಮ, ಮುಖಂಡ ಬಾಲಕುಂಟಹಳ್ಳಿ ಗಂಗಾಧರ್, ದೇವರಾಜ್, ತಿರುಮಳಪ್ಪ, ಕುಂದಲಗುರ್ಕಿ ಮುನೀಂದ್ರ, ಪತ್ರೇನಹಳ್ಳಿ ಕೃಷ್ಣ, ಆನಂದ್, ಅಣ್ಣಮ್ಮ ಇದ್ದರು.

ವೇಮಗಲ್ ಇಂದಿರಾ ಕ್ಯಾಂಟೀನ್ ಲೋಕಾರ್ಪಣೆ

ಕೋಲಾರ: ಜಿಲ್ಲಾ ಕೇಂದ್ರದಲ್ಲಿರುವ ಇಂದಿರಾ ಕ್ಯಾಂಟೀನ್ ಅವ್ಯವಸ್ಥೆಯನ್ನು ಸರಿಪಡಿಸಲು ಶಾಸಕ ಕೊತ್ತೂರು ಮಂಜುನಾಥ್ ಅವರು ಮುಂದಾಗಬೇಕೆಂದು ವಿಧಾನಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಆಗ್ರಹಿಸಿದರು.

ತಾಲೂಕಿನ ವೇಮಗಲ್‌ನಲ್ಲಿ ಇಂದಿರಾ ಕ್ಯಾಂಟೀನ್ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿ, ಕೋಲಾರದ ಇಂದಿರಾ ಕ್ಯಾಂಟೀನ್ ಸರಿಯಾಗಿ ನಡೆಯದೆ ಜನತೆಗೆ ತೊಂದರೆಯಾಗಿದ್ದು ಭ್ರಷ್ಟಾಚಾರ ನಡೆದಿದೆಯೆಂಬ ಆರೋಪವೂ ಇರುವುದರಿಂದಾಗಿ ಈ ಸಂಬಂಧ ಶಾಸಕರು ಅಗತ್ಯ ಕ್ರಮ ಕೈಗೊಳ್ಳಬೇಕು. ಸರಿಯಾದ ಊಟೋಪಚಾರ ಒದಗಿಸಲು ಮುಂದಾಗಬೇಕೆಂದರು. ವೇಮಗಲ್‌ನಲ್ಲಿ ಬಡವರಿಗೆ ವಸತಿ ಸೌಲಭ್ಯ ಒದಗಿಸಬೇಕಿದ್ದು ಸ್ಲಂಬೋರ್ಡ್‌ನಿಂದ ಅಗತ್ಯ ಇರುವ ಕಡೆ ಮನೆ ಕಟ್ಟಿ ಕೊಡಬೇಕು. ಚೌಡದೇನಹಳ್ಳಿ ಮತ್ತು ಶೆಟ್ಟಿಹಳ್ಳಿ ಗ್ರಾಮಪಂಚಾಯತಿಗೆ ಚುನಾವಣೆ ನಡೆಸಬೇಕು, ಬೆಸ್ಕಾಂ ಎಇಇ ಕಚೇರಿಯನ್ನು ವೇಮಗಲ್‌ನಲ್ಲಿ ತೆರೆಯಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಕೊತ್ತೂರು ಮಂಜುನಾಥ್, ವೇಮಗಲ್‌ನಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿ ತೆರೆಯಲು ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದು ಶೀಘ್ರದಲ್ಲೇ ಕಚೇರಿ ಆರಂಭ ಆಗುತ್ತದೆ. ವೇಮಗಲ್‌ನ್ನು ತಾಲೂಕು ಕೇಂದ್ರವಾಗಿಸಲು ಎರಡು ವರ್ಷದ ಹಿಂದೆಯೇ ಪ್ರಯತ್ನ ನಡೆಸಲಾಗಿದ್ದು 2028ರಲ್ಲಿ ಆದೇಶ ಹೊರಡಿಸುವುದಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡರು ಭರವಸೆ ಕೊಟ್ಟಿದ್ದಾರೆ ಎಂದರು.

ಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ವಿ.ಎಂ.ಮುನಿಯಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉದಯಕುಮಾರ್, ಮುಖಂಡ ನಾಗನಾಳ ಸೋಮಣ್ಣ, ಚಂಜಿಮಲೆ ರಮೇಶ್, ಉರುಟಿಅಗ್ರಹಾರ ಚೌಡರೆಡ್ಡಿ, ಮೈಲಾಂಡಹಳ್ಳಿ ಮುರಳಿ, ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಎಸ್.ಎಂ.ವೆಂಕಟೇಶ್, ಕೌಶಲ್ಯ ಅಭಿವೃದ್ಧಿ ಅಧಿಕಾರಿ ಶ್ರೀನಿವಾಸನ್, ಹೆಲ್ತ್ ಇನ್ಸ್‌ಪೆಕ್ಟರ್ ದೀಪಾ ಇದ್ದರು.



ವೇಮಗಲ್ ಇಂದಿರಾ ಕ್ಯಾಂಟಿನ್‌ನಲ್ಲಿ ಗಣ್ಯರು ಊಟ ಮಾಡಿದರು.

ವರ್ತೂರು ಪ್ರಕಾಶ್ ಮೆದುಳು ಕೆಟ್ಟಿದೆ: ಕೊತ್ತೂರು

ಕಾಮಗಾರಿಗಳಲ್ಲಿ ಶೇ.25 ಕಮೀಷನ್ ಪಡೆಯುತ್ತಿದ್ದಾರೆ ಎಂದು ಆರೋಪ ಮಾಡಿರುವ ಮಾಜಿ ಸಚಿವ ವರ್ತೂರ್ ಪ್ರಕಾಶ್ ಬಾಯಿಗೂ ಮೆದುಳಿಗೂ ಸಂಪರ್ಕ ತಪ್ಪಿ ಹೋಗಿದೆ ಎಂದು ಶಾಸಕ ಕೊತ್ತೂರು ಮಂಜುನಾಥ್ ಲೇವಡಿ ಮಾಡಿದರು. ವರ್ತೂರ್ ಪ್ರಕಾಶ್ ಗುತ್ತಿಗೆದಾರರ ಬಳಿ ಮೊದಲೇ ಕಮೀಷನ್ ಪಡೆದುಕೊಂಡು ಕೆಲಸ ಕೊಟ್ಟಿದ್ದು ಸರಕಾರ ಬಿದ್ದು ಹೋದ ನಂತರ ನಾನು ಅದೇ ಕಂಟ್ರಾಕ್ಟರ್‌ಗಳನ್ನು ಮುಂದುವರೆಸಿದ್ದೇನೆ. ನನಗೆ ತಿಂಗಳಿಗೆ ಒಂದು ಕೋಟಿಗೂ ಹೆಚ್ಚಿನ ಬಾಡಿಗೆ ಬರುತ್ತದೆ. ಮಗನಿಗೆ ಕೋಟಿ ರೂ. ಕಾರು ಕೊಡಿಸಿದ್ದೇನೆ. ನಾನು ಶ್ರೀಮಂತನಾಗಿದ್ದು ಕಮೀಷನ್‌ನಿಂದ ಬದುಕಬೇಕಿಲ್ಲ. ಇನ್ನಾದರೂ ಪ್ರಕಾಶ್ ಸುಳ್ಳು ಹೇಳುವುದನ್ನು ಬಿಟ್ಟು ಸತ್ಯವಂತನಾಗಿ ನಡೆಯಬೇಕು. ಇದಲ್ಲವನ್ನೂ ಕೋಲಾರಮ್ಮ ನೋಡಿಕೊಳ್ಳುತ್ತಾಳೆ ಎಂದು ಶಾಸಕ ಕೊತ್ತೂರು ಮಂಜುನಾಥ್ ಹೇಳಿದರು.

ಬಸ್ ನಿಲ್ದಾಣದ ಮಳಿಗೆ ತೆರವು:ಆತ್ಮಹತ್ಯೆಗೆ ಯತ್ನ

ರಾಮನಗರ: ನಗರದ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಲ್ಲಿನ ಎರಡು ಅಂಗಡಿ ಮಳಿಗೆಗಳನ್ನು ತೀವ್ರ ವಿರೋಧದ ನಡುವೆಯೂ ಬಲವಂತವಾಗಿ ಮುಚ್ಚಿಸಲು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮುಂದಾಗಿದ್ದರಿಂದ ಮಳಿಗೆಯ ಸಿಬ್ಬಂದಿ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಶುಕ್ರವಾರ ನಡೆಯಿತು.

ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿರುವ ಉಮೇಶ್ ಎಂಬುವರಿಗೆ ಸೇರಿದ ಎರಡು ಅಂಗಡಿ ಮಳಿಗೆಗಳನ್ನು ಖಾಲಿ ಮಾಡುವಂತೆ ಅಧಿಕಾರಿಗಳು ನೋಟೀಸ್ ನೀಡಿದ್ದರೆನ್ನಲಾಗಿದ್ದು, ಅದನ್ನು ಪ್ರಶ್ನಿಸಿ ಅಂಗಡಿ ಗುತ್ತಿಗೆ ಪಡೆದಿರುವವರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಈ ನಡುವೆ ಸ್ಥಳೀಯ ಪೊಲೀಸರಿಗೂ ವಿಚಾರ ತಿಳಿಸದೆ, ಏಕಾಏಕಿ ಶುಕ್ರವಾರ ಸಂಜೆ ತಮ್ಮ ಸಿಬ್ಬಂದಿ ಕರೆತಂದ ಅಧಿಕಾರಿಗಳು ಅಂಗಡಿಯಲ್ಲಿದ್ದ ಸಿಬ್ಬಂದಿ ಹೊರದಬ್ಬಿ ಬೀಗ ಜಡಿಯಲು ಯತ್ನಿಸಿದರು.

ಒಂದು ಅಂಗಡಿಗೆ ಬೀಗ ಜಡಿದ ಅಧಿಕಾರಿಗಳು, ಇನ್ನೊಂದು ಅಂಗಡಿ ಮುಚ್ಚಲು ಯತ್ನಿಸಿ ವಿಫಲವಾದರು. ಈ ವೇಳೆ ವಾಗ್ವಾದ, ತಳ್ಳಾಟ, ನೂಕಾಟ ಮಿತಿಮೀರಿ ಕೊನೆಗೆ ಪೊಲೀಸರು ಸ್ಥಳಕ್ಕೆ ಆಗಮಿಸಿ ವಿವಾದವನ್ನು ತಾತ್ಕಾಲಿಕವಾಗಿ ಶಮನಗೊಳಿಸಿದರು. ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಸದ್ಯ ಯಥಾಸ್ಥಿತಿ ಮುಂದುವರೆಸುವಂತೆ ಎರಡೂ ಕಡೆಯವರಿಗೆ ತಿಳಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಆತ್ಮಹತ್ಯೆಗೆ ಯತ್ನಿಸಿದ ಅಭಿಷೇಕ್ ಎಂಬುವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ಪೊಲೀಸರ ಮಧ್ಯಪ್ರವೇಶ:

ಅಂಗಡಿ ತೆರವುಗೊಳಿಸುವ ಘಟನೆ ಸಂಬಂಧ ಪೊಲೀಸರಿಗೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿರಲಿಲ್ಲ, ತಮ್ಮ ಇಲಾಖೆಯ ಪಡೆಯನ್ನೇ ಬಳಸಿಕೊಂಡು ಬೀದಿಜಗಳದಂತೆ ತೆರವುಗೊಳಿಸಲು ಮುಂದಾಗಿದ್ದು ಘಟನೆ ತೀವ್ರತೆ ಪಡೆಯಲು ಕಾರಣವಾಯಿತು. ಗಲಾಟೆ ವಿಚಾರ ತಿಳಿದು ಆಗಮಿಸಿದ ಪೊಲೀಸರು ಎರಡೂ ಕಡೆಯವರನ್ನು ಸಮಾಧಾನಪಡಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಒಂದು ಮಳಿಗೆ ಬಂದ್ ಮಾಡಲಾಗಿದ್ದು ಇನ್ನೊಂದು ಮಳಿಗೆಯನ್ನು ಹಾಗೆಯೇ ಬಿಡಲಾಗಿದೆ. ಸೋಮವಾರ ಪ್ರಕರಣ ವಿಚಾರಣೆಗೆ ಬರಲಿದ್ದು, ಮುಂದೇನಾಗುವುದೋ ಕಾದುನೋಡಬೇಕಾಗಿದೆ.

ಬಸ್ ನಿಲ್ದಾಣದ ಅಂಗಡಿ ಮುಚ್ಚಲು ಯತ್ನಿಸಿದ ವೇಳೆ ತಳ್ಳಾಟ, ನೂಕಾಟ ನಡೆಯಿತು.

ನಂದಿ ಕಾಲೇಜಿನಲ್ಲಿ ಯೋಗ ತರಬೇತಿ

ಚಿಕ್ಕಬಳ್ಳಾಪುರ: 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತವಾಗಿ ಶುಕ್ರವಾರ ನಂದಿ ಸರಕಾರಿ ವೈದ್ಯಕೀಯ ಮತ್ತು ಸಂಶೋಧನ ಕಾಲೇಜು, ಅರೂರು ಇಲ್ಲಿ ಯೋಗ ತರಬೇತಿ ನಡೆಸಲಾಯಿತು. ಅಲ್ಲಿನ ಅಧಿಕಾರಿಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ತರಬೇತಿಯಲ್ಲಿ ಪಾಲ್ಗೊಂಡಿದ್ದರು. ನಂದಿ ವೈದ್ಯಕೀಯ ಕಾಲೇಜಿನ ಎಚ್‌ಒಡಿ ಡಾ.ಸುರೇಶ್ ನಾಯಕ್, ಸಹಾಯಕ ಪ್ರಾಧ್ಯಾಪಕರಾದ ಡಾ. ಮನೋಜ್ ಹಾಗೂ ತಜ್ಞ ವೈದ್ಯರಾದ ಡಾ. ಅನಿಲ್ ಕುಮಾರ್, ತರಬೇತುದಾರರಾದ ಮುನಿರಾಜು ಕಾರ್ಯಕ್ರಮವನ್ನು ನಡೆಸಿಕೊಟ್ಟರು ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ. ಸುಂದರ್ ರಾಜ್ ತಿಳಿಸಿದ್ದಾರೆ.



ಯೋಗ ದಿನಾಚರಣೆಯ ಪ್ರಯುಕ್ತ ಯೋಗ ತರಬೇತಿ ಶಿಬಿರ ನಡೆಯಿತು.

ಹೇಮಾವತಿ ವಿವಾದ: ಸಭೆ ಕರೆದು ಚರ್ಚಿಸಿ ಬಗೆಹರಿಸಿ

ರಾಮನಗರ: ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಫೀಡರ್ ಯೋಜನೆ ವಿವಾದವನ್ನು ಮುಖ್ಯಮಂತ್ರಿ ಮತ್ತು ಉಪಮುಖ್ಯ ಮಂತ್ರಿಗಳು ತುಮಕೂರು ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಗಳ ಜನಪ್ರತಿ ನಿಧಿಗಳು, ರೈತ ಮುಖಂಡರ ಸಭೆ ನಡೆಸಿ ಸೌಹಾರ್ದತೆಯಿಂದ ಬಗೆಹರಿಸಿಕೊಳ್ಳಬೇಕಿದೆ ಎಂದು ಸಂಸದ ಡಾ.ಸಿ.ಎನ್ .ಮಂಜುನಾಥ್ ತಿಳಿಸಿದರು.

ನಗರದ ಆರ್ ವಿಸಿಎಸ್ ಕಲ್ಯಾಣ ಮಂಟಪದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಭಯ ಜಿಲ್ಲೆಗಳ ಜನರಿಗೆ ಅನ್ಯಾಯವಾಗದಂತೆ ಮುಖ್ಯಮಂತ್ರಿಗಳು ಕೂಡಲೇ ನೀರಾವರಿ ತಜ್ಞರನ್ನು ಒಳಗೊಂಡಂತೆ ಜನಪ್ರತಿನಿಧಿಗಳು ಮತ್ತು ರೈತ ಮುಖಂಡರ ಸಭೆ ಕರೆದು ಸಾಧಕ ಬಾಧಕಗಳ ಬಗ್ಗೆ ಅವಲೋಕಿಸಿ ಸರಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದರು.

ತುಮಕೂರು ಮತ್ತು ಮಾಗಡಿ ತಾಲೂಕಿನ ಜನರು ಬೇರೆ ದೇಶದವರಲ್ಲ. ಅಕ್ಕಪಕ್ಕ ಜಿಲ್ಲೆಯವರು. ಮಾಗಡಿ ಭಾಗದ ಜನರು ಕುಡಿಯುವ ನೀರನ್ನು ಕೇಳುತ್ತಿದ್ದಾರೆ ತಪ್ಪಿಲ್ಲ. ಹಾಗಂತ ಗುಬ್ಬಿ, ತುರುವೇಕೆರೆ, ಕುಣಿಗಲ್ ಭಾಗದ ಜನರಿಗೂ ಅನ್ಯಾಯವಾಗಬಾರದು. ಆ ರೀತಿ ಸೌಹಾರ್ದತೆಯಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸಂಸದ ಡಾ. ಮಂಜುನಾಥ್ ಮಾತನಾಡಿದರು.

ಉಭಯ ಜಿಲ್ಲೆಗಳ ನಾಯಕರ ಟೀಕೆಗಳು ಸಮಸ್ಯೆಗೆ ಪರಿಹಾರ ಅಲ್ಲ. ಸುಮ್ಮನೆ ಭಾವನಾತ್ಮಕವಾಗಿ ಮಾತುಗಳನ್ನಾಡಿದರೆ ಪ್ರಯೋಜನ ಆಗುವುದಿಲ್ಲ. ಈ ಯೋಜನೆ ಜಾರಿ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷರನ್ನು ಭೇಟಿಯಾಗಿ ವಾಸ್ತವ ಸ್ಥಿತಿ ಮನವರಿಕೆ ಮಾಡಿಕೊಡುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಈ ಎಕ್ಸ್ ಪ್ರೆಸ್ ಕೆನಾಲ್ ನಲ್ಲಿ 70ನೇ ಕಿ.ಮೀನಲ್ಲಿ ಡೈವರ್ಷನ್ ಮಾಡಲಾಗುತ್ತಿದೆ. ಹೀಗಾಗಿ ಸಾಂಪ್ರದಾಯಿಕ ಕಾಲುವೆಗಳಲ್ಲಿ ನೀರು ಹರಿದರೆ ಸೋರಿಕೆಯಾಗುತ್ತದೆ. ಆದ್ದರಿಂದ ಪೈಪ್ ಗಳನ್ನು ಅಳವಡಿಸುವುದರಿಂದ ನೀರು ಮಾಗಡಿಯ ಕೊನೆ ಭಾಗಕ್ಕೆ ತಲುಪುತ್ತದೆ ಎಂದು ಮಂಜುನಾಥ್ ಹೇಳಿದರು.

ಮಾಜಿ ಸಚಿವ ಎನ್.ಮಹೇಶ್ ಮಾತನಾಡಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾರತವನ್ನು ಜಗತ್ತಿನಲ್ಲೇ ನಾಲ್ಕನೇ ಅತಿ ದೊಡ್ಡ ಆರ್ಥಿಕ ದೇಶವನ್ನಾಗಿ ಮಾಡಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎನ್. ಮಹೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ಮುಖಂಡರಾದ ಗೌತಮ್ ಗೌಡ, ಪ್ರಸಾದ್ ಗೌಡ, ಜೆಡಿಎಸ್ ತಾಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ದಿಶಾ ಸಮಿತಿ ಸದಸ್ಯ ನರಸಿಂಹಮೂರ್ತಿ ಇದ್ದರು.

195 ಆಶಾ ಮೆಂಟರ್ಸ್ ಸೇವೆಯಿಂದ ಬಿಡುಗಡೆ

ಕೋಲಾರ: ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿದ್ದ 195 ಆಶಾ ಮೆಂಟರ್‌ಗಳನ್ನು ಕರ್ತವ್ಯದಿಂದ ಮುಕ್ತಗೊಳಿಸಿ ಸರಕಾರದ ಅಧೀನ ಕಾರ್ಯದರ್ಶಿ ಪವಿತ್ರ ಆದೇಶ ಹೊರಡಿಸಿದ್ದಾರೆ. 2008ರಿಂದ ಆರೋಗ್ಯ ಅಭಿಯಾ ನದಲ್ಲಿ ಕೆಲಸ ಮಾಡುತ್ತಿದ್ದು ಆಶಾ ಕಾರ್ಯಕರ್ತೆಯರಿಗೆ ತರಬೇತಿ, ಮೇಲ್ವಿಚಾರಣೆ, ಆಶಾ ಪೋರ್ಟಲ್ ನಿರ್ವಹಣೆ, ಪ್ರೋತ್ಸಾಹಧನ ಪಾವತಿ ಮಾಡುತ್ತಿದ್ದರು. ಸೇವೆಯಿಂದ ಬಿಡುಗಡೆಗೊಂಡ ಆಶಾ ಮೆಂಟರ್‌ಗಳನ್ನು ಎನ್‌ಎಚ್‌ಎಂನಲ್ಲಿ ಖಾಲಿ ಇರುವ ಶುಶ್ರೂಷಕರ ಹುದ್ದೆಗೆ ಗುತ್ತಿಗೆ ನೌಕರರಾಗಿ ಆದ್ಯತೆ ಮೇಲೆ ಪರಿಗಣಿಸಿ ನೇಮಕ ಮಾಡಿಕೊಳ್ಳಬೇಕೆಂದು ತಿಳಿಸಿದ್ದಾರೆ. ಆಶಾ ಮೆಂಟರ್‌ಗಳ ಕೆಲಸವನ್ನು ಇನ್ನು ಮುಂದೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ಆರೋಗ್ಯ ಸಂದರ್ಶಕರು, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಉಪ ಕೇಂದ್ರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿ ನಿರ್ವಹಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ. 16 ವರ್ಷದಿಂದ ಸೇವೆ ಸಲ್ಲಿಸುತ್ತಿರುವ ನಮಗೆ ವಯಸ್ಸಾಗಿದ್ದು ಇದೀಗ ಏಕಾಏಕಿ ಕೆಲಸದಿಂದ ಕಿತ್ತೊಗೆದರೆ ಜೀವನ ನಡೆಸುವುದು ಹೇಗೆ? ಹೀಗಾಗಿ ನಾವು ಕಾನೂನು ಹೋರಾಟ ನಡೆಸುತ್ತೇವೆ ಎಂದು ಆಶಾ ಮೆಂಟರ್ ಒಬ್ಬರು ತಿಳಿಸಿದ್ದಾರೆ. ಇತ್ತೀಚೆಗೆ ಆರ್‌ಬಿಎಸ್‌ಕೆ ಸಿಬ್ಬಂದಿಯನ್ನು ಸೇವೆಯಿಂದ ಮುಕ್ತಗೊಳಿಸಲಾಗಿದ್ದು, ಇದೇ ಮಾದರಿಯಲ್ಲಿ ಆಶಾ ಸುಗಮಗಾರರನ್ನೂ ಸಹಾ ಕೆಲಸದಿಂದ ತೆಗೆಯಲಾಗಿದೆ ಎಂದು ಇಲಾಖಾ ಸಿಬ್ಬಂದಿ ಪ್ರತಿಕ್ರಿಯಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಜನವರಿಯಲ್ಲಿ ಕಿವೀಸ್ ವಿರುದ್ಧ ಸರಣಿ

ದೆಹಲಿ: 2026ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿ ಪ್ರಾರಂಭವಾಗುವ ಮೊದಲು ನ್ಯೂಜಿಲೆಂಡ್ ವಿರುದ್ಧ ಬಿಳಿ ಚೆಂಡಿನ ಸರಣಿಯನ್ನು ಭಾರತ ಆಡಲಿದೆ. ಈ ಸರಣಿಯು ಜನವರಿ 11ರಿಂದ ಜನವರಿ 30ರ ವರೆಗೆ ನಡೆಯಲಿದ್ದು, ಮೂರು ಏಕದಿನ ಪಂದ್ಯಗಳು ಮತ್ತು ಐದು ಟಿ20 ಪಂದ್ಯಗಳು ಇರಲಿವೆ. ಐಸಿಸಿ ಟಿ20 ವಿಶ್ವಕಪ್ 2026 ಟೂರ್ನಿಯು ಫೆಬ್ರವರಿಯಿಂದ ಪ್ರಾರಂಭವಾಗಲಿದ್ದು, ಫೈನಲ್ ಪಂದ್ಯ ಮಾರ್ಚ್ 8ರಂದು ನಡೆಯಲಿದೆ. ಈ ಟೂರ್ನ ಮೆಂಟ್‌ನಲ್ಲಿ ಒಟ್ಟು 20 ತಂಡಗಳು ಭಾಗವಹಿಸಲಿವೆ. ವಿಶ್ವಕಪ್‌ಗೆ ಮೊದಲು ಭಾರತದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಅವಕಾಶ ನ್ಯೂಜಿಲೆಂಡ್‌ಗೂ ಸಿಗಲಿದೆ. ಕಿವೀಸ್ ತಂಡವು ಭಾರತದ ವಿರುದ್ಧದ ಈ ಸರಣಿಯಲ್ಲಿ ಅದ್ಭುತ ಪ್ರದರ್ಶನ ನೀಡಬಲ್ಲ ಅನೇಕ ಬಲಿಷ್ಠ ಆಟಗಾರರಿಗೆ ಅವಕಾಶವನ್ನು ನೀಡಲಿದೆ.

ಶ್ರೇಯಸ್ ಅಯ್ಯರ್ ಪಡೆಗೆ ಸೋಲು

ಮುಂಬೈ: ಶ್ರೇಯಸ್ ಅಯ್ಯರ್ ನಾಯಕತ್ವದ ತಂಡ ಎರಡು ವಾರಗಳ ಅಂತರದಲ್ಲಿ ಎರಡು ಫೈನಲ್ ಟೂರ್ನಿಯಲ್ಲಿ ಸೋಲು ಕಂಡಿದೆ. ಗುರುವಾರ ರಾತ್ರಿ

ನಡೆದ ಟಿ20 ಮುಂಬೈ ಲೀಗ್' ಟೂರ್ನಿಯ ಫೈನಲ್ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ಸಾರಥ್ಯದ ಸೋಬೋ ಮುಂಬೈ ಫಾಲ್ಕನ್ಸ್ ತಂಡವು ಮುಂಬೈ ಸೌತ್ ಸೆಂಟ್ರಲ್ ಮರಾಠ ರಾಯಲ್ಸ್ ತಂಡದ ವಿರುದ್ಧ 5 ವಿಕೆಟ್ ಅಂತರದ ಸೋಲು ಕಂಡಿದೆ. ಇದಕ್ಕೂ ಮುನ್ನ ಜೂನ್ 3ರಂದು ನಡೆದಿದ್ದ ಐಪಿಎಲ್ ಫೈನಲ್‌ನಲ್ಲಿ ಅಯ್ಯರ್ ನೇತೃತ್ವದ ಪಂಜಾಬ್ ಕಿಂಗ್ಸ್ ತಂಡ ಆರ್‌ಸಿಬಿ ವಿರುದ್ಧ ಸೋಲು ಕಂಡಿತ್ತು ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದಿದಿದ್ದ ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಫಾಲ್ಕನ್ಸ್ ತಂಡ ಮಯೂರೇಶ್ ತಂಡೇಲ್ ಅವರ ಅಜೇಯ ಅರ್ಧಶತಕದ ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 157 ರನ್ ಗಳಿಸಿತ್ತು. ಗುರಿ ಬೆನ್ನಟ್ಟಿದ ರಾಯಲ್ಸ್ ಪಡೆ 19.2 ಓವರ್‌ಗಳಲ್ಲಿ 5 ವಿಕೆಟ್‌ಗೆ 158 ರನ್ ಬಾರಿಸಿ ಗೆಲುವು ಸಾಧಿಸಿತು. ಚಿನ್ಮಯ್ ರಾಜೇಶ್ ಸುತಾರ್ 53 ರನ್ ಬಾರಿಸಿ ಮರಾಠ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ವಿರಾಮ
ಪ್ರತಿ ಭಾನುವಾರ

ಐಡೆನ್ ಮಾರ್ಕ್ರಂ ಆಕರ್ಷಕ ಶತಕ | ಟೆಂಬ ಬಹುಮಾ ಅರ್ಧ ಶತಕ

ಐತಿಹಾಸಿಕ ಗೆಲುವಿನತ್ತ ದ. ಆಫ್ರಿಕಾ

ಲಾರ್ಡ್ಸ್: ಐಡೆನ್ ಮಾರ್ಕ್ರಂ ಬಾರಿಸಿದ ಆಕರ್ಷಕ ಶತಕ ಮತ್ತು ನಾಯಕ ಟೆಂಬ ಬಹುಮಾ ಸಿಡಿಸಿದ ಅರ್ಧ ಶತಕದ ನೆರವಿನಿಂದ ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ವಿರುದ್ಧದ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಐತಿಹಾಸಿಕ ಗೆಲುವಿನತ್ತ ದಿಟ್ಟ ಹೆಜ್ಜೆ ಇರಿಸಿದೆ. ಶುಕ್ರವಾರ ದಿನದಾಂತ್ಯಕ್ಕೆ ದ. ಆಫ್ರಿಕಾ ತಂಡವು 2 ವಿಕೆಟ್ ನಷ್ಟಕ್ಕೆ 213 ರನ್ ಗಳಿಸಿದ್ದು, ನಾಲ್ಕನೇ ದಿನವಾದ ಶನಿವಾರ ಗೆಲುವನ್ನು ಒಲಿಸಿಕೊಳ್ಳಲು ದ. ಆಫ್ರಿಕಾಕ್ಕೆ ಕೇವಲ 69 ರನ್‌ಗಳ ಅಗತ್ಯವಿದೆ.

ದ್ವಿತೀಯ ಇನ್ನಿಂಗ್ಸ್‌ನಲ್ಲಿ ಒಟ್ಟು 8 ವಿಕೆಟ್ ನಷ್ಟಕ್ಕೆ 144 ರನ್ ಗಳಿಸಿ, ಶುಕ್ರವಾರ ಬ್ಯಾಟಿಂಗ್ ಮುಂದುವರಿಸಿದ ಆಸ್ಟ್ರೇಲಿಯಾ ತಂಡಕ್ಕೆ ಮಿಚೆಲ್ ಸ್ಟಾರ್ಕ್ ಸ್ವಲ್ಪಮಟ್ಟಿಗೆ ಆಧಾರಸ್ಥಂಭವಾದರು. ಆದರೆ ನೇಥನ್ ಲಿಯಾನ್ ಕೇವಲ 2 ರನ್ ಗಳಿಸಿ ರಬಾಡ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯೂ ಬಲೆಗೆ ಬಿದ್ದು ತಮ್ಮ ವಿಕೆಟ್ ಕಳೆದುಕೊಂಡರು.

ಆ ಬಳಿಕ ಮಿಚೆಲ್ ಸ್ಟಾರ್ಕ್ ಮತ್ತು ಹೇಜೆಲ್‌ವುಡ್ ಮಧ್ಯೆ ಸ್ವಲ್ಪ ಹೊತ್ತು ಜತೆಯಾಟ ಸಾಗಿತು. ಹೇಜಲ್‌ವುಡ್ 17 ರನ್ ಗಳಿಸಿ ಮರ್ಕ್ರಮ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. 58 ರನ್ ಗಳಿಸಿದ ಮಿಚೆಲ್ ಸ್ಟಾರ್ಕ್ ಅಜೇಯರಾಗಿ ಉಳಿದರು.

ದ್ವಿತೀಯ ಇನ್ನಿಂಗ್ಸ್‌ನಲ್ಲಿ 281 ರನ್‌ಗಳ ಗುರಿ ಪಡೆದ ದ. ಆಫ್ರಿಕಾ ತಂಡವು ಉತ್ತಮ ಆರಂಭವನ್ನು ಪಡೆಯುವಲ್ಲಿ ವಿಫಲವಾಯಿತು. ತಂಡದ ಮೊತ್ತ 9 ರನ್ ಆಗುವಷ್ಟರಲ್ಲಿ ಕೇವಲ 6 ರನ್ ಗಳಿಸಿದ್ದ ರಿಕೆಲ್ಟನ್ ವಿಕೆಟ್ ಅನ್ನು ಕಳೆದುಕೊಂಡಿತು. ಆದರೆ ಆ ಬಳಿಕ ಸ್ವಲ್ಪ ಹೊತ್ತು ಮರ್ಕ್ರಮ್ ಮತ್ತು ವಿಯಾನ್ ಮುಲ್ಡರ್ ನಡುವೆ ಎರಡನೇ ವಿಕೆಟ್ ಜತೆಯಾಟ ಸಾಗಿತು. 27 ರನ್ ಗಳಿಸಿದ್ದ ಮುಲ್ಡರ್, ಸ್ಟಾರ್ಕ್ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಆ ಬಳಿಕ ಐಡೆನ್ ಮರ್ಕ್ರಮ್ ಮತ್ತು ದ. ಆಫ್ರಿಕಾ ನಾಯಕ ತೆಂಬಾ ಬಹುಮಾ ಮಧ್ಯೆ ಮೂರನೇ ವಿಕೆಟ್ ಜತೆಯಾಟ ಉತ್ತಮ ವಾಗಿ ಸಾಗಿತು. ಆಸೀಸ್ ಬೌಲರ್‌ಗಳನ್ನು ಮರ್ಕ್ರಮ್ ಸಮರ್ಥವಾಗಿ ಎದುರಿಸಿದರು.

ಆಟಗಾರರಿಂದ ಶ್ರದ್ಧಾಂಜಲಿ

ಅಹಮದಾಬಾದ್‌ನಲ್ಲಿ ಗುರುವಾರ ಏರ್ ಇಂಡಿಯಾ ವಿಮಾನ ಅಪಘಾತದಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಭಾಗವಾಗಿ ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್‌ನ ಮೂರನೇ ದಿನದಾಟದ ಆರಂಭದಲ್ಲಿ ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾದ ಆಟಗಾರರು ಒಂದು ನಿಮಿಷ ಮೌನ ಆಚರಿಸಿದ್ದಾರೆ. ಅದೇ ರೀತಿ ಶುಕ್ರವಾರ ಬೆಳಿಗ್ಗೆ ಅಭ್ಯಾಸ ಪಂದ್ಯ ಆಡಲಾರಂಭಿಸಿದ ಭಾರತದ ಹಿರಿಯರ ತಂಡ ಮತ್ತು ಭಾರತ-ಎ ತಂಡದ ಆಟಗಾರರು ಒಂದು ನಿಮಿಷ ಮೌನ ಆಚರಿಸಿ, ತೋಳಿಗೆ ಕಪ್ಪು ಪಟ್ಟಿಗಳನ್ನು ಧರಿಸಿ ಮೈದಾನಕ್ಕಿಳಿದರು.

ಸ್ಕಾಟ್ಲೆಂಡ್ ವಿರುದ್ಧ ಮ್ಯಾಕ್ಸ್ ಒಡೌಡ್ ಅಜೇಯ 158 ರನ್

ನೆದರ್ಲೆಂಡ್‌ಗೆ ದಾಖಲೆಯ ಜಯ

ಸ್ಕಾಟ್ಲೆಂಡ್: ಐಸಿಸಿ ಪುರುಷರ ಕ್ರಿಕೆಟ್ ವಿಶ್ವಕಪ್ ಲೀಗ್-2 ಏಕದಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ವಿರುದ್ಧ ಗೆದ್ದು, ನೆದರ್ಲೆಂಡ್ ಹೊಸ ಇತಿಹಾಸ ನಿರ್ಮಿಸಿದೆ. ನಾಯಕ ಮ್ಯಾಕ್ಸ್ ಒಡೌಡ್ ಅವರು ಅಜೇಯ 158 ರನ್‌ಗಳ ನೆರವಿನಿಂದ ನೆದರ್ಲೆಂಡ್ ಈ ಸಾಧನೆಯನ್ನು ಮಾಡಿದೆ. ಅವರು ತಮ್ಮ ಇನ್ನಿಂಗ್ಸ್‌ನಲ್ಲಿ 130 ಎಸೆತಗಳನ್ನು ಎದುರಿಸಿದ್ದರು. ಅದರಲ್ಲಿ 13 ಬೌಂಡರಿಗಳು ಮತ್ತು 4 ಸಿಕ್ಸರ್‌ಗಳೂ ಒಳಗೊಂಡಿದ್ದವು. ಮ್ಯಾಕ್ಸ್ ಒಡೌಡ್ ಅವರ ಬಿರುಸಿನ ಬ್ಯಾಟಿಂಗ್‌ನಿಂದಾಗಿ, ನೆದರ್ಲ್ಯಾಂಡ್ಸ್ ತಂಡವು ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಮೂರನೇ ಅತಿದೊಡ್ಡ ರನ್ ಗುರಿ ಬೆಂಬತ್ತಿ ಗೆದ್ದಿತು.

ಸ್ಕಾಟ್ಲೆಂಡ್ ತಂಡವು ಮೊದಲು ಬ್ಯಾಟ್ ಮಾಡಿ ನಿಗದಿತ 50 ಓವರ್‌ಗಳಲ್ಲಿ 6 ವಿಕೆಟ್‌ಗಳ ನಷ್ಟಕ್ಕೆ 369 ರನ್ ಗಳಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ, ನೆದರ್ಲೆಂಡ್ ತಂಡವು ಇನ್ನೂ 4 ಎಸೆತಗಳು ಬಾಕಿ ಇರುವಾಗ 374 ರನ್ ಗಳಿಸುವ ಮೂಲಕ ಪಂದ್ಯವನ್ನು ಗೆದ್ದುಕೊಂಡಿತು.

ದಕ್ಷಿಣ ಆಫ್ರಿಕಾ ತಂಡವು ಏಕದಿನ ಕ್ರಿಕೆಟ್‌ನಲ್ಲಿ ಅತ್ಯಧಿಕ ಗುರಿಯನ್ನು ಸಾಧಿಸಿದ ದಾಖಲೆಯನ್ನು ಹೊಂದಿದೆ. ದಕ್ಷಿಣ ಆಫ್ರಿಕಾ 2006 ರಲ್ಲಿ ಆಸ್ಟ್ರೇಲಿಯಾ ವಿರುದ್ಧ 435 ರನ್‌ಗಳ ಗುರಿಯನ್ನು ಸಾಧಿಸುವ ಮೂಲಕ ಸಂಚಲನವನ್ನು ಸೃಷ್ಟಿಸಿತ್ತು, ಬಳಿಕ 2016ರಲ್ಲಿ ಮತ್ತೊಮ್ಮೆ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ 372 ರನ್‌ಗಳ ಗುರಿಯನ್ನು ಬೆಂಬತ್ತಿ ಗೆದ್ದಿತು. ಆದರೆ ಈಗ ನೆದರ್ಲೆಂಡ್ 370 ರನ್‌ಗಳ ಗುರಿಯನ್ನು ಸಾಧಿಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದೆ. ಸ್ಕಾಟ್ಲೆಂಡ್ ಪರ ಮುನ್ಸೆ 191 ರನ್ ಗಳಿಸುವ ಮೂಲಕ ಅದ್ಭುತ ಪ್ರದರ್ಶನ ನೀಡಿದರು. ಅವರು 14 ಬೌಂಡರಿ ಮತ್ತು 11 ಸಿಕ್ಸರ್ ಗಳನ್ನು ಬಾರಿಸಿ 150 ಎಸೆತಗಳನ್ನು ಎದುರಿಸಿದರು, ಅವರ ಶತಕದಿಂದಾಗಿ ಸ್ಕಾಟ್ಲೆಂಡ್ ತಂಡ 369 ರನ್ ಗಳಿಸಿತ್ತು.

ದಿಢೀರ್ ತವರಿಗೆ ಮರಳಿದ ಗಂಭೀರ್

ಲಂಡನ್: ಇಂಗ್ಲೆಂಡ್ ಪ್ರವಾಸದಲ್ಲಿರುವ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಟೆಸ್ಟ್ ಸರಣಿ ಆರಂಭಕ್ಕೂ ಮುನ್ನವೇ ಕೌಟುಂಬಿಕ ಪರಿಸ್ಥಿತಿಯ ತುರ್ತು ಕಾರಣಕ್ಕೆ ಭಾರತಕ್ಕೆ ಮರಳಿದ್ದಾರೆ. ಗಂಭೀರ್ ಅವರ ತಾಯಿಗೆ ಹೃದಯಾಘಾತವಾದ ಕಾರಣ ಅವರು ದಿಢೀರ್ ತವರಿಗೆ ಮರಳಿದ್ದಾರೆ ಎಂದು ತಿಳಿದುಬಂದಿದೆ.

ಗೌತಮ್ ಅವರ ತಾಯಿ ಸೀಮಾ ಗಂಭೀರ್



ಜೂನ್ 11ರಿಂದ ಹೃದಯಾಘಾತದಿಂದ ಬಳಲುತ್ತಿದ್ದಾರೆ, ಆದ್ದರಿಂದ ಗಂಭೀರ್ ಅವರು ಇಂಗ್ಲೆಂಡ್ ಪ್ರವಾಸವನ್ನು ಅರ್ಧದಲ್ಲೇ ಬಿಟ್ಟು ತವರಿಗೆ ಮರಳಿದ್ದಾರೆ. ಸದ್ಯ ಗಂಭೀರ್ ತಾಯಿ ದೆಹಲಿಯ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಲೀಡ್ಸ್‌ನ ಹೆಡಿಂಗ್ಲಿಯಲ್ಲಿ ನಡೆಯುವ ಮೊದಲ ಟೆಸ್ಟ್‌ಗೆ ಕೇವಲ ಮೂರು ದಿನಗಳ ಮೊದಲು, ಜೂನ್ 17 ರಂದು ಗಂಭೀರ್ ತಂಡವನ್ನು ಸೇರಲಿದ್ದಾರೆ. ಈ ಹಿಂದೆ ಆಸ್ಟ್ರೇಲಿಯಾ ವಿರುದ್ಧದ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ ವೇಳೆಯೂ ಗಂಭೀರ್ ಅವರು ತನ್ನ ತಾಯಿಯ ಅಸೌಖ್ಯ ಕಾರಣ ದಿಢೀರ್ ಆಗಿ ತವರಿಗೆ ಮರಳಿದ್ದರು.

ಟೆಸ್ಟ್ ಕ್ರಿಕೆಟ್‌ನಿಂದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ರವಿಚಂದ್ರನ್ ಅಶ್ವಿನ್ ಅವರ ನಿವೃತ್ತಿಯ ನಂತರ ಭಾರತದ ಮೊದಲ ಪ್ರವಾಸ ಇದಾಗಿದ್ದು, ನೂತನ ನಾಯಕ ಶುಭಮನ್ ಗಿಲ್ ಮತ್ತು ಕೋಚ್ ಗಂಭೀರ್‌ಗೆ ಮಹತ್ವದ ಮತ್ತು ಸವಾಲಿನ ಸರಣಿಯಾಗಿದೆ.

ವಿಶ್ವ ಟೆಸ್ಟ್ ಫೈನಲ್‌ನಲ್ಲಿ 10ನೇ ವಿಕೆಟ್ ಜತೆಯಾಟ

ಸ್ಟಾರ್ಕ್-ಹೇಜಲ್‌ವುಡ್ ದಾಖಲೆ

ಲಾರ್ಡ್ಸ್: ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾದ ವೇಗಿಗಳಾದ ಮಿಚೆಲ್ ಸ್ಟಾರ್ಕ್ ಮತ್ತು ಜೋಶ್ ಹೇಜಲ್‌ವುಡ್ 10ನೇ ವಿಕೆಟ್‌ಗೆ 59 ರನ್ ಜತೆಯಾಟ ನಡೆಸುವ ಮೂಲಕ ಬರೋಬ್ಬರಿ 50 ವರ್ಷದ ದಾಖಲೆಯೊಂದನ್ನು ಮುರಿದು ವಿಶ್ವ ದಾಖಲೆಯನ್ನು ತಮ್ಮ ಹೆಸರಿಗೆ ಬರೆದಿದ್ದಾರೆ.

ಲಾರ್ಡ್ಸ್ ಮೈದಾನದಲ್ಲಿ ನಡೆಯುತ್ತಿರುವ ದಕ್ಷಿಣ ಆಫ್ರಿಕಾ ಎದುರಿನ ಈ ಪಂದ್ಯದ ದ್ವಿತೀಯ ಇನ್ನಿಂಗ್ಸ್‌ನ ಮೂರನೇ ದಿನದಾಟವಾದ ಶುಕ್ರವಾರ ಮಿಚೆಲ್ ಸ್ಟಾರ್ಕ್ ಮತ್ತು ಜೋಶ್ ಹೇಜಲ್‌ವುಡ್ 10ನೇ ವಿಕೆಟ್‌ಗೆ 59 ರನ್ ಜತೆಯಾಟ ನಡೆಸುವ ಐಸಿಸಿ ಟೂರ್ನಿಯ ಫೈನಲ್ ಪಂದ್ಯದಲ್ಲಿ ಅತ್ಯಧಿಕ ಜತೆಯಾಟ ನಡೆಸಿದ ಜೋಡಿ ಎನಿಸಿತು. ಇದಕ್ಕೂ ಮುನ್ನ ಈ ದಾಖಲೆ ಆಸ್ಟ್ರೇಲಿಯಾದವರೇ ಆದ ಡೆನ್ನಿಸ್ ಲಿಲ್ಲಿ, ಜೆಫ್ ಥಾಮ್ಸನ್ ಹೆಸರಿನಲ್ಲಿತ್ತು. ಈ ಜೋಡಿ 1975ರಲ್ಲಿ ಇದೇ ಮೈದಾನದಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ವಿಂಡೀಸ್ ವಿರುದ್ಧ 41 ರನ್ ಜತೆಯಾಟ ನಡೆಸಿತ್ತು.

ಬಹುಮಾನದ ಒಟ್ಟು ಮೊತ್ತ 622 ಕೋಟಿಗೆ ಏರಿಕೆ

ವಿಂಬಲ್ಡನ್ ವಿಜೇತರಿಗೆ 135 ಕೋಟಿ ಬಹುಮಾನ

ಲಂಡನ್: ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಶಿಪ್‌ನ ಬಹುಮಾನ ಹಣದ ಮೊತ್ತವನ್ನು ದಾಖಲೆಯ 622 ಕೋಟಿ ರು.ಗೆ (53.5 ದಶಲಕ್ಷ ಪೌಂಡ್) ಹೆಚ್ಚಿಸಲಾಗಿದೆ. ಸಿಂಗಲ್ಸ್ ಚಾಂಪಿಯನ್ನರು ಸುಮಾರು 135 ಕೋಟಿ ಬಹುಮಾನ ಮೊತ್ತ ಸಂಪಾದಿಸಲಿದ್ದಾರೆ ಎಂದು ಆಲ್ ಇಂಗ್ಲೆಂಡ್ ಕ್ಲಬ್ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಒಟ್ಟು ಬಹುಮಾನ ಮೊತ್ತ ಕಳೆದ ವರ್ಷಕ್ಕಿಂತ ಸುಮಾರು 41 ಕೋಟಿಯಷ್ಟು ಹೆಚ್ಚು ಆಗಿದೆ. ಹುಲ್ಲಿನ ಅಂಕಣದ ಈ ಟೂರ್ನಿಯಲ್ಲಿ ಸ್ಪರ್ಧಿಗಳು ಕಳೆದ ಬಾರಿ ಪಡೆದ ಮೊತ್ತಕ್ಕಿಂತ ಹೆಚ್ಚು ಹಣ ಪಡೆಯಲಿದ್ದಾರೆ ಎಂದು ಆಲ್ ಇಂಗ್ಲೆಂಡ್ ಚೇರ್ಮನ್ ಡೆಬೊರಾ ಜೇವನ್ ತಿಳಿಸಿದರು.

'ನಾವು ಆಟಗಾರರ ಮಾತು ಅಲಿಸಿದ್ದೇವೆ. ಅವರೊಂದಿಗೆ ಸಮಯ ಕಳೆದಿದ್ದೇವೆ' ಎಂದು ಅವರು ಹೇಳಿದರು.

ಮೊದಲ ಸುತ್ತಿನಲ್ಲಿ ಸೋಲುವ ಆಟಗಾರ ಸುಮಾರು 76.80 ಲಕ್ಷ (66.000 ಪೌಂಡ್) ಮೊತ್ತ ಪಡೆಯಲಿದ್ದಾರೆ, ಇದು ಕಳೆದ ಬಾರಿಯ ಮೊತ್ತಕ್ಕಿಂತ ಶೇ 10ರಷ್ಟು ಏರಿಕೆಯಾಗಿದೆ. ಈ ಬಾರಿಯ ವಿಂಬಲ್ಡನ್ ಚಾಂಪಿಯನ್‌ಶಿಪ್ ಜೂನ್ 30ರಂದು ಆರಂಭವಾಗಲಿದ್ದು, ಜುಲೈ 13ರವರೆಗೆ ನಡೆಯಲಿದೆ. ಇದು ಅತ್ಯಂತ ಹಳೆಯ ಗ್ರ್ಯಾಂಡ್‌ಸ್ಲಾಮ್ ಟೂರ್ನಿಯಾಗಿದೆ.

ಲಂಕಾ ಪ್ರವಾಸದ ಏಕದಿನ ತಂಡಕ್ಕೆ ಹೊಸ ನಾಯಕನ ಆಯ್ಕೆ

ಮೆಹದಿ ಹಸನ್ ಬಾಂಗ್ಲಾ ನಾಯಕ

ಢಾಕಾ: ಮುಂದಿನ ತಿಂಗಳು ಮೂರು ಪಂದ್ಯಗಳ ಏಕದಿನ ಸರಣಿಗಾಗಿ ಶ್ರೀಲಂಕಾ ಪ್ರವಾಸ ಕೈಗೊಳ್ಳುವ ಮುನ್ನವೇ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಅಚ್ಚರಿಯ ಬೆಳವಣಿಗೆ ಎಂಬಂತೆ ತಂಡದ ನಾಯಕನ್ನು ಬದಲಾಯಿಸಿದೆ. ನಜ್ಮುಲ್ ಹೊಸೈನ್ ಶಾಂಟೊ ಬದಲಿಗೆ ಮೆಹದಿ ಹಸನ್ ಮಿರಾಜ್ ಅವರನ್ನು ನೂತನ ಏಕದಿನ ನಾಯಕರನ್ನಾಗಿ ಘೋಷಿಸಿದೆ. ಬ್ಯಾಟಿಂಗ್‌ನಲ್ಲಿ ಗಮನಹರಿಸುವ ಸಲುವಾಗಿ ಇತ್ತೀಚೆಗೆ ಶಾಂಟೊ ಅವರು ಟಿ20 ನಾಯಕತ್ವದಿಂದ ಕೆಳಗಿಳಿದಿದ್ದರು. ಆದರೆ ಏಕದಿನ ನಾಯಕನಾಗಿ ಮುಂದುವರಿಯಲು ಸಿದ್ಧರಾಗಿದ್ದರು. ಆದ್ಯಾಗೂ ಬಾಂಗ್ಲಾ ಕ್ರಿಕೆಟ್ ಮಂಡಳಿ ನೂತನ ನಾಯಕ ಆಯ್ಕೆ ಮಾಡಿದೆ.

ಮೆಹದಿ ಹಸನ್ ಅವರ ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಸ್ಥಿರ ಪ್ರದರ್ಶನ, ತಂಡವನ್ನು ಪ್ರೇರೇಪಿಸುವ ಅವರ ಸಾಮರ್ಥ್ಯ ಮತ್ತು ಮೈದಾನದ ಒಳಗೆ ಮತ್ತು ಹೊರಗೆ ಅವರ ಉತ್ಸಾಹಭರಿತ ಉಪಸ್ಥಿತಿಯು ತಂಡದ ಪರಿವರ್ತನೆಯ ಸಮಯದಲ್ಲಿ ಏಕದಿನ ತಂಡವನ್ನು ಮುನ್ನಡೆಸಲು ಸೂಕ್ತ ಎಂದು ಮಂಡಳಿ ಭಾವಿಸಿರುವುದಾಗಿ ಬಿಸಿಬಿಯ ಕ್ರಿಕೆಟ್ ಕಾರ್ಯಾಚರಣೆ ಸಮಿತಿಯ ಅಧ್ಯಕ್ಷ ನಜ್ಮುಲ್ ಅಬೆದೀನ್ ಹೇಳಿದ್ದಾರೆ.

105 ಏಕದಿನ ಪಂದ್ಯಗಳಲ್ಲಿ 1617 ರನ್ ಮತ್ತು 110 ವಿಕೆಟ್‌ಗಳೊಂದಿಗೆ, ಮಿರಾಜ್ ಪ್ರಸ್ತುತ ಐಸಿಸಿ ಏಕದಿನ ಶ್ರೇಯಾಂಕದಲ್ಲಿ ಆಲ್‌ರೌಂಡರ್‌ಗಳಲ್ಲಿ 4ನೇ ಸ್ಥಾನದಲ್ಲಿದ್ದಾರೆ. ಮೆಹದಿ ಹಸನ್ ಈ ಹಿಂದೆ ನಾಲ್ಕು ಏಕದಿನ ಪಂದ್ಯಗಳಲ್ಲಿ ರಾಷ್ಟ್ರೀಯ ತಂಡವನ್ನು ಹಂಗಾಮಿ ನಾಯಕನಾಗಿ ಮುನ್ನಡೆಸಿದ್ದರು.

'ಈ ಜವಾಬ್ದಾರಿಯನ್ನು ವಹಿಸಿಕೊಂಡಿರುವುದು ನನಗೆ ಸಿಕ್ಕ ದೊಡ್ಡ ಗೌರವ' ಎಂದು ಮೆಹದಿ ಹಸನ್ ತಿಳಿಸಿದ್ದಾರೆ.

ಕಲಾ ಸೇವೆಯಲ್ಲಿ ನಾಲ್ಕು ದಶಕ ಧನ್ಯವಾದ ಹೇಳಿದ ಶಿವಣ್ಣ



ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಚಿತ್ರರಂಗಕ್ಕೆ ಬಂದು ನಾಲ್ಕು ದಶಕಗಳೇ ಕಳೆದಿವೆ. ನಲವತ್ತು ವರ್ಷಗಳಲ್ಲಿ ನೂರ ಇಪ್ಪತ್ತಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದು, ಹಲವು ಹಿಟ್ ಚಿತ್ರಗಳನ್ನು ನೀಡಿದ್ದಾರೆ. ಆನಂದ್ ಚಿತ್ರದಿಂದ ಶುರುವಾದ ಶಿವಣ್ಣ ಅವರ ಸಿನಿ ಪಯಣ ನಲವತ್ತು ವರ್ಷಗಳನ್ನು ಪೂರೈಸಿದೆ. ಈ ಸಿನಿ ಜರ್ನಿಯಲ್ಲಿ ರಥಸಪ್ತಮಿ, ಶಿವಮೆಚ್ಚಿದ ಕಣ್ಣಪ್ಪ, ಮುತ್ತಣ್ಣ, ಓಂ... ಹೀಗೆ ಒಂದಾ ಎರಡ ಹಲವು ಹಿಟ್ ಸಿನಿಮಾಗಳಲ್ಲಿ ನಟಿಸಿದ್ದಾರೆ. ಕನ್ನಡ ಮಾತ್ರವಲ್ಲ ಪರಭಾಷೆಯಲ್ಲಿಯೂ ಶಿವರಾಜ್ ಕುಮಾರ್ ಅವರಿಗೆ ಭರ್ಜರಿ ಬೇಡಿಕೆಯಿದೆ. ರಜನಿಕಾಂತ್ ಅಭಿನಯದ ಜೈಲರ್, ಧನುಷ್ ನಟಿಸಿ ಕ್ಯಾಪ್ಟನ್ ಮಿಲ್ಲರ್ ಸಿನಿಮಾಗಳಲ್ಲಿಯೂ ಶಿವರಾಜ್ ಕುಮಾರ್ ಪವರ್ ಫುಲ್ ರೋಲ್ ನಿರ್ವಹಿಸಿದರು. ಈಗ ಶಿವಣ್ಣ ಟಾಲಿವುಡ್ ಅಂಗಳದಲ್ಲಿಯೂ ಸದ್ದು ಮಾಡುತ್ತಿದ್ದಾರೆ. ಚಿತ್ರರಂಗದಲ್ಲಿ ನಲವತ್ತ ವರ್ಷ ಪೂರೈಸಿದ ಶಿವಣ್ಣ ಅವರಿಗೆ ಭಾರತ್ತಿಯ ಚಿತ್ರರಂಗದ ದಿಗ್ಗಜರು ಶುಭಕೋರಿದ್ದಾರೆ.

ಇಷ್ಟು ವರ್ಷದ ಸಿನಿ ಜರ್ನಿಯಲ್ಲಿ ತಮಗೆ ಸಹಕರಿಸಿದ, ಪ್ರೋತ್ಸಾಹಿಸಿದ ಎಲ್ಲರಿಗೂ ಶಿವಣ್ಣ ಧನ್ಯವಾದ ಸಮರ್ಪಿಸಿದ್ದಾರೆ. ಈ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಪತ್ರ ಬರೆದಿದ್ದಾರೆ. ನಾನು ಚಿತ್ರರಂಗಕ್ಕೆ ಬಂದು ನಲವತ್ತು ವರ್ಷಗಳಾಗಿವೆ. ಈ ನಾಲ್ಕು ದಶಕಗಳ ಸುಧೀರ್ಘ ಸಿನಿಮಾ ಪಯಣದಲ್ಲಿ ನನ್ನೊಂದಿಗಿದ್ದು, ಅಕ್ಕರೆಯಿಂದ ಹರಸಿ ಹಾರೈಸಿದ ನನ್ನೆಲ್ಲಾ ಪ್ರೀತಿಯ ಅಭಿಮಾನಿ ದೇವರುಗಳಿಗೆ, ಶುಭಕೋರಿದ ಕನ್ನಡ ಹಾಗೂ ಪರಭಾಷಾ ಚಿತ್ರರಂಗದ ಕಲಾವಿದರು, ನಿರ್ಮಾಪಕರು, ನಿರ್ದೇಶಕರು ಮತ್ತು ನನ್ನೆಲ್ಲಾ ಮಿತ್ರರಿಗೆ, ಸದಾ ನನ್ನ ಬೆನ್ನೆಲುಬಾಗಿರುವ ನನ್ನ ಕುಟುಂಬದರಿಗೆ ನಾನು ಚಿರಋಣಿ. ನಿಮ್ಮೆಲ್ಲರ ಆಶೀರ್ವಾದ ಎಂದಿಗೂ ಹೀಗೆ ಇರಲಿ ಎಂದು ಶಿವಣ್ಣ ಬರೆದುಕೊಂಡಿದ್ದಾರೆ. ಸದ್ಯ ಶಿವರಾಜ್ ಕುಮಾರ್ ಎ ಫಾರ್ ಆನಂದ್ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ತಿಮ್ಮನ ಮೊಟ್ಟೆಗಳು ಟ್ರೇಲರ್ ರಿಲೀಸ್

ರಕ್ಷಿತ್ ತೀರ್ಥಹಳ್ಳಿ ಕಥೆ ಬರೆದು ನಿರ್ದೇಶನ ಮಾಡಿರುವ ತಿಮ್ಮನ ಮೊಟ್ಟೆಗಳು ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಹಿರಿಯ ನಿರ್ದೇಶಕ ಪಿ.ಶೇಷಾದ್ರಿ, ಉರಗ ತಜ್ಞ ಗೌರಿ ಶಂಕರ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ನಾನು ಈ ಚಿತ್ರವನ್ನು ಕೊಲ್ಕತ್ತಾ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನೋಡಿದ್ದೇನೆ. ಈಗಿನ ಪರಿಸ್ಥಿತಿಗೆ ತಕ್ಕಂತಹ ಕಥಾವಸ್ತುವನ್ನು ನಿರ್ದೇಶಕರು ಆಯ್ಕೆ ಮಾಡಿಕೊಂಡಿದ್ದಾರೆ. ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದು ಪಿ.ಶೇಷಾದ್ರಿ ಮೆಚ್ಚುಗೆ ವ್ಯಕ್ತಪಡಿಸಿದರು.

ತಿಮ್ಮನ ಮೊಟ್ಟೆಗಳು ಕಾಳಿಂಗ ಸರ್ಪದ ಸುತ್ತ ಸಾಗುವ ಕಥೆಯಾಗಿದ್ದು, ಅಳಿವಿನಂಚಿನಲ್ಲಿರುವ ಕಾಳಿಂಗನನ್ನು ಸಂರಕ್ಷಿಸುವ ಕುರಿತ ಸಂದೇಶವನ್ನು ಹೊತ್ತು ಬಂದಿದೆ. ಪಶ್ಚಿಮ್ಮ ಘಟ್ಟದ ಸುಂದರ ತ್ರಿವದಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ತಿಮ್ಮನ ಪಾತ್ರದಲ್ಲಿ ಕೇಶವ್ ಗುತ್ತಳಿಕೆ ನಟಿಸಿದ್ದು, ಸುಚೇಂದ್ರ ಪ್ರಸಾದ್ ಉರಗ ತಜ್ಞರ ಪಾತ್ರ ನಿರ್ವಹಿಸಿದ್ದಾರೆ. ಆಶಿಕಾ ಸೋಮಶೇಖರ್, ಪ್ರಗತಿ ಪ್ರಭು, ರಘು ರಾಮನಕೊಪ್ಪ ಮುಂತಾದವರು ತಾರಾಗಣದಲ್ಲಿದ್ದಾರೆ.

ಪ್ರಕೃತಿಮತ್ತು ಮನುಷ್ಯನ ನಡುವಿನ ಸೂಕ್ಷ್ಮ ಸಂವೇದನೆಗಳನ್ನು ಒಳಗೊಂಡಿರುವ ಕಥಾವಸ್ತುವನ್ನು ನಿರ್ದೇಶಕರು ಆಯ್ಕೆ ಮಾಡಿಕೊಂಡಿದ್ದಾರೆ. ನನ್ನ ಪಾತ್ರ ಕೂಡ ಚೆನ್ನಾಗಿದೆ ಎಂದು ಹಿರಿಯ ನಟ ಸುಚೇಂದ್ರ ಪ್ರಸಾದ್ ತಿಳಿಸಿದರು. ಶ್ರೀಕೃಷ್ಣ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಆದರ್ಶ ಅಯ್ಯಂಗಾರ್ ಚಿತ್ರ ನಿರ್ಮಾಣ ಮಾಡಿದ್ದಾರೆ. ಇದೇ ತಿಂಗಳ 27ರಂದು ಚಿತ್ರ ತೆರೆಗೆ ಬರಲಿದೆ.

ಎಸ್. ಎಲ್. ಭೈರಪ್ಪ ಪ್ರತಿಷ್ಠಾನ (ರಿ)
ರಾಜರಾಜೇಶ್ವರಿ ನಗರ, ಬೆಂಗಳೂರು-560098
ಪ್ರತಿಷ್ಠಾನದ ಉದ್ಘಾಟನಾ ಸಮಾರಂಭ
ದಿನಾಂಕ: 14 ಜೂನ್ 2025
ಶನಿವಾರ ಸಂಜೆ ಐದು ಗಂಟೆಗೆ
ಸ್ಥಳ:
ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜ್ ಸಭಾಂಗಣ
ಬಸವನಗುಡಿ ರಸ್ತೆ, ಬೆಂಗಳೂರು: 560019
ಸಹೃದಯರಿಗೆ ಸ್ವಾಗತ
(ಅಧ್ಯಕ್ಷರು ಮತ್ತು ಟ್ರಸ್ಟಿಗಳು)